ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 12 ಭಾನುವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 26 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೇ 20, ಸರ್ಕಾರಕ್ಕೆ ಒಂದು ವರ್ಷ: ಲೋಕಸಭೆ ಚುನಾವಣೆಯಲ್ಲಿ 18ಕ್ಕೂ ಅಧಿಕ ಸ್ಥಾನ ಗೆದ್ದರೆ

ಸಂಭ್ರಮ ಇಲ್ಲವೇ ಸರಳ ಆಚರಣೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾಲೋಚನೆ ● ಮೈಸೂರು ಸೇರಿದಂತೆ ನಾಲ್ಕು ಕಡೆ ಸಾಧನೆ ಸಮಾವೇಶಕ್ಕೆ ಚಿಂತನೆ



ಬೆಂಗಳೂರು, ಮೇ 11(ಕೆಎಂಶಿ)– ಲೋಕಸಭಾ ಚುನಾವಣೆಯಲ್ಲಿ 18ಕ್ಕೂ ಹೆಚ್ಚು ಸ್ಥಾನಗಳನ್ನು ಪಕ್ಷ ಗಳಿಸಿದರೆ ಮುಖ್ಯಮಂತ್ರಿ ಸಿದ್ದರಾಮಯ್ಯ, ತಮ್ಮ ಸರ್ಕಾರದ ಮೊದಲ ವರ್ಷ ಪೂರ್ಣಗೊಳಿಸಿದ ಸಾಧನಾ–ಸಂಭ್ರಮ ಆಚರಣೆಗೆ ತೀರ್ಮಾನಿಸಿದ್ದಾರೆ.

ಸಿದ್ದರಾಮಯ್ಯ ಸರ್ಕಾರ ಮೇ 20ಕ್ಕೆ ಒಂದು ವರ್ಷ ಪೂರೈಸಲಿದೆ, ಅಲ್ಲದೆ ಜೂನ್ 20ಕ್ಕೆ ತಮ್ಮ ಸರ್ಕಾರದ ಮಹತ್ವದ ಐದು ಗ್ಯಾರಂಟಿ ಯೋಜನೆಗಳಿಗೆ ಚಾಲನೆ ನೀಡಿದ ದಿನ. ಎರಡೂ ಸಾಧನೆಗಳನ್ನು ಒಟ್ಟಾಗಿ ಸಂಭ್ರಮಿಸಲು ಕಾಂಗ್ರೆಸ್ ಸರ್ಕಾರ ನಿರ್ಧರಿಸಿದೆ. ಚುನಾವಣಾ ಮಾದರಿ ನೀತಿ ಸಂಹಿತೆ ಜೂನ್ 6ರವರೆಗೆ ಇರುವುದರಿಂದ ಇದಕ್ಕೂ ಮೊದಲು ಸರ್ಕಾರಕ್ಕೆ ಒಂದು ವರ್ಷ ತುಂಬಿದ ಹಬ್ಬ ಆಚರಿಸಿಕೊಳ್ಳಲು ಸಾಧ್ಯವಿಲ್ಲ. ಸಂಭ್ರಮಾಚರಣೆಗಾಗಿ ಸರ್ಕಾರ ಮಾಡಿದ ಮನವಿಯನ್ನು ಆಯೋಗ ತಿರಸ್ಕರಿಸಿದೆ. ಹೀಗಾಗಿ ಲೋಕಸಭಾ ಚುನಾವಣೆ ಫಲಿತಾಂಶದ ನಂತರವೇ ಆಚರಣೆಯ ರೂಪರೇಷೆ ನಿರ್ಧಾರವಾಗಲಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ 18 ಸ್ಥಾನಗಳ ನಿರೀಕ್ಷೆಯಲ್ಲಿರುವ ಮುಖ್ಯಮಂತ್ರಿ ಅವರು, ಆ ಗುರಿ ಮುಟ್ಟಿ ಇಡೀ ರಾಷ್ಟ್ರದಲ್ಲಿ ಬೇರೆ ಯಾವುದೇ ರಾಜ್ಯದಲ್ಲಿ ಕಾಂಗ್ರೆಸ್ ಇಂತಹ ಸಾಧನೆ ಮಾಡದಿದ್ದರೆ ಅದನ್ನು ದೊಡ್ಡ ಸಂಭ್ರಮವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ. ಒಂದು ವೇಳೆ ತಮ್ಮ ನಿರೀಕ್ಷೆಯ ಗುರಿ ಮುಟ್ಟದಿದ್ದರೆ, ಸಂಭ್ರಮವನ್ನು ಸರಳವಾಗಿ ಆಚರಿಸಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ. ಇದೇ ಉದ್ದೇಶಕ್ಕಾಗಿ ಮುಖ್ಯಮಂತ್ರಿ ಅವರು ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗಾಗಿ ಹೋರಾಟ ನಡೆಸಿರುವ ಅಂಕಿ–ಅಂಶಗಳನ್ನು ಬಿಡುಗಡೆ ಮಾಡಿದ್ದಾರೆ. ಚುನಾವಣಾ ಸಂದರ್ಭದಲ್ಲಿ ಯಾವುದೇ ಮುಖ್ಯಮಂತ್ರಿಗಳು ತಾವು ಎಷ್ಟು ಚುನಾವಣಾ ಭಾಷಣ, ರೋಡ್ ಶೋ ನಡೆಸಿದ ವಿವರಗಳನ್ನು ಇತಿಹಾಸದಲ್ಲೇ ಬಹಿರಂಗಪಡಿಸಿರಲಿಲ್ಲ.

ಆದರೆ, ಇವರು, ಕಳೆದ ನಾಲ್ಕು ತಿಂಗಳಿಂದ ಚುನಾವಣಾ ಪೂರ್ವ ಮತ್ತು ಚುನಾವಣಾ ದಿನಾಂಕ ಪ್ರಕಟಣೆ ನಂತರ ಮಾಡಿದ ಪ್ರಚಾರಕ್ಕೆ ಸಂಬಂಧಿಸಿದಂತೆ ಪೂರ್ಣ ಮಾಹಿತಿ ನೀಡಿದ್ದಾರೆ. ಇದು ಕಾಂಗ್ರೆಸ್ ವಲಯದಲ್ಲೂ ಚರ್ಚೆಗೆ ಗ್ರಾಸವಾಗಿದೆ. ಹೆಚ್ಚು ಸ್ಥಾನ ಗಳಿಸಿದರೆ ● 9ನೇ ಪುಟಕ್ಕೆ

ಅತ್ಯಾಚಾರ ಪ್ರಕರಣದಲ್ಲಿ ವಕೀಲ ದೇವರಾಜೇಗೌಡ ಬಂಧನ

● 14 ದಿನ ನ್ಯಾಯಾಂಗ ಬಂಧನ ● ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಚಾಮಗೋಚರವಾಗಿ ವಾಗ್ದಾಳಿ ನಡೆಸಿದ್ದ ದೇವರಾಜೇಗೌಡ




ಹಾಸನ, ಮೇ 11– ಹಾಸನ ಜೆಡಿಎಸ್ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ಪೆನ್‌ಡ್ರೈವ್ ಪ್ರಕರಣದಲ್ಲಿ ಶನಿವಾರ ಹಿರಿಯೂರು ಗ್ರಾಮಾಂತರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದ ವಕೀಲ ಹಾಗೂ ಬಿಜೆಪಿ ಮುಖಂಡ ದೇವರಾಜೇಗೌಡರನ್ನು ಇಂದು ಅತ್ಯಾಚಾರ ಆರೋಪದಡಿ ಹೊಳೆನರಸೀಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ನಿನ್ನೆ ಚಿತ್ರದುರ್ಗ ಬಳಿಯ ಕೆ.ಆರ್.ಹಳ್ಳಿ ಗೇಟ್ ಬಳಿ ಹಿರಿಯೂರು ಗ್ರಾಮಾಂತರ ಪೊಲೀಸರು ದೇವರಾಜೇಗೌಡ ಅವರನ್ನು ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿದ್ದ ಎರಡು ಕೇಸ್‌ಗಳ ಸಂಬಂಧ ವಶಕ್ಕೆ ಪಡೆದಿದ್ದರು. ನಂತರ ಅಲ್ಲಿಗೆ ತೆರಳಿದ ಹೊಳೆನರಸೀಪುರ ಸರ್ಕಲ್ ಇನ್ಸ್‌ಪೆಕ್ಟರ್ ನೇತೃತ್ವದ ತಂಡ ದೇವರಾಜೇಗೌಡರನ್ನು ತಮ್ಮ ವಶಕ್ಕೆ ಪಡೆದು ಹೊಳೆನರಸೀಪುರಕ್ಕೆ ಕರೆತಂದ ನಂತರ ಅವರ ● 9ನೇ ಪುಟಕ್ಕೆ

ಶ್ರೀನಿವಾಸ ಪ್ರಸಾದರ ಹೋರಾಟದ ಬದುಕು ಯುವಕರಿಗೆ ಆದರ್ಶ

ಸ್ವಾಭಿಮಾನಿಗೆ ಸಾವಿರದ ನುಡಿ ನಮನದಲ್ಲಿ ಸಿಎಂ ಸಿದ್ದರಾಮಯ್ಯ ಅಭಿಮತ

● ಪ್ರಸಾದರ ದಿಟ್ಟ ಹೋರಾಟದ ಬಗ್ಗೆ ಪ್ರಶಂಸೆ ● ಟೀಕೆಗಳಿದ್ದರೂ ಸ್ನೇಹ ಸಂಬಂಧ ಗಟ್ಟಿಯಾಗಿತ್ತು



ಮೈಸೂರಿನ ಮಾನಂದವಾಡಿ ರಸ್ತೆಯ ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ನಲ್ಲಿ ಶನಿವಾರ ನಡೆದ ಶ್ರೀನಿವಾಸ ಪ್ರಸಾದ್ ಶ್ರದ್ಧಾಂಜಲಿ– ಸ್ವಾಭಿಮಾನಿಗೆ ಸಾವಿರದ ನುಡಿ ನಮನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ರೀನಿವಾಸ ಪ್ರಸಾದ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಶ್ರೀನಿವಾಸ ಪ್ರಸಾದರ ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮೇ11(ಬಿಎಲ್‌ಯು)– ದಿಟ್ಟ ಹೋರಾಟಗಾರ ವಿ.ಶ್ರೀನಿವಾಸ ಪ್ರಸಾದ್ ಅಗಲಿಕೆಯಿಂದ ಹಳೆ ತಲೆಮಾರಿನ ರಾಜಕಾರಣಿಗಳ ಕೊಂಡಿಯೊಂದು ಕಳಚಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಮಾನಂದವಾಡಿ ರಸ್ತೆಯ ಸಿಲ್ಕ್ ಫ್ಯಾಕ್ಟರಿ ಬಳಿಯ ಡಾ.ಬಿ.ಆರ್. ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್ ನಲ್ಲಿ ಇಂದು ಶ್ರೀನಿವಾಸ ಪ್ರಸಾದ್ ಶ್ರದ್ಧಾಂಜಲಿ– ಸ್ವಾಭಿಮಾನಿಗೆ ಸಾವಿರದ ನುಡಿ ನಮನ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶ್ರೀನಿವಾಸ ಪ್ರಸಾದ್ ನಮ್ಮನ್ನು ಅಗಲಿರಬಹುದು, ಆದರೆ ಅವರ ವಿಚಾರಧಾರೆಗಳು, ತತ್ವಾದರ್ಶ ಹಾಗೆ ಉಳಿದಿದೆ ಎಂದರು. ತಮ್ಮ ಬದುಕಿನ ಉದ್ದಕ್ಕೂ ಅಸಮಾನತೆ, ಅನ್ಯಾಯದ ವಿರುದ್ಧ ಹೋರಾಟ ಮಾಡಿಕೊಂಡು ಬಂದ ಶ್ರೀನಿವಾಸ ಪ್ರಸಾದ್ ಸಾರ್ಥಕ ಜೀವನ ಕಂಡಿದ್ದಾರೆ. ಈ ಮೂಲಕ ಶ್ರೀನಿವಾಸ ಪ್ರಸಾದ್ ಹೋರಾಟದ ಬದುಕು ಇವತ್ತಿನ ಯುವಕರಿಗೆ ಆದರ್ಶವಾಗಿದೆ. ಆದರೆ ಹಳೆ ತಲೆಮಾರಿನ ರಾಜಕಾರಣಿಗಳ ಕೊಂಡಿಯೊಂದು ಕಳಚಿದ್ದು, ಸಜ್ಜನ ರಾಜಕಾರಣಿಯನ್ನು ನಾವು ಕಳೆದುಕೊಂಡಿದ್ದೇವೆ ಎಂದು ಸಿದ್ದರಾಮಯ್ಯ ನೋವಿನಿಂದ ನುಡಿದರು. ತಮ್ಮ ರಾಜಕೀಯ ಕೊನೆಯ ದಿನಗಳಲ್ಲಿ ಸ್ವಾಭಿಮಾನಕ್ಕೆ ಧಕ್ಕೆಯಾಯಿತು ಎಂದು ರಾಜಕೀಯವಾಗಿ ದಿಟ್ಟ ನಿರ್ಧಾರ ತೆಗೆದುಕೊಳ್ಳುತ್ತಿದ್ದರು ಎಂದರು. ಬಡವರು, ದಲಿತರು, ಹಿಂದುಳಿದವರಿಗೆ ಯಾವಾಗಲೂ ಸ್ವಾಭಿಮಾನ ಎನ್ನುವುದು ಇರಲೇಬೇಕು. ● 9ನೇ ಪುಟಕ್ಕೆ

ನಿಶ್ಚಿತಾರ್ಥವಾಗಿದ್ದ ಬಾಲಕಿ ರುಂಡದೊಂದಿಗೆ ಪರಾರಿಯಾಗಿದ್ದ ಹಂತಕನ ಬಂಧನ

ಮದುವೆ ಮುಂದೂಡಿಕೆಯಾಗಿದ್ದಕ್ಕೆ ಅಮಾಯಕರ ಮೇಲೆ ರಿವೇಂಜ್ ತೀರಿಸಿಕೊಂಡಿದ್ದ ಕೊಲೆಗಾರ



ಪ್ರಕಾಶ್

ಮಡಿಕೇರಿ, ಮೇ 11–ಸೋಮವಾರಪೇಟೆ ತಾಲೂಕಿನ ಕುಗ್ರಾಮ ಸೂರ್ಲಬ್ಬಿ ಗ್ರಾಮದ ಶಾಲಾ ಬಾಲಕಿ ಮೀನ(16) ಎಂಬಾಕೆಯನ್ನು ಕೊಲೆ ಮಾಡಿ, ಆಕೆಯ ರುಂಡವನ್ನು ಕಡಿದು ತನ್ನೊಂದಿಗೆ ಹೊತ್ತೊಯ್ದಿದ್ದ ಹಂತಕನನ್ನು ಕೊಡಗು ಪೊಲೀಸರು ಅಂತೂ ಬಂಧಿಸಿದ್ದಾರೆ.

ಬಾಲಕಿ ಮೀನಾ ಜೊತೆ ಮೇ.9ರಂದು ಬೆಳಗ್ಗೆ ನಿಶ್ಚಿತಾರ್ಥ ಮಾಡಿಕೊಂಡಿದ್ದ ಹಮ್ಮಿಯಾಲ ಗ್ರಾಮದ ನಿವಾಸಿ ಮೊಣ್ಣಂಡ ಪ್ರಕಾಶ್(34) ಬಂಧಿತನಾಗಿದ್ದು, ಶನಿವಾರ ಬೆಳಗ್ಗೆ ಗರ್ವಾಲೆ–ಸೂರ್ಲಬ್ಬಿ ಗ್ರಾಮದ ನಡುವೆ ಈತನನ್ನು ಬಂಧಿಸಿದ ಪೊಲೀಸರು ಠಾಣೆಗೆ ಕರೆದೊಯ್ದು ತೀವ್ರ ವಿಚಾರಣೆ ನಡೆಸಿದ್ದಾರೆ. ಈತನಿಂದ ಮರ ಕಡಿಯುವ ಕತ್ತಿ, ಒಂಟಿ ನಳಿಕೆ ಬಂದೂಕು ಹಾಗೂ ಕಾಡತೂಸುಗಳನ್ನು ವಶಕ್ಕೆ ಪಡೆಯಲಾಗಿದೆ. ಮೀನಾಳ ಕೊಲೆ ಮಾಡಿದ್ದ ಸ್ಥಳದಿಂದ ಸುಮಾರು 100 ಮೀ. ದೂರದ ಪೊದೆಯೊಂದರಲ್ಲಿ ● 6ನೇ ಪುಟಕ್ಕೆ

ಮೈಸೂರಲ್ಲಿ ನಿರಂತರ ಮಳೆ ಹಿನ್ನೆಲೆ ಪಾಲಿಕೆಯಿಂದ ಚರಂಡಿ ಸ್ವಚ್ಛತೆ, ಮರಗಳ ಟ್ರಿಮ್ಮಿಂಗ್ ಕಾರ್ಯ





ಮೈಸೂರು, ಮೇ 11(ಆರ್‌ಕೆ)– ನಿರಂತರ ಮಳೆ ಬೀಳುತ್ತಿರುವುದರಿಂದ ಹಾನಿ ತಡೆಯಲು ಮೈಸೂರು ಮಹಾ ನಗರ ಪಾಲಿಕೆಯು ಮಳೆ ನೀರು, ಒಳ ಚರಂಡಿ, ರಾಜಕಾಲುವೆ ಸ್ವಚ್ಛತೆ ಹಾಗೂ ಅಪಾಯ ತಂದೊಡ್ಡುವ ಮರಗಳ ರೆಂಬೆ ತೆರವುಗೊಳಿಸುವ ಕಾರ್ಯವನ್ನು ತೀವ್ರಗೊಳಿಸಿದೆ. ಮಳೆ, ಗಾಳಿಗೆ ಮರಗಳು ಬುಡ ಸಮೇತ ಅಥವಾ ರೆಂಬೆಗಳು ಮುರಿದು ಬೀಳುತ್ತಿದ್ದು, ಅಲ್ಲಲ್ಲಿ ವಾಹನ ಸಂಚಾರಕ್ಕೆ ಅಪಾಯ ಉಂಟಾಗುತ್ತಿದ್ದು, ಪ್ರಾಣಾಪಾಯ ತಂದೊಡ್ಡುವ ಸಾಧ್ಯತೆ ಇರುವುದರಿಂದ ಎಚ್ಚೆತ್ತ ನಗರ ಪಾಲಿಕೆ ಅಧಿಕಾರಿಗಳು, ಜೆಸಿಬಿ, ಟ್ರಿಮ್ಮರ್‌ಗಳನ್ನು ಬಳಸಿ ಒಣಗಿದ, ಟೊಳ್ಳಾಗಿ ಬೀಳುವಂತಿರುವ ರೆಂಬೆಗಳನ್ನು ಕತ್ತರಿಸಿ ತೆರವುಗೊಳಿಸುತ್ತಿದ್ದಾರೆ.

ಅಭಯ ತಂಡ, ತೋಟಗಾರಿಕಾ ವಿಭಾಗದ ಸಿಬ್ಬಂದಿ ಎಲ್ಲಾ 9 ವಲಯ ಕಚೇರಿ ವ್ಯಾಪ್ತಿಗಳಲ್ಲಿ ತಲಾ 10 ಮಂದಿಯಂತೆ ತೆರವು ಕಾರ್ಯಾಚರಣೆ ನಡೆಸುತ್ತಿದ್ದು, ಸಮರೋಪಾದಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಅದೇ ರೀತಿ ಗಿಡ–ಗಂಟಿ ಬೆಳೆದು ಕಸಕಡ್ಡಿ ಶೇಖರಣೆಯಾಗಿ ಮಳೆ ನೀರು ಹರಿದು ಹೋಗಲು ಅಡ್ಡಿಯಾಗಿರುವ ಚರಂಡಿಗಳನ್ನು ಸ್ವಚ್ಛಗೊಳಿಸಲಾಗುತ್ತಿದೆ. ತೆರೆದ ದೊಡ್ಡ ಮೋರಿಗಳು, ಕಾಲುವೆಗಳು, ಕೆರೆಗಳಿಗೆ ಮಳೆ ನೀರು ಹರಿದು ಹೋಗಲು ಮಾಡಿರುವ ರಾಜಕಾಲುವೆಗಳ ಹೂಳು ತೆಗೆಯುವ ಕಾರ್ಯವನ್ನು ಪಾಲಿಕೆ ಅಧಿಕಾರಿಗಳು ಕ್ಷಿಪ್ರ ಗತಿಯಲ್ಲಿ ಕೈಗೆತ್ತಿಕೊಂಡಿದ್ದು, ಆಯಾ ವಲಯಾಧಿಕಾರಿಗಳು, ಅಭಿವೃದ್ಧಿ ಅಧಿಕಾರಿಗಳು ಹಾಗೂ ಇಂಜಿನಿಯರ್‌ಗಳು ಬೆಳಗ್ಗೆಯಿಂದ ಸಂಜೆವರೆಗೂ ಸ್ವಚ್ಛತಾ ಕಾಮಗಾರಿಯಲ್ಲೇ ನಿರತರಾಗಿದ್ದಾರೆ. ಭಾರಿ ಮಳೆಯಾದಲ್ಲಿ ಉಂಟಾಗಬಹುದಾದ ಅಪಾಯ ತಪ್ಪಿಸಲು ಆಯುಕ್ತ ಡಾ. ಎನ್.ಎನ್.ಮಧು ಅವರ ನಿರ್ದೇಶನದಂತೆ ಕಾರ್ಯಾಚರಣೆ ತೀವ್ರವಾಗಿದ್ದು, ವಾರದೊಳಗಾಗಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದ್ವಿತೀಯ ಪಿಯುಸಿ ಪರೀಕ್ಷೆ–2 ಮೇ 16ಕ್ಕೆ ಅಂತ್ಯ

ಮೇ 18ರೊಳಗೆ ಮೌಲ್ಯಮಾಪನ; ಮೇ 24ರೊಳಗೆ ಫಲಿತಾಂಶ


ಮೈಸೂರು, ಮೇ 11(ಆರ್‌ಕೆ)– 2024ರ ಮಾರ್ಚ್ ತಿಂಗಳಲ್ಲಿ ನಡೆದ ವಾರ್ಷಿಕ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ನಡೆಯುತ್ತಿರುವ 2ನೇ ಪರೀಕ್ಷೆ ಮೇ 16ಕ್ಕೆ ಮುಕ್ತಾಯವಾಗಲಿದೆ.

ಮೈಸೂರು ನಗರದ 8 ಹಾಗೂ ತಾಲೂಕುಗಳ 6 ಸೇರಿ 13 ಕೇಂದ್ರಗಳಲ್ಲಿ ನಡೆಯುತ್ತಿರುವ ಪರೀಕ್ಷೆಗೆ ಜಿಲ್ಲೆಯಾದ್ಯಂತ ಒಟ್ಟು 8,764 ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದರು. ಮೇ 13ರಿಂದ ಮೈಸೂರಿನ ವಿವಿ ಮೊಹಲ್ಲಾ ಮಹಿಳಾ ಪದವಿ ಪೂರ್ವ ಕಾಲೇಜು ಮತ್ತು ದೇವರಾಜ ಮೊಹಲ್ಲಾದ ದೇವರಾಜ ಪದವಿ ಪೂರ್ವ ಕಾಲೇಜುಗಳಲ್ಲಿ ಮೌಲ್ಯಮಾಪನಾ ಕಾರ್ಯ ಆರಂಭವಾಗಲಿದ್ದು, ಮೇ 18ರೊಳಗಾಗಿ ಪೂರ್ಣಗೊಳಿಸಿ ಮೇ 24ರೊಳಗಾಗಿ ಫಲಿತಾಂಶ ಪ್ರಕಟಿಸುವಂತೆ ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆಯು ಪರೀಕ್ಷಾ ಮಂಡಳಿಗೆ ಸೂಚನೆ ನೀಡಿದೆ.

2ನೇ ಪರೀಕ್ಷೆಯಲ್ಲೂ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮತ್ತೊಂದು ಪರೀಕ್ಷೆ ಬರೆಯಲು ಅವಕಾಶ ನೀಡಲಿದ್ದು, 3ನೇ ಪರೀಕ್ಷೆಯು ಜೂನ್ ತಿಂಗಳಲ್ಲಿ ನಡೆಯಲಿದೆ. ವೇಳಾಪಟ್ಟಿಯನ್ನು ಮೇ ಅಂತ್ಯದ ವೇಳೆಗೆ ಪ್ರಕಟಿಸಲಾಗುವುದು. ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಥಮ ವರ್ಷದ ಪಿಯುಸಿಗೆ ಸೇರಲು ಎಲ್ಲಾ ಕಾಲೇಜುಗಳಲ್ಲೂ ಅರ್ಜಿ ನಮೂನೆಗಳನ್ನು ವಿತರಿಸಲಾಗುತ್ತಿದ್ದು, ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ ಎಂದು ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪ ನಿರ್ದೇಶಕ ಮರಿಸ್ವಾಮಿ ತಿಳಿಸಿದ್ದಾರೆ.

ಸರ್ಕಾರ ಪತನ; ಕುಮಾರಸ್ವಾಮಿ ಹಗಲುಗನಸು

ಬೆಂಗಳೂರು, ಮೇ 11(ಕೆಎಂಶಿ)– ಲೋಕಸಭಾ ಚುನಾವಣೆ ನಂತರ ರಾಜ್ಯ ಸರ್ಕಾರ ಉರುಳಲಿದೆ ಎನ್ನುವ ಎಚ್.ಡಿ. ಕುಮಾರಸ್ವಾಮಿ ಮಾತು ಬರೀ ಹಗಲು ಗನಸು ಎಂದು ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಇಂದಿಲ್ಲಿ ವ್ಯಂಗ್ಯವಾಡಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ರಾಜ್ಯದಲ್ಲಿ ಕನಿಷ್ಠ 20 ಕ್ಷೇತ್ರಗಳಲ್ಲಿ ಗೆಲ್ಲಲಿದೆ, ವಿಜಯಪುರದಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ಒಂದು ಲಕ್ಷ ಮತಗಳ ಅಂತರದಿಂದ ಜಯಭೇರಿ ಬಾರಿಸಲಿದ್ದಾರೆ ಎಂದರು. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಮತದಾರರ ಮನ ಗೆದ್ದಿವೆ, ಫಲಿತಾಂಶದ ನಂತರ ಜೆಡಿಎಸ್ ಗತಿ ಏನಾಗಲಿದೆ, ಕಾದು ನೋಡೋಣ. ಜೆಡಿಎಸ್ ಪಕ್ಷದ ಅನೇಕರು ಕಾಂಗ್ರೆಸ್ಸಿನ ಸಂಪರ್ಕದಲ್ಲಿದ್ದಾರೆ, ಪೆನ್‌ಡ್ರೈವ್ ಪ್ರಕರಣ ಆ ಪಕ್ಷಕ್ಕೆ ತಲೆನೋವಾಗಿ ಪರಿಣಮಿಸಿದೆ. ಪ್ರಜ್ವಲ್ ರೇವಣ್ಣ ಅವರ ಪೆನ್‌ಡ್ರೈವ್ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಕುಮಾರಸ್ವಾಮಿ ರಾಜ್ಯಪಾಲರಿಗೆ ಮನವಿ ಮಾಡಿದ್ದಾರೆ, ಬಿಜೆಪಿಯಿಂದ ಕ್ಲೀನ್‌ಚಿಟ್ ಪಡೆದುಕೊಳ್ಳುವುದು ಇದರ ಉದ್ದೇಶವಾಗಿದೆ.

ಸದ್ಯಕ್ಕೆ ಪ್ರಕರಣ ಕುರಿತು ಎಸ್‌ಐಟಿ ತನಿಖೆ ನಡೆಸುತ್ತಿದ್ದು, ತನಿಖಾ ಸಂಸ್ಥೆ ತನ್ನ ಕೆಲಸ ಮಾಡಲಿ, ಈ ಬಗ್ಗೆ ಸಚಿವನಾಗಿ ಯಾವುದೇ ಪ್ರತಿಕ್ರಿಯೆ ನೀಡಲು ಬಯಸುವುದಿಲ್ಲ ಎಂದರು.

ಪೆನ್‌ಡ್ರೈವ್ ಪ್ರಕರಣದ ಸಂತ್ರಸ್ತರಿಗೆ ನ್ಯಾಯ ಕೊಡಿಸಲು ಜೆಡಿಎಸ್ ಹೋರಾಡಲಿ

ಮೈಸೂರು, ಮೇ11(ಜಿಎ)–ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕುಟುಂಬದ ಗೌರವಕ್ಕೆ ಸಂಸದ ಪ್ರಜ್ವಲ್ ರೇವಣ್ಣ ಧಕ್ಕೆ ತಂದಿದ್ದಾರೆಯೇ ಹೊರತು ಇದರಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಪಾತ್ರವೇನೂ ಇಲ್ಲ ಎಂದು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್.ರಾಜೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್‌ನವರಿಗೆ ಸಾಮಾಜಿಕ ಕಾಳಜಿ ಇದ್ದಲ್ಲಿ ಮಹಿಳೆಯರ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ, ಪೆನ್‌ಡ್ರೈವ್ ಪ್ರಕರಣದ ಸಂತ್ರಸ್ತರಿಗೆ ನ್ಯಾಯ ದೊರಕಿಸಿ ಕೊಡುವ ಬಗ್ಗೆ ಹೋರಾಟ ಮಾಡಲಿ. ಅಲ್ಲದೆ, ಮಣಿಪುರದಲ್ಲಿ ಹಾಡಹಗಲೇ ಮಹಿಳೆಯನ್ನು ಬೆತ್ತಲೆಗೊಳಿಸಿ ನಡುಬೀದಿಯಲ್ಲಿ ಕರೆದೊಯ್ದ ಸಂದರ್ಭದಲ್ಲಿ ಜೆಡಿಎಸ್‌ನ ಮುಖಂಡರು ಏಕೆ ಮಾತನಾಡಲಿಲ್ಲ. ಈ ಪ್ರಕರಣದ ಬಗ್ಗೆ ಸಿಬಿಐ ತನಿಖೆಗೆ ಏಕೆ ಆಗ್ರಹಿಸಲಿಲ್ಲ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬರಬೇಕಾದ ಜಿಎಸ್‌ಟಿ ಬಾಕಿ, ಅನುದಾನಗಳ ಬಗ್ಗೆ ಏಕೆ ಇವರು ಮಾತನಾಡಲಿಲ್ಲ ಎಂದು ಪ್ರಶ್ನಿಸಿದರು.

ಜೆಡಿಎಸ್ ಪಕ್ಷದ ಎಂಪಿ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ, ಲೈಂಗಿಕ ದೌರ್ಜನ್ಯದ ಪ್ರಕರಣದಲ್ಲಿ ಸಿಲುಕಿಕೊಂಡಿರುವುದರಿಂದ ಗಮನ ಬೇರೆಡೆ ಸೆಳೆಯಲು ಈಗ ಪ್ರತಿಭಟನೆ ನಡೆಸುತ್ತಿದ್ದಾರೆಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಕುರುಬಾರಹಳ್ಳಿ ಪ್ರಕಾಶ್, ಎಸ್.ಎ.ರಹೀಂ ಉಪಸ್ಥಿತರಿದ್ದರು.

ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ಮೇ11(ಜಿಎ)–ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿದ ಅಧಿಕಾರಿ ವರ್ಗದ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ದಲಿತ ಚಳವಳಿ ನವನಿರ್ಮಾಣ ವೇದಿಕೆ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸೀಗೂರು ವಿಜಯಕುಮಾರ್ ಮಾತನಾಡಿ, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಗ್ರಾಪಂಗೆ ಸೇರಿದ ವಾರ್ಡ್ ಸಂಖ್ಯೆ ಎರಡರ ಮೀಸಲು ಕ್ಷೇತ್ರದಲ್ಲಿ 2020ರ ಮೇ ನಲ್ಲಿ ನಡೆದ ಚುನಾವಣೆ ವೇಳೆ ಸುಳ್ಳು ಜಾತಿ ಪ್ರಮಾಣಪತ್ರ ನೀಡಿ ಸ್ಪರ್ಧಿಸಿ ಗೆಲುವು ಸಾಧಿಸಿರುವ ಕಾರಣ ಆರ್. ರೇಖಾ ಅವರ ಆಯ್ಕೆಯನ್ನು ಅಸಿಂಧುಗೊಳಿಸಲಾಗಿದೆ. ಹೀಗಾಗಿ ಇದಕ್ಕೆ ಕಾರಣಕರ್ತರಾದವರ ಮೇಲೆ ಕ್ರಮ ಅಗತ್ಯ ಎಂದರು.

ಆರ್. ರೇಖಾ ಅವರ ಮೂಲ ಹೆಸರು ರುಕ್ಸರ್ ಆಗಿದ್ದು, ಬೈಲಕುಪ್ಪೆಯಲ್ಲಿನ ಮುಸ್ಲಿಂ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಚುನಾವಣೆವರೆಗೂ ಈ ಮಾಹಿತಿ ಯಾರಿಗೂ ತಿಳಿದಿರಲಿಲ್ಲ. ಆದರೆ ಮತ ಎಣಿಕೆ ದಿನದಂದು ಇವರು ಸುಳ್ಳು ಜಾತಿ ಪ್ರಮಾಣಪತ್ರ ನೀಡಿರುವುದು ಗಮನಕ್ಕೆ ಬಂದಿದೆ ಎಂದು ತಿಳಿಸಿದರು.

ನಂತರ ಮತ್ತೊಬ್ಬ ಅಭ್ಯರ್ಥಿಯಾದ ಅನಿತಾ ನಾರಾಯಣ್ ನೀಡಿದ ದೂರಿನ ಅಡಿಯಲ್ಲಿ ಉನ್ನತ ಮಟ್ಟದ ಅಧಿಕಾರಿಗಳ ತಂಡ ತನಿಖೆ ನಡೆಸಿದಾಗ ಸುಳ್ಳು ಜಾತಿ ಪ್ರಮಾಣ ಪತ್ರ ನೀಡಿರುವುದು ದೃಢವಾಗಿದೆ. ಆದ್ದರಿಂದ ಸಂಬಂಧಪಟ್ಟ ತಹಸೀಲ್ದಾರ್, ರೆವಿನ್ಯೂ ಇನ್‌ಸ್ಪೆಕ್ಟರ್, ಗ್ರಾಮ ಲೆಕ್ಕಿಗರ ವಿರುದ್ಧ ಕ್ರಮ ಕೈಗೊಳ್ಳಬೇಕು. ಚುನಾವಣೆಯಲ್ಲಿ ಎರಡನೇ ಸ್ಥಾನ ಪಡೆದ ಅನಿತಾ ನಾರಾಯಣ್ ಅವರು ಚುನಾಯಿತರಾಗಿದ್ದಾರೆಂದು ಘೋಷಿಸಬೇಕೆಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಅನಿತಾ ನಾರಾಯಣ್, ಎಚ್.ಡಿ. ರಮೇಶ್, ಭೂತನಹಳ್ಳಿ ಶಿವಣ್ಣ, ಸಿ.ಜೆ.ರವಿ ಉಪಸ್ಥಿತರಿದ್ದರು.

ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಚಿನ್ನದ ಬೇಟೆ



ಮೈಸೂರು, ಮೇ 11– ಮೈಸೂರಿನ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ನಲ್ಲಿ ಮೇ 10 ರಂದು ನೂತನ ಆರಂಭ ಮತ್ತು ಸಮೃದ್ಧಿಯ ಸಂಕೇತವಾಗಿರುವ ಅಕ್ಷಯ ತೃತೀಯವನ್ನು ಸಂಭ್ರಮಿಸಲು ಐಕಾನಿಕ್ ಗೋಲ್ಡ್ ಟ್ರೆಷರ್ ಅಂಟ್ (ಚಿನ್ನದ ನಿಧಿಯ ಬೇಟೆ) ಯನ್ನು ಆಯೋಜಿಸಿತ್ತು.

ದೂರದೂರಿನಿಂದ ಬಂದ ಹಲವರು ಈ ಚಿನ್ನದ ಬೇಟೆಯಲ್ಲಿ (ನಿಧಿ ಹುಡುಕಾಟದಲ್ಲಿ) ಪಾಲ್ಗೊಂಡರು. ಸ್ಪರ್ಧೆಯಲ್ಲಿ ಕಾಮೇಶ್ವರನ್, ಹರ್ಷಿತ್ ಗೌಡ, ಅರುಣ್ ಇಳಂಗೋವನ್, ರಂಗೀಲ, ನಿರಮಲ್ (ನಿರ್ಮಲ್) ವಿಜೇತರಾದರು.

ನಿಧಿ ಹುಡುಕಾಟದ ವಿಜೇತರು ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್, ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಡಾಂಗೆ ಅವರಿಂದ ಚಿನ್ನದ ನಾಣ್ಯವನ್ನು ಪಡೆಯುವ ಮೂಲಕ ಸಂಭ್ರಮಿಸಿದರು.

ಬಳಿಕ ಮಾತನಾಡಿದ ಅವರು, ಈ ಉತ್ಸಾಹ ಇಲ್ಲಿಗೇ ಕೊನೆಯಾಗುವುದಿಲ್ಲ. ಸಮ್ಮರ್ ಫೆಸ್ಟಿವಲ್ 2024 (ಬೇಸಿಗೆ ಹಬ್ಬ 2024)ರ ವಿಶೇಷ ಅನುಭವಕ್ಕಾಗಿ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್‌ಗೆ ಭೇಟಿ ನೀಡಿ. ಮೈನವಿರೇಳಿಸುವ (ರೋಮಾಂಚಕ) ಮೂರು ಹೊಸ ಆಕರ್ಷಣೆಗಳಾದ ಕ್ರೇಜಿ ಸ್ಪಿನ್, ಡಬ್ಬಲ್ ಸೈಕಲ್ ಮತ್ತು ಹ್ಯೂಮನ್ ಗೈರೋಗಳಲ್ಲಿ ಆನಂದಿಸಿ. ನಿಮ್ಮ ಅಭಿರುಚಿಗೆ ತಕ್ಕಂತಹ ರುಚಿಕರವಾದ ಆಹಾರವನ್ನು ಆಯ್ಕೆಮಾಡಿಕೊಳ್ಳಿ ಮತ್ತು ಲೈವ್ ಮನರಂಜನೆಯಲ್ಲಿ ತೊಡಗಿಸಿಕೊಳ್ಳಿ ಎಂದರು. ಮಾಹಿತಿಗೆ 95900 80808 ಸಂಪರ್ಕಿಸಬಹುದು.

ಮೇ 19ರವರೆಗೆ ಮೈಸೂರು, ಮಂಡ್ಯ, ಕೊಡಗು, ಹಾಸನದಲ್ಲಿ ಭಾರಿ ಮಳೆ: ಹವಾಮಾನ ಇಲಾಖೆ ಮಾಹಿತಿ

● ಗುಡುಗು, ಮಿಂಚಿನ ಆರ್ಭಟ ● ಗಂಟೆಗೆ 50 ರಿಂದ 60 ಕಿಲೋಮೀಟರ್ ಗಾಳಿ ವೇಗ



ಮೈಸೂರು, ಮೇ11(ಬಿಎಲ್‌ಯು)– ಮೈಸೂರು, ಮಂಡ್ಯ, ಕೊಡಗು, ಹಾಸನದಲ್ಲಿ ಮೇ 19ರವರೆಗೆ ಭಾರೀ ಗಾಳಿ ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.


ಗುಡುಗು, ಮಿಂಚು ಮತ್ತು ಚಂಡಮಾರುತದ ಗಾಳಿ ಸಹಿತ ಭಾರಿ ಮಳೆಯಾಗಲಿದ್ದು, ಗಂಟೆಗೆ 50 ರಿಂದ 60 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸಲಿದೆ ಎಂದು ತಿಳಿಸಿದೆ. ಮೈಸೂರು, ಮಂಡ್ಯ, ಕೊಡಗು ಹಾಗೂ ಹಾಸನದಲ್ಲಿ ಮೇ. 19 ರ ವರೆಗೆ ಸುಮಾರು 250 ಮಿಲಿ ಮೀಟರ್ ಮಳೆಯಾಗುವ ಸಾಧ್ಯತೆ ಇದೆ ಎಂದು ಅಂಕಿ–ಅಂಶಗಳ ವಿವರ ನೀಡಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಕೂಡ ಮಳೆಯಾಗಲಿದ್ದು, ಸುಮಾರು 125 ರಿಂದ 150 ಮಿಲಿ ಮೀಟರ್ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಚಂಡಮಾರುತ ಸಹಿತ ಭಾರಿ ಮಳೆ ಬಗ್ಗೆ ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಈ ಹಿನ್ನೆಲೆ ನಾಲ್ಕು ಜಿಲ್ಲೆಗಳ ಜಿಲ್ಲಾಡಳಿತ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವುದು ಅಗತ್ಯವಾಗಿದೆ.



ಬಸವ ಜಯಂತಿ ಪ್ರಯುಕ್ತ ಡಾ. ಯತೀಂದ್ರ ಯುವ ಬ್ರಿಗೇಡ್ ವತಿಯಿಂದ ಬಸವೇಶ್ವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಾರ್ವಜನಿಕರಿಗೆ ಉಚಿತವಾಗಿ ಎಳನೀರನ್ನು ವಿತರಿಸಲಾಯಿತು. ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಎಳನೀರು ನೀಡುವ ಮೂಲಕ ಸಂಭ್ರಮಿಸಿದರು. ಡಾ. ಯತೀಂದ್ರ ಯುವ ಬ್ರಿಗೇಡ್‌ನ ಸಂಸ್ಥಾಪಕ ಅಧ್ಯಕ್ಷ ಕಂಸಾಳೆ ರವಿ, ಪಾಲಿಕೆ ಮಾಜಿ ಸದಸ್ಯ ಪಳನಿ, ಆರ್.ಕೆ. ರವಿ, ಆಟೋ ಕುಮಾರ್, ಸಿದ್ದರಾಮು ಮತ್ತಿತರರು ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.05.2024 ಭಾನುವಾರ, ಮಳೆ ನಕ್ಷತ್ರ: ಕೃತ್ತಿಕ 11.05.2024 ರಿಂದ 24.05.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಪೆಟ್ ಕ್ಲಿನಿಕ್, ವಿಜಯನಗರ ನಾಲ್ಕನೇ ಹಂತ :** ನಾಯಿ ಮತ್ತು ಬೆಕ್ಕುಗಳಿಗೆ ಉಚಿತ ರೇಬೀಸ್ ರೋಗ ನಿರೋಧಕ ಲಸಿಕೆ ಮತ್ತು ಉಚಿತ ಜಂತುಹುಳು ನಿವಾರಣಾ ಶಿಬಿರ, ಸ್ಥಳ: ಪೆಟ್ ಕ್ಲಿನಿಕ್, ವಿಜಯನಗರ 4ನೇ ಹಂತ, ಬೆಳಗ್ಗೆ 8 ರಿಂದ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ 8ಕ್ಕೆ ಶ್ರೀ ಶಂಕರಭಗವತ್ಪಾದರಿಗೆ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ಸಭಾದ ಆವರಣ, ಶ್ರೀರಾಮಪೇಟೆ.

■ **ಮೈಸೂರು ಜಿಲ್ಲಾ ಶಾತ್ತಾದ ಶ್ರೀ ವೈಷ್ಣವ ಸಂಘ :** ಭಗವದ್ ಶ್ರೀ ರಾಮಾನುಜಾಚಾರ್ಯರ 1007ನೇ ತಿರುನಕ್ಷತ್ರ ಹಾಗೂ 15ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ನರಸಿಂಹಯ್ಯ, ಮುಖ್ಯ ಅತಿಥಿಗಳು : ಅರ್ಕಧಾಮದ ಸಂಸ್ಥಾಪಕ ಶ್ರೀ ಶ್ರೀನಿವಾಸ ಅರ್ಕ ಸ್ವಾಮೀಜಿ, ಹೊಳೇನರಸೀಪುರದ ಶಾತ್ತಾದ ಶ್ರೀ ವೈಷ್ಣವ ಸಂಘದ ಅಧ್ಯಕ್ಷ ಜಿ.ಟಿ. ಜಗನ್ನಾಥ್ ಕುಮಾರ್, ವಿಶೇಷ ಆಹ್ವಾನಿತರು : ಶಾಸಕ ಟಿ.ಎಸ್. ಶ್ರೀವತ್ಸ, ಮೈಸೂರು ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸ್ಥಳ: ರೋಟರಿ ಪಶ್ಚಿಮ ವಿದ್ಯಾಸಂಸ್ಥೆ ಸಭಾಂಗಣ, ಸರಸ್ವತಿಪುರಂ, ಬೆಳಗ್ಗೆ 9ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀ ಶಂಕರ ಭಗವತ್ಪಾದರ ಜಯಂತ್ಯುತ್ಸವ ಹಾಗೂ 45ನೇ ವಾರ್ಷಿಕೋತ್ಸವ, ಬೆಳಗ್ಗೆ 9.30 ರಿಂದ ಶ್ರೀಮದ್ ಭಗವತ್ಪಾದರಿಗೆ ರುದ್ರಾಭಿಷೇಕ, ಷೋಡಶೋಪಚಾರ ಪೂಜೆ, ಸಹಸ್ರ ನಾಮಾರ್ಚನೆ, ಬೆಳಗ್ಗೆ 11.30ಕ್ಕೆ ಮಹಾಮಂಗಳಾರತಿ, ರಾಜಾಶೀರ್ವಾದ, ಪ್ರಸಾದ ವಿನಿಯೋಗ, ಸಂಜೆ 5 ರಿಂದ ವಿದುಷಿ ಶ್ರೀಮತಿ ಸುಧಾ ಮಂಜುನಾಥ್ ಮತ್ತು ಸಂಗಡಿಗರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀ ಶಂಕರ ಜಯಂತಿ ಸಭಾ, ಸಮುದಾಯ ಭವನ, ತೆಂಗಿನತೋಪು, ಸರಸ್ವತಿಪುರಂ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ :**ಆರ್ಟಿಸ್ಟ್ರಿ ಚಿನ್ನಾಭರಣ ಪ್ರದರ್ಶನ, ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ಶೋ ರೂಂ, ಬಿ.ಎನ್. ರಸ್ತೆ, ಬೆಳಗ್ಗೆ 10 ರಿಂದ.

■ **ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಹಾಗೂ ವರ್ಣ ಕಲೆಕ್ಟಿವ್ ಮತ್ತು ಮೈಸೂರ್ ಆರ್ಟ್ ಸೆಂಟರ್ :** 'ART intro' ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಹಿರಿಯ ರಂಗಕರ್ಮಿ ಇಂದಿರಾ ನಾಯರ್, ಸಂಗೀತ ಸಂಯೋಜಕ ಶ್ರೀಕಂಠ, ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ಮ್ಯಾನೇಜಿಂಗ್ ಟ್ರಸ್ಟಿ ಪ್ರಸನ್ನ, ಶಿಬಿರದ ನಿರ್ದೇಶಕ ಚೆಲುವರಾಜು, ಸ್ಥಳ:ಹಾರ್ಡ್ವಿಕ್ ಶಾಲೆ ಆವರಣ, ಬೆಳಗ್ಗೆ 11ಕ್ಕೆ.

■ **ದಿನೇಶ್ ಗುಂಡೂರಾವ್ ಅಭಿಮಾನಿ ಬಳಗ:** ವಿಜ್ಞಾನಿ, ವಿಮರ್ಶಕ ವಿಚಾರವಾದಿ ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರು, ಸಾಮಾಜಿಕ ಕ್ರಾಂತಿಯ ಸಂತ ಶ್ರೀ ರಾಮಾನುಜಾಚಾರ್ಯರ ಜಯಂತಿ ಅಂಗವಾಗಿ ಕನಕಗಿರಿಯಲ್ಲಿರುವ ಭಾರತಿ ವೃದ್ಧಾಶ್ರಮದಲ್ಲಿ ವೃದ್ಧರಿಗೆ ಹಣ್ಣು ಹಂಪಲು ವಿತರಣೆ ಕಾರ್ಯಕ್ರಮ, ಮುಖ್ಯ ಅತಿಥಿಗಳಾಗಿ ಶಾಸಕ ಹರೀಶ್‌ಗೌಡ, ಕಾಂಗ್ರೆಸ್ ಅಧ್ಯಕ್ಷ ಆರ್ ಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್ ಕುಮಾರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಉಪಾಧ್ಯಕ್ಷ ಡಾ. ನಟರಾಜ್ ಜೋಯಿಸ್, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕರಾದ ಕೆ. ರಘುರಾಮ್ ವಾಜಪೇಯಿ, ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ಕಾಂಗ್ರೆಸ್ ಮುಖಂಡರಾದ ಚೇತನ್ ರಾಜ್, ರವಿತೇಜ, ಸ್ಥಳ: ಭಾರತಿ ವೃದ್ಧಾಶ್ರಮ ಆವರಣ, ಕನಕಗಿರಿ, ಬೆಳಗ್ಗೆ 11ಕ್ಕೆ

■ **ಎಸ್.ಪಿ.ಎಂ. ಟ್ರಸ್ಟ್, ಪರಮಹಂಸ ಯೋಗ ಮಹಾವಿದ್ಯಾಲಯ :** ಯೋಗ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್‌ಗೆ ಅಭಿನಂದನಾ ಸಮಾರಂಭ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ರಂಗ ನಿರ್ದೇಶಕ ಅರಸೀಕೆರೆ ಯೋಗಾನಂದ, ಡಾ. ಆರ್. ಭಾವನ, ಡಾ. ಆರ್. ಅಪರ್ಣ, ಶ್ರೀ ಶಿವಪ್ರಕಾಶ್ ಗುರೂಜಿ, ಸುಂದರ್‌ರಾಜ್, ಸುಧೀರ್ ಸುಬ್ರಮಣ್ಯ, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ.

■ **ಇಂಚರ ಸಾಂಸ್ಕೃತಿಕ ಪ್ರತಿಷ್ಠಾನ, ಹೊಯ್ಸಳ ಕನ್ನಡ ಸಂಘ, ಸವಿಗನ್ನಡ ಪತ್ರಿಕಾ ಬಳಗ :** ಡಾ. ರಾಜ್ ಸಾಧನಾ ಪ್ರಶಸ್ತಿ ಪ್ರದಾನ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಅವರಿಗೆ ಅಭಿನಂದನಾ ಸಮಾರಂಭ, ಉದ್ಘಾಟನೆ : ಮಹಾಕವಿ ಡಾ. ಲತಾ ರಾಜಶೇಖರ್, ಪ್ರಶಸ್ತಿ ಪ್ರದಾನ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಭಿನಂದಿತರು : ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ. ವೈ.ಡಿ. ರಾಜಣ್ಣ ಅವರಿಂದ ವರನಟ ಡಾ. ರಾಜಕುಮಾರ್ ಕುರಿತು ವಿಶೇಷ ಉಪನ್ಯಾಸ, ಅಭಿನಂದನಾ ನುಡಿ : ರಂಗಕರ್ಮಿ ರಾಜಶೇಖರ ಕದಂಬ, ಉಪಸ್ಥಿತರು : ರಂಗನಾಥ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಬಸವ ಸಮಿತಿ, ಹೆಬ್ಬಾಳು–ವಿಜಯನಗರ :** ಅಕ್ಕಮಹಾದೇವಿ ಜಯಂತಿ ಮತ್ತು ಬಸವ ಜಯಂತಿ, ಶ್ರೀ ಶಿವರಾತ್ರೀಶ್ವರ ಅಕ್ಕನ ಬಳಗದ ಸದಸ್ಯರಿಂದ ನಾಟಕ 'ಮಹಾಮನೆ', ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ಎ. ಬಸವರಾಜು ಹಿನಕಲ್, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10 ರಿಂದ.

■ **ಅಖಿಲ ಭಾರತೀಯ ವಾಕ್ ಮತ್ತು ಶ್ರವಣ ಸಂಸ್ಥೆ, ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್, ಮೈಸೂರು ಡಿಸ್ಟ್ರಿಕ್ಟ್ ಡೆಫ್ ಅಸೋಸಿಯೇಷನ್ :** ಶ್ರವಣ ಸಾಧನದೊಂದಿಗೆ ವಿಶ್ವಾಸದಿಂದ ಕೇಳಿ, ಉಪಸ್ಥಿತರು : ಕ್ಯಾನ್‌ಫಿನ್ ಹೋಮ್ಸ್ ಲಿಮಿಟೆಡ್ ಡೆಪ್ಯೂಟಿ ಜನರಲ್ ಮ್ಯಾನೇಜರ್ ಡಿ.ಆರ್. ಪ್ರಭು, ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಶ್ರೀಮತಿ ಚಿತ್ರಾ ಶ್ರೀನಾಥ್, ಲಯನ್ಸ್ ಇಂಟರ್‌ನ್ಯಾಷನಲ್ ಡಿಸ್ಟ್ರಿಕ್ಟ್ ಗೌರ್ನರ್ ಎನ್. ಸುಬ್ರಮಣ್ಯ, ಅಧ್ಯಕ್ಷತೆ : ಅಖಿಲ ಭಾರತೀಯ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕರಾದ ಡಾ. ಎಂ. ಪುಷ್ಪಾವತಿ, ಸ್ಥಳ: ಸೆಮಿನಾರ್ ಹಾಲ್, ಅಕಾಡೆಮಿಕ್ ಬ್ಲಾಕ್, ಬೆಳಗ್ಗೆ 10.30ಕ್ಕೆ.

■ **ಅಜ್ಜನ ಮನೆ :** ಶ್ರೀ ಶಂಕರ ನಮನ, ಸಂಜೆ 4ಕ್ಕೆ ವಿದುಷಿ ಶ್ರೀಮತಿ ಗೀತಾ ಶ್ಯಾಮ್‌ಪ್ರಕಾಶ್ ಅವರಿಂದ ಪಂಚ ವೀಣಾವಾದನ, ವಿದ್ವಾನ್ ಶುಭಾಂಗ್ ಸಾಮಗ –ಮೃದಂಗ, ವಿದ್ವಾನ್ ಟಿ.ಎಸ್. ಅಜಯ್– ಘಟಂ, ಸಂಜೆ 5ಕ್ಕೆ ದಿ ಸೆಂಟರ್ ಫಾರ್ ಡಿವೈನ್ ಆರ್ಟ್ಸ್ ಕಲಾವಿದರಿಂದ ಶ್ರೀ ಶಂಕರಾಚಾರ್ಯ ವಿರಚಿತ 'ಸೌಂದರ್ಯಲಹರಿ ವಿಲಾಸ' ನೃತ್ಯ ರೂಪಕ, ಸಂಜೆ 6.45ಕ್ಕೆ ವಿದ್ವಾನ್ ನಾರಾಯಣ ದೇಸಾಯಿ ಅವರಿಂದ 'ಲೋಕಶಂಕರ' ಉಪನ್ಯಾಸ, ಸಂಜೆ 7.15ಕ್ಕೆ ಮೈಸೂರಿನ ನೃತ್ಯಾಲಯ ಟ್ರಸ್ಟ್ ಕಲಾವಿದರಿಂದ 'ಶಂಕರಂ ಲೋಕಶಂಕರಂ' ನೃತ್ಯ ರೂಪಕ, ಸ್ಥಳ: ಗಾನಭಾರತಿ ರಮಾಗೋವಿಂದ್ ಕಲಾ ವೇದಿಕೆ, ಕುವೆಂಪುನಗರ, ಮಧ್ಯಾಹ್ನ 3.30ರಿಂದ.

■ **ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘ :** ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರು ಹಾಗೂ ಶ್ರೀ ರಾಮಾನುಜಾಚಾರ್ಯರ ಜಯಂತಿ ಆಚರಣೆ, ಮುಖ್ಯ ಅತಿಥಿಗಳು : ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಗ್ರಾಮಾಂತರ ಅಧ್ಯಕ್ಷ ಗೋಪಾಲರಾವ್, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್. ಸತ್ಯನಾರಾಯಣ್, ವಿಪ್ರ ಮಹಿಳಾ ಸಂಗಮ ಅಧ್ಯಕ್ಷೆ ಲಕ್ಷ್ಮೀ, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ಹೆಚ್.ಎನ್. ಶ್ರೀಧರಮೂರ್ತಿ, ವಿಪ್ರ ಮುಖಂಡ ಎಂ.ಆರ್. ಬಾಲಕೃಷ್ಣ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ, ಸಂಜೆ 4ಕ್ಕೆ.

■ **ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ :** ನಮ್ಮ ಎಂಎಸ್‌ಎ ಹಬ್ಬದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಎಲ್.ಕೆ. ಮೆಮೋರಿಯಲ್ ಚಾರಿಟಬಲ್ ಟ್ರಸ್ಟ್ ಟ್ರಸ್ಟಿ ಡಾ. ಕೆ.ವಿ. ಲಕ್ಷ್ಮೀದೇವಿ, ಅಧ್ಯಕ್ಷತೆ : ಎಲ್.ಕೆ. ಮೆಮೋರಿಯಲ್ ಚಾರಿಟೆಬಲ್ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಜಿ.ಎನ್. ಪ್ರಶಾಂತ್, ಸ್ಥಳ: ಎಂಎಸ್‌ಎ ಸಭಾಂಗಣ, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್, ಸಂಜೆ 5ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಋಷಿ ಸಂಸ್ಕೃತಿ ವಿದ್ಯಾಕೇಂದ್ರ :** ಸಿದ್ಧ ಸಮಾಧಿ ಯೋಗ ಶಿಬಿರದ ಉಚಿತ ಪರಿಚಯ ಕಾರ್ಯಕ್ರಮ, ಸ್ಥಳ: ಋಷಿ ಸಂಸ್ಕೃತಿ ವಿದ್ಯಾಕೇಂದ್ರ, ಆದಿಚುಂಚನಗಿರಿ ರಸ್ತೆ, ಸಂಜೆ 6ಕ್ಕೆ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಮಂಜುನಾಥ ಬಡಿಗೇರ ನಿರ್ದೇಶನದಲ್ಲಿ 'ಆ ಮನಿ' ನಾಟಕ ಪ್ರದರ್ಶನ, ರಚನೆ : ಕೀರ್ತಿನಾಥ ಕುರ್ತಕೋಟಿ, ಸ್ಥಳ: ರಂಗಾಯಣದ ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

■ **ಕಲಾಸುರುಚಿ :** ಮೈಸೂರು ರಂಗಭೂಮಿಯ ಮರೆಯಲಾಗದ ಚೇತನ ವಾಸು ಅವರ ನೆನಪಿನಲ್ಲಿ ಡಾ. ಶಿವರಾಮ ಕಾರಂತ ಕಾದಂಬರಿ ಆಧಾರಿತ ಅಳಿದ ಮೇಲೆ ನಾಟಕ ಪ್ರದರ್ಶನ, ರೂಪಾಂತರ : ಶಶಿಧರ ಡೋಂಗ್ರೆ, ನಿರ್ದೇಶನ : ಪ್ರೊ. ಎಚ್.ಎಸ್. ಉಮೇಶ್, ಸ್ಥಳ: ನಟನ ರಂಗ ಮಂದಿರ, ರಾಮಕೃಷ್ಣನಗರ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಒಡಹುಟ್ಟಿನ ನುಡಿಗಳು–ಕನ್ನಡದ ಒಡನಾಡಿ ಭಾಷೆಗಳನ್ನು ಕುರಿತ ಬಾನುಲಿ ಸರಣಿ, ಲೇಖನ ಹಾಗೂ ಪ್ರಸ್ತುತಿ– ಡಾ. ತೀತೀರ ರೇಖಾ ವಸಂತ, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ. ಆರ್. ರಾಮಕೃಷ್ಣ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: 'ಮಕ್ಕಳಲ್ಲಿ ಸ್ಕ್ರೀನ್ ಟೈಂ ಎಷ್ಟಿರಬೇಕು?' ಕುರಿತು ಮೈಸೂರಿನ ಮಕ್ಕಳ ನರರೋಗ ತಜ್ಞರಾದ ಡಾ.ಅನುಷ ರಾಜ್ಕೆ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ – ಬೇದ್ರೆ ಮಂಜುನಾಥ್, 10.00 ಕೇಳಿಗಿಳಿಗಳೇ–ಕಥೆ ಕೇಳು ಪುಟ್ಟಿ, ಕಥೆ ಹೇಳುತ್ತಾರೆ–ಬಿ.ಜಿ.ಕವಿತಾ, 10.30 ಮಕ್ಕಳ ಮಂಟಪ– ಪ್ರತಿಭಾ ಪಲ್ಲವ ಬಹುಮುಖ ಪ್ರತಿಭೆಯ ಸಂವಿತ್ ಭಾರ್ಗವ ಭಟ್‌ನ ಪರಿಚಯ, 11.00 ಮಿಶ್ರ ಮಾಧುರ್ಯ

ಮಧ್ಯಾಹ್ನ: 12.30ದೇವರ ನಾಮ–ಸಿ.ಎಸ್.ಲಕ್ಷ್ಮೀ, 12.45 ಜನಪದ ಸಂಗೀತ, 1.20 ಭಾವಗೀತೆ– ಶೈಲಜಾ ಚಂದ್ರಶೇಖರ್, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ "ಅಣ್ಣ ಅತ್ತಿಗೆ", 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ– ವೀರ ಮಣಿ ಕಾಳಗ, ಪ್ರಸ್ತುತಿ–ಪೈವಳಿಕೆಯ ಬೆನಕ ಯಕ್ಷಕಲಾ ವೇದಿಕೆಯ ಸದಸ್ಯರು, 6.55 ಕೃಷಿರಂಗ ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್ ಕೃಷಿ ಲೋಕ, ಕೃಷಿ ದರ್ಪಣ, ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ– ಆರ್. ಲೋಕೇಶ್ವರಿ, 8.00 'ಹಾದಿಯಲ್ಲಿ ಕಂಡ ಮುಖ' ಬಾನುಲಿ ಸರಣಿ, ಮುಖವೀಣೆ ಕಲಾವಿದ, ಟಿ.ನರಸೀಪುರ ತಾಲೂಕು ಹೆಮ್ಮಿಗೆ ಗ್ರಾಮದ ನಾರಾಯಣ ಸ್ವಾಮಿ ಅವರೊಂದಿಗೆ ಸಂವಾದ, ಪ್ರಸ್ತುತಿ–ಅಬ್ದುಲ್ ರಶೀದ್, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ, ಎಂ.ಎಸ್. ವೀಣಾ–ಸಿತಾರ್ ವಾದನ

ಪಾಕ್ ಡ್ರೋನ್ ಹೊಡೆದುರುಳಿಸಿದ ಭಾರತೀಯ ಸೇನೆ

ಶ್ರೀನಗರ, ಮೇ 11– ಭಾರತೀಯ ಗಡಿಯೊಳಗೆ ಅನುಮಾನಾಸ್ಪದವಾಗಿ ಹಾರಾಡುತ್ತಿದ್ದ ಪಾಕಿಸ್ತಾನದಿಂದ ಬಂದ ಡ್ರೋನ್ ಅನ್ನು ಭಾರತೀಯ ಸೇನೆ ಶುಕ್ರವಾರ ತಡರಾತ್ರಿ ಹೊಡೆದುರುಳಿಸಿದೆ.

ಜಮ್ಮು ಮತ್ತು ಕಾಶ್ಮೀರದ ಸಾಂಬಾ ಜಿಲ್ಲೆಯ ಅಂತಾರಾಷ್ಟ್ರೀಯ ಗಡಿ ಬಳಿ ಪಾಕಿಸ್ತಾನದ ಡ್ರೋನ್ ಅನ್ನು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಹೊಡೆದುರುಳಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ತಡರಾತ್ರಿ ಪಾಕ್ ಗಡಿಯಲ್ಲಿ ಡ್ರೋನ್ ಹಾರಾಟ ನಡೆಸುತ್ತಿರುವುದನ್ನು ಪತ್ತೆ ಹಚ್ಚಿದ್ದ ಬಿಎಸ್‌ಎಫ್ ಪಡೆಗಳು ಕೂಡಲೇ ಹಲವು ಸುತ್ತು ಗುಂಡು ಹಾರಿಸುವ ಮೂಲಕ ಡ್ರೋನ್ ಅನ್ನು ಹೊಡೆದುರುಳಿಸಿದ್ದಾರೆ. ಡ್ರೋನ್ ಮೂಲಕ ಶಸ್ತ್ರಾಸ್ತ್ರಗಳು ಅಥವಾ ಮಾದಕ ವಸ್ತುಗಳನ್ನು ಸಾಗಾಟ ನಡೆಸಿರುವ ಬಗ್ಗೆ ರಾಮ್‌ಘರ್ ಸೆಕ್ಟರ್‌ನ ನಾರಾಯಣಪುರದಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇತ್ತೀಚೆಗಷ್ಟೇ ಜಮ್ಮು ಮತ್ತು ಕಾಶ್ಮೀರದ ಕುಲ್ಗಾಂನಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್‌ಕೌಂಟರ್‌ನಲ್ಲಿ ಲಷ್ಕರ್ ಎ ತೊಯ್ಬಾ ಉಗ್ರ ಸಂಘಟನೆಯ ಘಟಕವಾದ ಟಿಆರ್‌ಎಫ್‌ನ ಕಮಾಂಡರ್ ಸೇರಿದಂತೆ ಇಬ್ಬರು ಉಗ್ರರು ಹತರಾಗಿದ್ದರು. ಇದರ ಬೆನ್ನಲ್ಲೇ ಗಡಿಯಲ್ಲಿ ಶಂಕಿತ ಚಟುಟಿಕೆಗಳು ವ್ಯಾಪಕವಾಗಿವೆ.

ಅಫ್ಘಾನಿಸ್ತಾನದಲ್ಲಿ ಭಾರೀ ಮಳೆ: 300ಕ್ಕೂ ಹೆಚ್ಚು ಸಾವು

ಕಾಬೂಲ್, ಮೇ 11– ಅಫ್ಘಾನಿಸ್ತಾನದಲ್ಲಿ ಭಾರಿ ಮಳೆಯಾಗುತ್ತಿದ್ದು, ಹಠಾತ್ ಪ್ರವಾಹ ಉಂಟಾಗಿ 300ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. 1ಸಾವಿರಕ್ಕೂ ಕ್ಕೂ ಹೆಚ್ಚು ಮನೆಗಳು ನಾಶವಾಗಿವೆ.

ಪ್ರವಾಹ ಪರಿಸ್ಥಿತಿಯಿಂದ ಸಹಸ್ರಾರು ಮಂದಿ ಮನೆ ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ಉತ್ತರದ ಬಾಗ್ಲಾನ್ ಮೇಲೆ ಮಳೆ ತೀವ್ರ ಪರಿಣಾಮ ಬೀರಿದೆ. ಶುಕ್ರವಾರ ಸಂಭವಿಸಿದ ಪ್ರವಾಹವು ರಸ್ತೆ, ಮನೆಗಳಿಗೆ ತೀವ್ರ ಹಾನಿಯನ್ನುಂಟು ಮಾಡಿದೆ. ನೆರೆಯ ತುಖರ್ ಪ್ರಾಂತ್ಯದಲ್ಲೂ ಕನಿಷ್ಠ 20 ಮಂದಿ ಮೃತಪಟ್ಟಿರುವುದಾಗಿ ವರದಿಯಾಗಿದೆ

ತಾಲಿಬಾನ್ ಸರ್ಕಾರದ ಮುಖ್ಯ ವಕ್ತಾರ ಜಬಿಹುಲ್ಲಾ ಮುಜಾಹಿದ್ ತನ್ನ ಸಾಮಾಜಿಕ ಮಾಧ್ಯಮ ಎಕ್ಸ್‌? ಪ್ಲಾಟ್‌ಫಾರ್ಮ್ ನಲ್ಲಿ ನೂರಾರು ಮಂದಿ ಈ ದುರಂತ ಪ್ರವಾಹಕ್ಕೆ ಬಲಿಯಾಗಿದ್ದಾರೆ, ಗಣನೀಯ ಸಂಖ್ಯೆಯ ಜನರು ಗಾಯಗೊಂಡಿದ್ದಾರೆ ಎಂದು ಪೋಸ್ಟ್ ಮಾಡಿದ್ದಾರೆ.

ಮುಜಾಹಿದ್ ಬಡಾಕ್ಷನ್, ಬಘ್ಲಾನ್, ಘೋರ್ ಮತ್ತು ಹೆರಾತ್ ಪ್ರಾಂತ್ಯಗಳು ಪ್ರವಾಹದ ಪ್ರಭಾವಕ್ಕೆ ಒಳಪಟ್ಟಿವೆ ಇದು ಹೆಚ್ಚಿನ ಆರ್ಥಿಕ ನಷ್ಟಕ್ಕೆ ಕಾರಣವಾಗಿದೆ. ಜನರನ್ನು ರಕ್ಷಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದ್ದಾರೆ.

ಅಫ್ಘಾನಿಸ್ತಾನದ ವಾಯುಪಡೆಯು ಪ್ರವಾಹ ಪೀಡಿತ ಬಾಗ್ಲಾನ್‌ನಲ್ಲಿ ಜನರನ್ನು ಸ್ಥಳಾಂತರಿಸುವ ಪ್ರಯತ್ನಗಳನ್ನು ಪ್ರಾರಂಭಿಸಿದೆ ಎಂದು ತಾಲಿಬಾನ್ ರಕ್ಷಣಾ ಸಚಿವಾಲಯ ಶನಿವಾರ ಪ್ರಕಟಿಸಿದೆ. ವಿಶ್ವಸಂಸ್ಥೆ ಸಂತ್ರಸ್ತರಿಗೆ ಆಹಾರ ಪೂರೈಸಲು ಕ್ರಮ ತೆಗೆದುಕೊಂಡಿದೆ.

ಬೇರೆಲ್ಲರಿಗೂ ಮಳೆ ಬಂತೆಂದರೆ ಸಂತಸ: ಆದರೆ ಇಲ್ಲಿ ವಾಸಿಸುವ ಜನರಿಗೆ ಸಂಕಟ!





ಮೈಸೂರು, ಮೇ 11(ಎಂಕೆ)– ಮೈಸೂರಿನ ಈ ಭಾಗದ ನಿವಾಸಿಗಳಿಗೆ ಮೋಡ ಕವಿದರೆ ಭಯ... ಮನೆಗೆ ನುಗ್ಗುವ ಮಳೆ ನೀರು ಎತ್ತಿ ಹೊಹಾಕುವುದೇ ಗೋಳಾಗಿದೆ...!

ಹೌದು! ಮೈಸೂರಿನ ಕನಕಗಿರಿ, ಗುಂಡೂರಾವ್ ನಗರ, ಮಧುವನ, ಐಶ್ವರ್ಯನಗರ, ಆನಂದನಗರ ಸೇರಿದಂತೆ ತಗ್ಗು ಪ್ರದೇಶದಲ್ಲಿನ ನಿವಾಸಿಗಳು ಭಯದಲ್ಲೇ ಜೀವನ ಸಾಗಿಸುವಂತಾಗಿದೆ. ವಾರ್ಡ್ ನಂ.54ರ ವ್ಯಾಪ್ತಿಯ ಕನಕಗಿರಿಯ 1, 5 ಮತ್ತು 6ನೇ ಅಡ್ಡ ರಸ್ತೆಗಳಲ್ಲಿ ವಾಸಿಸುವ ನಿವಾಸಿಗಳ ಪಾಡಂತೂ ಹೇಳತೀರದಾಗಿದೆ. ಹಾಗೆಯೇ ತೀರ ಹಳ್ಳದಲ್ಲಿರುವ ಮಧುವನ ಬಡಾವಣೆ, ಐಶ್ವರ್ಯನಗರ, ಆನಂದನಗರದಲ್ಲಿ ಮಳೆ ಬಂತೆಂದರೆ ಮನೆಯೊಳಗೆ ನುಗ್ಗುವ ನೀರನ್ನು ಹೊರ ಹಾಕಲು ಸಜ್ಜಾಗಿರಬೇಕು.

ಇತ್ತೀಚೆಗೆ ಮೈಸೂರಿನಲ್ಲಿ ಸುರಿಯುತ್ತಿರುವ ಮಳೆಯಿಂದಾಗಿ ಕಂಗಾಲಾಗಿರುವ ತಗ್ಗು ಪ್ರದೇಶಗಳ ನಿವಾಸಿಗಳು ಮಳೆಗಾಲ ಕಳೆಯುವವರೆಗೆ ಇನ್ಯಾವ ಅನಾಹುತಗಳು, ಅವಾಂತರಗಳಾಗುತ್ತವೆಂತೋ ಎಂಬ ಚಿಂತೆಯಲ್ಲಿ ಮುಳುಗುವಂತಾಗಿದೆ. ಮಳೆ ಬಂದಾಗ ಬಾಗಿಲಿಗೆ ಅಡ್ಡವಾಗಿ ಮರಳು ಮೂಟೆ, ಪ್ಲೆವುಡ್ ಸೀಟ್ ಅಳವಡಿಸಿದ್ದರೂ ರಭಸವಾಗಿ ನುಗ್ಗಿ ಬರುವ ಮಳೆ ನೀರಿನಿಂದಾಗಿ ಪರಿತಪಿಸುತಿದ್ದಾರೆ.

ಮಳೆ ಬಂದು ನಿಲ್ಲುವವರೆಗೂ ಚೇರ್‌ಗಳ ಮೇಲೆಯೇ ಇರುತ್ತೇವೆ. ನಿಂತ ನಂತರ ನೀರನ್ನು ತೋಡಿ ಹೊರಗೆ ಹಾಕಿದ ಬಳಿಕವೇ ನಿದ್ದೆ. ರಾತ್ರಿಯಿಡೀ ಮಳೆ ಬಂದರೆ ಜಾಗರಣೆಯೇ. ರಸ್ತೆಯಿಂದ ಮಾತ್ರವಲ್ಲದೆ ಗೋಡೆಗಳ ಮೂಲೆ ಹಾಗೂ ಬಾತ್ ರೂಂ ನಿಂದಲೂ ನೀರು ಉಕ್ಕಿ ಮನೆಯೊಳಗೆಲ್ಲಾ ತುಂಬಿಕೊಳ್ಳುತ್ತದೆ. ಮಳೆ ಬಿದ್ದು ಮೂರು ದಿನ ಕಳೆದರೂ ನೆಲ ಹಸಿಯಾಗಿಯೇ ಇರಲಿದೆ. ಇದರಿಂದ ಸೊಳ್ಳೆಗಳ ಕಾಟವೂ ಹೆಚ್ಚು ಎಂದು ಕನಕಗಿರಿ 1 ಮತ್ತು 5ನೇ ಕ್ರಾಸ್ ನಿವಾಸಿಗಳಾದ ಜಯಶ್ರೀ, ಜಯಲಕ್ಷ್ಮಿ, ಧರಣಿಕುಮಾರ್, ಶೋಭ 'ಮೈಸೂರು ಮಿತ್ರ'ನಲ್ಲಿ ಅಳಲು ತೋಡಿಕೊಂಡರು.

ಮ್ಯಾನ್‌ಹೋಲ್ ನೀರು: ಮಳೆ ನೀರು ಬಂದರೆ ಒಂದು ಪಕ್ಷ ಹೊರ ಹಾಕುತ್ತೇವೆ. ಆದರೆ ಮಳೆ ನೀರಿನ ಜೊತೆಗೆ ಒಳ ಚರಂಡಿ ಕೊಳಚೆ ನೀರು ಮ್ಯಾನ್‌ಹೋಲ್ ಗಳಲ್ಲಿ ಉಕ್ಕಿ ಹರಿದು ಮನೆಯೊಳಗೆ ನುಗ್ಗುತ್ತದೆ. ಇದರಿಂದ ಮನೆಯೊಳಗೆಲ್ಲಾ ದುರ್ವಾಸನೆ. ಮಳೆ ಬಂದರೆ ಎಲ್ಲರಿಗೂ ಖುಷಿಯೇ. ಆದರೆ ನಮಗೆ ಮಾತ್ರ ಕಷ್ಟ, ನರಕ ದರ್ಶನವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರಲ್ಲದೆ, ಈಗ ಮಳೆಗಾಲ ಆರಂಭವಾಗಿದೆ. ಈಗಾಗಲೇ ಸಾಕಷ್ಟು ತೊಂದರೆಗಳಾಗಿದ್ದರೂ ಯಾವೊಬ್ಬ ಪಾಲಿಕೆ ಅಧಿಕಾರಿ, ಸಿಬ್ಬಂದಿ, ಜನಪ್ರತಿನಿಧಿಯೂ ಈ ಕಡೆ ತಲೆ ಹಾಕಿಲ್ಲ ಎಂದು ಆಕ್ರೋಶ ಹೊರಹಾಕಿದರು.

ದೇವರೇ ಬಲ್ಲ: ಆನಂದನಗರದಲ್ಲಿ ಮಳೆ ಬಂದರೆ ಏನಾಗುತ್ತೆ ಎಂಬುದನ್ನು ದೇವರೇ ಬಲ್ಲ. ಈಗಿರುವ ಮಳೆ ನೀರಿನ ದೊಡ್ಡ ಮೋರಿಯನ್ನು ತೆಗೆದು ಹೊಸದಾಗಿ ಕಟ್ಟುತ್ತಾರೆ ಎಂದರೆ ಅದೇ ಮೋರಿಯ ಗೋಡೆಯನ್ನು ಎತ್ತರ ಮಾಡಿದ್ದಾರೆ. ಆದರೆ ಅಗಲ ಚಿಕ್ಕದಾಗಿದ್ದು, ಎತ್ತರ ಮಾಡಿರುವುದರಿಂದ ಯಾವುದೇ ಪ್ರಯೋಜನವಿಲ್ಲ. ಮನೆಗಳು, ಮನೆ ಮುಂದಿನ ರಸ್ತೆಗಳಲೆಲ್ಲಾ ನೀರು ತುಂಬಿದಾಗ ನಾಲ್ಕು ಜನರ ಮುಂದೆ ಸ್ಕೋಪ್ ತೆಗೆದುಕೊಳ್ಳಲಷ್ಟೇ ಜನಪ್ರತಿನಿಧಿಗಳು, ಅಧಿಕಾರಿಗಳು ಬರುತ್ತಾರೆಯೇ ಹೊರತು ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಯಾವ ಕಾರ್ಯವೂ ಆಗಿಲ್ಲ ಎಂದು ಆನಂದನಗರ ನಿವಾಸಿ ಶಿವಕುಮಾರ್ ಅಸಮಾದಾನ ವ್ಯಕ್ತಪಡಿಸಿದರು.

ತಗ್ಗು ಪ್ರದೇಶಗಳಲ್ಲಿ ಅವ್ಯವಸ್ಥೆ...!

ಮೈಸೂರಿನ ತಗ್ಗು ಪ್ರದೇಶಗಳಲ್ಲಿ ಮಳೆ ನೀರಿನ ಚರಂಡಿ, ಒಳ ಚರಂಡಿ ಅವ್ಯವಸ್ಥೆಯಿಂದಾಗಿ ಇಲ್ಲಿನ ನಿವಾಸಿಗಳು ಸಂಕಷ್ಟ ಎದುರಿಸಬೇಕಾದ ಅನಿವಾರ್ಯತೆ ಇದೆ. ಮೇ 3 ರಂದು ಸುರಿದ ಬಾರೀ ಮಳೆಯ ರಭಸಕ್ಕೆ ಸಣ್ಣ ಸಣ್ಣ ಮೋರಿಗಳು ಕೊಚ್ಚಿ ಹೋಗಿವೆ. ಮಳೆ ನೀರಿನಲ್ಲಿ ತೇಲಿ ಬಂದ ಕಸದ ತ್ಯಾಜ್ಯಗಳು ಅಲ್ಲಲ್ಲಿ ತಡೆಯಾಗಿದ್ದು, ಮೋರಿಗಳಲ್ಲಿ ನೀರು ಹರಿಯದಂತಾಗಿದೆ. ಮ್ಯಾನ್‌ಹೋಲ್‌ಗಳು ಹಾಳಾಗಿದ್ದು, ಕ್ಲೀನ್ ಮಾಡದೇ ಇರುವುದರಿಂದ ಉಕ್ಕಿ ಹರಿಯುತ್ತಿವೆ. ಮಳೆ ನೀರು ಮ್ಯಾನ್‌ಹೋಲ್‌ಗೆ(ಒಳಚರಂಡಿ) ಸೇರುತ್ತಿರುವುದರಿಂದ ತೊಂದರೆಗಳು ಹೆಚ್ಚಾಗಿದ್ದು, ದುರ್ವಾಸನೆಯಿಂದ ನಿವಾಸಿಗಳು ನರಳುವಂತಾಗಿದೆ. ಚರಂಡಿಗಳಲ್ಲಿ ಮಣ್ಣು ತುಂಬಿದ್ದು, ಕೂಡಲೇ ಮಣ್ಣನ್ನು ತೆಗೆಯದಿದ್ದರೆ ಮತ್ತಷ್ಟು ಅವಾಂತರಗಳು ಸೃಷ್ಟಿಯಾಗುತ್ತವೆ.

ನಿದ್ದೆ ಮಾಡಲು ಜಾಗವಿಲ್ಲ...

ಮಳೆ ಬಂದಾಗ ಮನೆಯೊಳಗೆ ಎಲ್ಲೆಲ್ಲಿಂದ ನೀರು ಬರುತ್ತೋ ಕಾಣೆ. ನಿದ್ದೆ ಮಾಡಲು ಜಾಗವಿಲ್ಲದಂತೆ ಮನೆಯೊಳಗೆಲ್ಲಾ ನೀರು ಆವರಿಸುತ್ತೆ. ನಮಗೆ ಬಾರಿ ತೊಂದರೆಯಾಗುತ್ತಿದೆ. ಹಳೇ ಮನೆಯಾದ್ದರಿಂದ ಇಲ್ಲಿಯೇ ಇರಬೇಕಾದ ಅನಿವಾರ್ಯತೆ ಇದೆ. ದಯಮಾಡಿ ಪಾಲಿಕೆ ಅಧಿಕಾರಿಗಳು ಮಳೆ ನೀರಿನಿಂದಾಗುತ್ತಿರುವ ಸಮಸ್ಯೆಗಳನ್ನು ಬಗೆಹರಿಸಿ.

– **ರಾಜೇಶ್**, ಕನಕಗಿರಿ 5ನೇ ಕ್ರಾಸ್ ನಿವಾಸಿ

ನಕ್ಕರೆ ಅದೇ ಸ್ವರ್ಗ

ರೋಗಿ : "ನನ್ನನ್ನು ಚುರುಕಾಗಿಸುವಂತಹ, ಒರಟಾಗಿಸುವಂತಹ ಕೋಪಿಷ್ಟನನ್ನಾಗಿಸುವಂತಹ ಯಾವುದಾದರೂ ಔಷಧಿ ಇದೆಯೇ?"

ಡಾಕ್ಟರ್ : "ಅದಕ್ಕೆ ಔಷಧಿಯೇನೂ ಬೇಕಾಗಿಲ್ಲ. ಆಗಾಗ ನನ್ನ ಬಿಲ್ ನೋಡ್ತಾ ಇರಿ"

ಮೈಸೂರು ಮಿತ್ರ

ಭಾನುವಾರ, 12 ಮೇ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಶ್ರೀಮಂತಿಕೆಯ ಸ್ವಾರ್ಥ ಎಂತಹದ್ದೆಂದರೆ ನಾವು ಹೆಚ್ಚು ಹೆಚ್ಚು ಸಂಪಾದಿಸುವುದಷ್ಟೇ ಅಲ್ಲ, ಇತರರು ಕಡಿಮೆ ಉಳ್ಳವರಾಗಿರುವಂತೆಯೂ ಯತ್ನಿಸುವುದು. –ಜಾನ್‌ರಸ್ಕಿನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಸಿದ್ದಾಗ ಹಬ್ಬ ಮಾಡು

ನಿಮ್ಮ ಪತ್ರಗಳು

■ ಅರ್ಧಂಬರ್ಧ ಕಾಮಗಾರಿ ಪೂರ್ಣಗೊಳಿಸಿ



ಮಾನ್ಯರೆ,

ಮೈಸೂರಿನ ಕೃಷ್ಣಮೂರ್ತಿಪುರಂ ಬಡಾವಣೆಯ ಅಶೋಕ ವೃತ್ತ (ಬಲ್ಲಾಳ್ ಸರ್ಕಲ್)ದ ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ ಸಮೀಪದಲ್ಲಿರುವ ಗಣೇಶ ಉದ್ಯಾನವನ (ಅನಂತಸ್ವಾಮಿ ಪಾರ್ಕ್)ಕ್ಕೆ ಪ್ರತಿನಿತ್ಯ ವಾಯುವಿಹಾರಕ್ಕಾಗಿ ಮಕ್ಕಳು, ಹಿರಿಯರು, ಯುವಕರು, ಕಾಲೇಜು ವಿದ್ಯಾರ್ಥಿಗಳು, ಮಹಿಳೆಯರು ಸೇರಿದಂತೆ ನೂರಾರು ಸಾರ್ವಜನಿಕರು ಆಗಮಿಸಲಿದ್ದು, ಪ್ರವೇಶ ದ್ವಾರದ ಬಳಿಯ ಒಳಚರಂಡಿ ಕಾಮಗಾರಿಯೂ ಅರ್ಧಂಬರ್ಧಕ್ಕೆ ನಿಂತಿದ್ದು, ಅನೇಕ ತಿಂಗಳಿಂದ ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗಿದೆ. ಮಳೆ ಬಂದರೆ ಪಾರ್ಕಿನ ತುಂಬೆಲ್ಲ ನೀರು ತುಂಬಿಕೊಳ್ಳುತ್ತದೆ. ನೀರು ಹೊರ ಹೋಗಲು ಮಾರ್ಗವೇ ಇಲ್ಲ, ಪಾರ್ಕಿನ ತುಂಬೆಲ್ಲ ಅಲ್ಲಲ್ಲಿ ಕೆಸರು ಗದ್ದೆಯಂತೆ ನೀರು ತುಂಬಿರುತ್ತದೆ. ಕಾಲಿಟ್ಟರೆ ಜಾರುತ್ತದೆ. ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಾಗಲಿ, ಜನಪ್ರತಿನಿಧಿಗಳಾಗಲಿ ಅತಿ ಶೀಘ್ರದಲ್ಲಿ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

■ ಯಶಸ್ವಿಯಾದ ಶಕ್ತಿ ಯೋಜನೆ

ಮಾನ್ಯರೆ,

ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಸರ್ಕಾರಿ ಬಸ್‌ಗಳಲ್ಲಿ ರಾಜ್ಯಾದ್ಯಂತ ಉಚಿತ ಪ್ರಯಾಣದ "ಶಕ್ತಿ" ಯೋಜನೆಯನ್ನು ರಾಜ್ಯದ ಮಹಿಳೆಯರು ವ್ಯವಸ್ಥಿತವಾಗಿ ಬಳಸುವ ಮೂಲಕ ಯೋಜನೆಯ ಕೀರ್ತಿಯನ್ನು ದೇಶದಾದ್ಯಂತ ಹರಡುವಂತೆ ಮಾಡಿದ್ದಾರೆ.

ಸಮಾಜವಾದಿ ಹಿನ್ನೆಲೆಯಲ್ಲಿ ಸಾಮಾಜಿಕ ನ್ಯಾಯದ ಪರಿಕಲ್ಪನೆಯ ರಾಜ್ಯ ಸರ್ಕಾರ ಬಡ ಮತ್ತು ಮಧ್ಯಮ ವರ್ಗದ, ದುಡಿಯುವ ಮಹಿಳೆಯರನ್ನು ಆರ್ಥಿಕವಾಗಿ ಬಲಾಢ್ಯರನ್ನಾಗಿಸುವುದೆ, ಪ್ರಸುತ್ತ ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಯ ಆದ್ಯತೆಯಾಗಿದ್ದು, ಇದರ ಭಾಗವಾಗಿ ಜಾರಿಯಾದ ಶಕ್ತಿ ಯೋಜನೆಯನ್ನು ಕರ್ನಾಟಕ ರಾಜ್ಯದ ಮಹಿಳೆಯರು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ.

ಜೂನ್ 11, 2023 ರಂದು ರಾಜ್ಯ ಸರ್ಕಾರ ಶಕ್ತಿ ಯೋಜನೆಯನ್ನು ಪ್ರಾರಂಭಿಸಿತು. ಇಲ್ಲಿಯವರೆಗೆ ಅಂದರೆ ಮೇ 01 ರವರೆಗಿನ ಅಂಕಿ ಅಂಶಗಳ ಪ್ರಕಾರ ಕೋಟ್ಯಾಂತರ ಮಹಿಳೆಯರು ಉಚಿತವಾಗಿ ಸರ್ಕಾರಿ ಬಸ್‌ಗಳಲ್ಲಿ ಪ್ರಯಾಣ ಮಾಡಿದ್ದು ಇದಕ್ಕೆ ರಾಜ್ಯ ಸರ್ಕಾರಕ್ಕೆ ತಗುಲಿದ ವೆಚ್ಚ 4,836 ಕೋಟಿ ರೂ.ಗಳು.

ಒಟ್ಟಿನಲ್ಲಿ ರಾಜ್ಯ ಸರ್ಕಾರದ ಉಚಿತ ಬಸ್ ಪ್ರಯಾಣದ ಶಕ್ತಿ ಯೋಜನೆಯಿಂದ ಪ್ರತಿ ತಿಂಗಳು 2000 ದಿಂದ 2500 ರೂ.ಗಳು ಮಹಿಳೆಯರಿಗೆ ಉಳಿತಾಯವಾಗಲಿದೆ. ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರಿಗೆ ಇದರಿಂದ ತುಂಬಾ ಅನುಕೂಲವಾಗಲಿದ್ದು, ಉಳಿತಾಯವಾದ ಈ ಹಣ ಮಕ್ಕಳ ವಿದ್ಯಾಭ್ಯಾಸಕ್ಕೆ, ಆರೋಗ್ಯ ಅಥವಾ ಮನೆಯ ಇತರೆ ವೆಚ್ಚವನ್ನು ಸರಿದೂಗಿಸಲು ನೆರವಾಗುತ್ತದೆ.

–ರಾಸುಮ ಭಟ್, ಕುವೆಂಪು ವಿಶ್ವವಿದ್ಯಾಲಯ, ಚಿಕ್ಕಮಗಳೂರು.

■ ಸಿಇಟಿ ಪರೀಕ್ಷೆ : ಆತಂಕಕ್ಕೀಡಾದ ವಿದ್ಯಾರ್ಥಿಗಳು

ಮಾನ್ಯರೆ,

ಸಿಇಟಿ ಪರೀಕ್ಷೆಯಲ್ಲಿ 45ಕ್ಕೂ ಹೆಚ್ಚಿನ ಪ್ರಶ್ನೆಗಳನ್ನು ಕೈಬಿಟ್ಟ ಪಠ್ಯಕ್ರಮದಿಂದ ಕೇಳಿದ್ದರಿಂದ ವಿದ್ಯಾರ್ಥಿಗಳು, ಆ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಆತಂಕಕ್ಕೀಡಾಗಿರುವುದರಿಂದ, ಸರ್ಕಾರ ಮರು ಪರೀಕ್ಷೆಗೆ ಚಿಂತನೆ ನಡೆಸಿದೆ ಎಂದು ಮಾಧ್ಯಮಗಳಲ್ಲಿ ಪ್ರಕಟಗೊಂಡಿದೆ. ವಿದ್ಯಾರ್ಥಿಗಳಿಗೆ ಪಿಯುಸಿ ಪರೀಕ್ಷೆ ಎಂಬುದು ಕೇವಲ ಪರೀಕ್ಷೆಯಲ್ಲ. ಅದು ಅಗ್ನಿ ಪರೀಕ್ಷೆ, ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಕೋರ್ಸ್‌ಗಳಿಗೆ ಪ್ರವೇಶ ಪಡೆದುಕೊಳ್ಳಲು ಮತ್ತು ತಮ್ಮ ಜೀವನ, ತಮ್ಮಿಷ್ಟದಂತೆ ಕಟ್ಟಿಕೊಳ್ಳಲು, ವಿದ್ಯಾರ್ಥಿಗಳಲ್ಲದೆ ಅವರ ಪೋಷಕರೂ ಕೂಡ ಬಹಳ ಕಷ್ಟಪಟ್ಟು, ಮಕ್ಕಳನ್ನು ಆ ದಿಕ್ಕಿನಲ್ಲಿ ತಯಾರಿ ಮಾಡಲು ಹಗಲಿರುಳು ಶ್ರಮಿಸಿರುತ್ತಾರೆ. ಆದರೆ ಇದೆಲ್ಲವೂ ಯಾರದೋ ಬೇಜವಾಬ್ದಾರಿಯಿಂದ ನೀರಿನಲ್ಲಿ ಹೋಮ ಮಾಡಿದಂತಾಗುತ್ತದೆ. ಆದುದರಿಂದ ಪ್ರಶ್ನೆಪತ್ರಿಕೆ ತಯಾರು ಮಾಡುವವರು ಇವೆಲ್ಲವೂ, ನಮಗೆ ಸಂಬಂಧಪಟ್ಟಿದ್ದಲ್ಲವೆಂಬ ಪ್ರಜ್ಞೆಯಿಂದ ಪ್ರಶ್ನೆ ಪತ್ರಿಕೆಗಳನ್ನು ತಯಾರಿಸುವುದು ಅಕ್ಷಮ್ಯ. ಇಂತಹ ಬೇಜವಾಬ್ದಾರಿಯುತ ಕೆಲಸಗಳನ್ನು ಮಾಡದೆ, ಜವಾಬ್ದಾರಿಯಿಂದ ಪ್ರಶ್ನೆ ಪತ್ರಿಕೆ ತಯಾರು ಮಾಡಬೇಕಾಗಿರುವುದು ಆದ್ಯ ಕರ್ತವ್ಯ, ಹಾಗಾಗಿ ಅಂತಹವರಿಗೆ ಹೊಣೆಗಾರಿಕೆ ಫಿಕ್ಸ್ ಮಾಡಬೇಕು. ಇಲ್ಲದಿದ್ದರೆ, ಇದು ಮುಂದುವರೆಯುವ ಸಾಧ್ಯತೆ ಇರುತ್ತದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕು.

–ಬ್ಯಾಂಕ್ ಶಿವಕುಮಾರ್. ಜೆ.ಪಿ.ನಗರ, ಮೈಸೂರು.

■ ಬದುಕು–ಬಿಂದು

ಮಾನ್ಯರೆ,

ಬೇಡಿಕೆ : ಬಾಲರಾಮನೋ, ಬೆಳೆದ ರಾಮನೋ ಕಾಮಿತಾರ್ಥನೀಯಲಿ!

ಕಿರುಕುಳ: ಎಲ್ಲೆಡೆ ಲೈಂಗಿಕ ಕಿರುಕುಳ : ಹಿರಿ'ಕುಳ'ಗಳಿಂದ !

ಮಾಯೆ : ಹೆಣ್ಣು ಮಾಯೆಯೆ? ಖಂಡಿತ ಅಲ್ಲ : "ನಾರೀ ಸತ್ಯಂ; ಜಗನ್ಮಿತ್ಯಾ!"

ಆತ್ಮಹತ್ಯೆ : ಕೆಲವೊಮ್ಮೆ ಆತ್ಮಹತ್ಯೆಯ ಯೋಚನೆ : ಸ್ವದುಃಖದಿಂದಲ್ಲ; ಪರದುಃಖ, ದುರಿತ, ದುರಂತಗಳಿಂದ.

ಆದ್ಯಂತ : "ಅಂತ್ಯಕ್ರಿಯೆ ನೆರವೇರಿಸಿದ ಮಹಿಳೆಯರು" ಎಂದೊಂದು ಸುದ್ದಿ. 'ಆದಿಕ್ರಿಯೆ'ಯೂ ಅವರದೇ ಅಲ್ಲವೆ?

ಅತ್ತೆ–ಸೊಸೆ : ಈಗ ಸಂಸಾರದಲ್ಲಿ ಅತ್ತೆ ಯಾರು, ಸೊಸೆ ಯಾರು? ಹೆಂಡತಿಯೇ ಅತ್ತೆ, ಗಂಡನೆ ಸೊಸೆ!

ಕೇಂದ್ರ: ಇಂತ ಚೆಲುವೆಗೂ ರೋಗ ರುಜಿನವೆ, ನೋವೆ, ಮುಪ್ಪೆ, ಸಾವೆ? ಶಿವ ಶಿವಾ! ಏನೇ ಆಗಲಂತೆ, ಚಂದ್ರ ಸದಾ ಕುತೂಹಲದ ಕೇಂದ್ರ !

ಸುದೈವ : ವಿಧಿಕೃತ ಸಮಸ್ಯೆಗಳೇನೇ ಇರಲಿ; ಹೆಣ್ಣಿನ ಸುದೈವ: ಬೆಳಗ್ಗೆ ಎದ್ದ ಕೂಡಲೇ ಕನ್ನಡಿ ಹಿಡಿದು ನಿಲ್ಲಬೇಕಿಲ್ಲ.


ಸುಳ್ಳು : ಸುಳ್ಳು ಹೇಳುವುದು ಕರಗತವಲ್ಲ (ಒಬ್ಬರೆಂದಂತೆ), ಅದು ಜಿಹ್ವಾಗತ!

ಸ್ಥಾಯಿ : ನಗರದ ಕಾರ್ಯಕ್ರಮಗಳಲ್ಲಿ ಎಲ್ಲರೂ, ಎಲ್ಲವೂ ಸಂಚಾರಿ; ಮಡ್ಡೀಕೆರೆ ಗೋಪಾಲ್ ಮಾತ್ರ ಸ್ಥಾಯಿ.


–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ಚುನಾವಣಾ ಬಾಂಡುಗಳ ಅಂತ್ಯ: ಮುಂದೇನು?

ರಾಜ್ಯವೇ ಪೂರೈಸುವ ನಿಧಿ: ಒಂದು ಪ್ರಜಾಪ್ರಭುತ್ವೀಯ ಪರ್ಯಾಯ–1



ಪ್ರೊ.ಎಂ.ಉಮಾಪತಿ
ನಿವೃತ್ತ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ



> ಇಂದಿನ ರಾಜಕೀಯದ ಬಾಹುಬಲಿ ಎಂದರೆ ಹಣ ಬಲವಾಗಿದೆ. ಇದು ನಮ್ಮ ಪ್ರಜಾಪ್ರಭುತ್ವವನ್ನು ನಗೆಪಾಟಲಿಗೀಡು ಮಾಡಿದೆ. ಮತದಾರರನ್ನು ಪ್ರಲೋಭನೆಗೆ ಒಳಪಡಿಸಿ, ಮತ್ತೇರಿದವರಂತೆ ಮಾಡಿ ಪ್ರಜಾಶಕ್ತಿ ಮತ್ತು ಹಿತಗಳನ್ನು ಹಿಂದಕ್ಕೆ ತಳ್ಳಿ, ಪ್ರಜಾಪ್ರಭುತ್ವವನ್ನು ಉಳ್ಳವರ ಹಿತಸೇವಕನನ್ನಾಗಿಸಿದೆ. ನಮ್ಮ ಚುನಾವಣೆಗಳಲ್ಲಿ ಹೆಚ್ಚುತ್ತಿರುವ ಕೋಟ್ಯಾಧಿಪತಿ ಅಭ್ಯರ್ಥಿಗಳ ಸಂಖ್ಯೆ, ಚುನಾಯಿತರಾಗಿ ನಮ್ಮ ಪ್ರತಿನಿಧಿ ಸಭೆಗಳನ್ನು ಅಲಂಕರಿಸುತ್ತಿರುವ ಕೋಟ್ಯಾಧೀಶರ ಸಂಖ್ಯೆ ಮತ್ತು ಚುನಾವಣಾ ಸಂದರ್ಭಗಳಲ್ಲಿ ಮಾದರೀ ಸಂಹಿತೆಗಳ ಉಲ್ಲಂಘಿಸಿದ ಕಾರಣಕ್ಕಾಗಿ ನಮ್ಮ ಚುನಾವಣಾಧಿಕಾರಿಗಳು ವಶಪಡಿಸಿಕೊಳ್ಳುತ್ತಿರುವ ಸಹಸ್ರಾರು ಕೋಟಿ ರೂ.ಗಳ ನಗದು ಹಣದ ವರದಿಗಳು ಇದಕ್ಕೆ ಸಾಕ್ಷಿಯಾಗಿವೆ.

ರಾಜಕೀಯ ಪಕ್ಷಗಳ ಹಾಗೂ ಅವುಗಳ ಚುನಾವಣಾ ವೆಚ್ಚವನ್ನು ಭರಿಸಲೆಂದು ಚುನಾವಣಾ ಬಾಂಡುಗಳನ್ನು ಒಂದು ನವೀನ ರೀತಿಯ ಹಣ ಒದಗಿಸುವ ವಿಧಾನವೆಂದು, 2017 ರಲ್ಲಿ ಆಲೋಚಿಸಿ 2018ರಿಂದ ಜಾರಿಗೊಳಿಸಲಾಯಿತು. ಚುನಾವಣೆಗಳಲ್ಲಿ ಕಪ್ಪುಹಣ ಹಾಗೂ ಭ್ರಷ್ಟಾಚಾರದ ಪಾತ್ರವನ್ನು ಕೊನೆಗೊಳಿಸಿ ಪಾರದರ್ಶಕತೆಯನ್ನು ತರುವುದು ಇದರ ಹಿಂದಿನ ಉದ್ದೇಶವೆಂದು ಇದನ್ನು ಜಾರಿಗೊಳಿಸಿದ ಕೇಂದ್ರ ಸರ್ಕಾರದ ವಾದವಾಗಿತ್ತು. ಇದರ ವಿರುದ್ಧ ಅನೇಕ ದಾವೆಗಳನ್ನು ಸುಪ್ರೀಂಕೋರ್ಟ್‌ನಲ್ಲಿ ಹೂಡಲಾಗಿತ್ತು. ನ್ಯಾಯಾಲಯವು ಇದರ ಬಗ್ಗೆ ಈ ವರ್ಷದ ಫೆಬ್ರವರಿ ತಿಂಗಳ 15ರಂದು ನೀಡಿದ ತೀರ್ಪಿನಲ್ಲಿ ಈ ಚುನಾವಣಾ ಬಾಂಡುಗಳನ್ನು 'ಅಸಂವಿಧಾನಿಕ' ಎಂದು ಕರೆದು ಅಂತ್ಯಗೊಳಿಸಿತು.

ಈ ತೀರ್ಪಿನಲ್ಲಿ ನ್ಯಾಯಾಲಯವು ನೀಡಿದ ಕಾರಣಗಳು ಬಹಳಷ್ಟಿದ್ದವು.

- **ಈ ಚುನಾವಣಾ ಬಾಂಡು ಮಾರ್ಗ ಪಾರದರ್ಶಕತೆ ತಂದು ಕಪ್ಪುಹಣವನ್ನು ಕೊನೆಗೊಳಿಸುವ ಉದ್ದೇಶದಲ್ಲಿ ಸಫಲವಾಗಿಲ್ಲ.**
- **ಭಾರತೀಯ ರಿಸರ್ವ್ ಬ್ಯಾಂಕ್ ಹಾಗೂ ಚುನಾವಣಾ ಆಯೋಗದ ವಿರೋಧಗಳನ್ನು ತಿರಸ್ಕರಿಸಿ ಈ ಬಾಂಡುಗಳನ್ನು ಜಾರಿಗೊಳಿಸಲಾಗಿತ್ತು.**
- **ಇದಕ್ಕಾಗಿ ರಿಸರ್ವ್ ಬ್ಯಾಂಕ್, ಬ್ಯಾಂಕಿಂಗ್ ಕಾಯಿದೆ ಮತ್ತಿತರ ಅನೇಕ ಕಾಯ್ದೆಗಳನ್ನು ಅನಾದರ ಮಾಡಲಾಗಿತ್ತು.**
- **ಇಂತಹ ಕಾಯ್ದೆಗಳಿಗೆ ಅನುಮಾನಾಸ್ಪದವಾದ ತಿದ್ದುಪಡಿಗಳನ್ನು ಮಾಡಲಾಗಿತ್ತು.**
- **ಈ ತಿದ್ದುಪಡಿಗಳಿಗಾಗಿ ಒಪ್ಪಲಾಗದ 'ಹಣಕಾಸು ಮಸೂದೆ' ಮಾರ್ಗವನ್ನು ಬಳಸಲಾಗಿತ್ತು.**
- **ಈ ಚುನಾವಣಾ ಬಾಂಡುಗಳ ವ್ಯವಹಾರದಲ್ಲಿ ಯಾರು, ಯಾರಿಗೆ ಹಣ ನೀಡಿದರು ಎನ್ನುವುದನ್ನು ತಿಳಿಯುವ ಮತದಾರನ, ಸಂವಿಧಾನದ ವಿಧಿ 19 (1)(ಎ) ಪ್ರಕಾರ ಇರುವ ಮಾಹಿತಿ ಹಕ್ಕನ್ನು ಉಲ್ಲಂಘಿಸಲಾಗಿತ್ತು.**
- **ಈ ಮಾರ್ಗದ ಹಣಕಾಸು ವ್ಯವಹಾರದ ಹಿಂದೆ ಕೊಟ್ಟು–ಕೊಳ್ಳುವ (ಕ್ವಿಡ್–ಪ್ರೊ–ಕೊ) ಭ್ರಷ್ಟ ವ್ಯವಹಾರದ ವಾಸನೆಯೂ ಇದೆ ಎಂದು ನ್ಯಾಯಾಲಯ ಅನುಮಾನಪಟ್ಟಿತು.**

ಈ ತೀರ್ಪು ಬರುವುದರೊಳಗೆ, ಅಂದರೆ ಮಾರ್ಚ್ 2018 ರಿಂದ ಜನವರಿ 2024ರವರೆಗೆ, ಈ ಬಾಂಡ್ ಯೋಜನೆಯಡಿ ರೂ.16518 ಕೋಟಿ ರೂ. ಮೌಲ್ಯದ 28,030 ಬಾಂಡುಗಳ ವ್ಯವಹಾರ ನಡೆದಿತ್ತು. ಇವುಗಳಲ್ಲಿ ರೂ.16492 ಕೋಟಿ ಮೌಲ್ಯದ 27,811 ಬಾಂಡ್‌ಗಳನ್ನು ನಗದೀಕರಿಸಲಾಗಿತ್ತು. ಈ ವ್ಯವಹಾರದ ಲಾಭ ಶೇಕಡ 55 ರಷ್ಟು ಆಳುತ್ತಿರುವ ಬಿಜೆಪಿ ಪಕ್ಷಕ್ಕೂ, ಉಳಿದದ್ದು ಇತರೆ 9 ರಾಜಕೀಯ ಪಕ್ಷಗಳಿಗೆ ಸಂದಿತ್ತು. ಚುನಾವಣಾ ಬಾಂಡುಗಳ ವ್ಯವಹಾರವನ್ನು ಆವರಿಸಿದ್ದ ಕತ್ತಲೆಯ ಮೇಲೆ ಈ ತೀರ್ಪು ಸಾಕಷ್ಟು ಬೆಳಕನ್ನು ಚೆಲ್ಲಿತ್ತು.

ಚುನಾವಣಾ ಬಾಂಡುಗಳ ಅಂತ್ಯವಾಯಿತು–ಮುಂದೇನು? ಎಂಬ ಪ್ರಶ್ನೆ ಎಲ್ಲರದಾಗಿತ್ತು. ಏಪ್ರಿಲ್ 2, 2024ರ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಅಬ್ರಕಡಬ್ರ ಅಂಕಣದಲ್ಲಿ ಬಂದ ಈ ಕುರಿತ ಬರಹ ಪ್ರಭಾವಶಾಲಿಯಾಗಿತ್ತು. ಭಾರತದ ಪ್ರಜಾಪ್ರಭುತ್ವದ ಬಲ ಮತ್ತು ಆರೋಗ್ಯದ ಬಗ್ಗೆ ಕಳಕಳಿ ವಿಚಾರ ಪ್ರಚೋದಕವಾಗಿತ್ತು. ಈ ಕೆಳಗಿನ ಲೇಖನ ಇದನ್ನು ಮುಂದುವರಿಸುವುದಾಗಿದೆ. ಇದರಲ್ಲಿ ಪ್ರಜಾಪ್ರಭುತ್ವದ ಅರ್ಥ ಹಾಗೂ ಆಚರಣೆಗಳ ಸಾರ, ಆಚರಣೆಯಲ್ಲಿ ಹಣ ಬಲದ ಆಟಾಟೋಪಗಳನ್ನು ವಿವರಿಸಿ ಪರಿಹಾರಗಳನ್ನು ಹುಡುಕುವ ಪ್ರಯತ್ನ ಮಾಡಲಾಗಿದೆ.

ಪ್ರಜಾಪ್ರಭುತ್ವದ ಸಾರ

ಪ್ರಜೆಗಳನ್ನು ಕೇಂದ್ರ ಬಿಂದುವನ್ನಾಗಿಸಿ, ಅವರ ಸಾರ್ವಭೌಮತ್ವವನ್ನು ಒತ್ತಿ ಹೇಳಿ ಪ್ರಜಾಹಿತವನ್ನು ಸಾಕ್ಷಾತ್ಕಾರಗೊಳಿಸುವುದು ಪ್ರಜಾಪ್ರಭುತ್ವದ ಸಾರ. ಈ ಹಿನ್ನೆಲೆಯಲ್ಲಿ, ಹತ್ತೊಂಬತ್ತನೇ ಶತಮಾನದ ಮಧ್ಯ ಭಾಗದಲ್ಲಿ ಅಮೇರಿಕಾದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್‌ರವರು **ಪ್ರಜಾಪ್ರಭುತ್ವವೆಂದರೆ ಪ್ರಜೆಗಳಿಂದಲೇ ನಡೆಯುವ, ಪ್ರಜೆಗಳಿಗೆ ಇರುವ, ಪ್ರಜೆಗಳದ್ದೇ ಆದ ಸರ್ಕಾರ** (Government by the people, for the people and of the people) ಎಂದು ವಿವರಿಸಿದ್ದರು. ಆದರೆ **'ಪ್ರಜಾಪ್ರಭುತ್ವ ಸಿದ್ಧಾಂತ'** ಎಂಬ ಗ್ರಂಥ ರಚಿಸಿದ ಗಿವಾನಿ ಸಾರಟೋರಿ ಎಂಬ ರಾಜ್ಯಶಾಸ್ತ್ರಜ್ಞ, ಪ್ರಜಾಪ್ರಭುತ್ವದಲ್ಲಿ ಎಲ್ಲಾ ಅಧಿಕಾರ ಪ್ರಜೆಗಳದ್ದೇ ಆಗಿರುವ ಹಾಗೂ ಪ್ರಜೆಗಳೇ ಆಳುವ ಸರ್ಕಾರ ಎನ್ನುವುದು ಸುಳ್ಳು, ಎಲ್ಲಾ ಸರ್ಕಾರಗಳೂ ಕೆಲವರಿಂದಲೇ ನಡೆಯುವುದು ಎನ್ನುವುದು ಸತ್ಯ ಎಂದು ವಿವರಿಸಿದರು. ಪ್ರಜಾಪ್ರಭುತ್ವ ಎಂದರೆ ಪ್ರಜಾಪ್ರತಿನಿಧಿಗಳಿಂದ (Representative) ನಡೆಯುವ, ಪ್ರಜಾಹಿತಕ್ಕೆ ಸ್ಪಂದಿಸುವ (Responsive) ಹಾಗೂ ಪ್ರಜೆಗಳಿಗೆ ಜವಾಬ್ದಾರಿಯಿಂದ ನಡೆದುಕೊಳ್ಳುವ (Responsible) ಸರ್ಕಾರ ಎಂಬುದನ್ನು ಎತ್ತಿ ಹಿಡಿದರು.

ಇಂತಹ ನಾಗರಿಕ ಸರ್ಕಾರಿ ವ್ಯವಸ್ಥೆಯನ್ನು ಸಾಧ್ಯ ಮಾಡಲು, ಪ್ರಜಾಪ್ರಭುತ್ವವು ಅಧಿಕಾರ ಕೇಂದ್ರೀಕರಣವನ್ನು ವಿರೋಧಿಸುತ್ತದೆ. ಅಧಿಕಾರ ವಿಭಜನಾ ಸೂತ್ರವನ್ನು ಅನುಸರಿಸುತ್ತದೆ. ಸರ್ಕಾರದ ಅಧಿಕಾರಗಳನ್ನು ಪ್ರತಿ ಹಂತದಲ್ಲೂ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಅಧಿಕಾರಗಳೆಂದು ಬೇರ್ಪಡಿಸುತ್ತದೆ. ಅಲ್ಲದೇ ದೇಶದ ವಿವಿಧ ಹಂತಗಳಲ್ಲಿರುವ ಅಂದರೆ ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳಿಗೂ ವಿಭಜಿಸಿ ಹಂಚುತ್ತದೆ. ಅಧಿಕಾರದ ಕೇಂದ್ರೀಕರಣ ಆಗಿ, ಅದು ಹುಚ್ಚು ಹೊಳೆಯಾಗಿ ಹರಿಯುವುದನ್ನು ತಪ್ಪಿಸುವ ಉದ್ದೇಶ ಇಲ್ಲಿದೆ. ಅಧಿಕಾರವನ್ನು ವ್ಯವಸ್ಥಿಸುವಲ್ಲಿ ತಡೆ ಮತ್ತು ಸಮತೋಲಿಸುವ (Government by check and balance) ಸೂತ್ರವನ್ನು ಅಳವಡಿಸಿ, ವಿವಿಧ ಅಧಿಕಾರಸ್ಥರ ಹಾಗೂ ಜನರ ನಡುವೆ ವಿಚಾರ ವಿನಿಮಯದ ಮೂಲಕ (Government by discussion) ನಿರ್ವಹಣೆ ಆಗುವಂತೆ ಮಾಡುವ ಉದ್ದೇಶ ಪ್ರಜಾಪ್ರಭುತ್ವದ್ದಾಗಿದೆ. ಇದರಿಂದಲೇ ಪ್ರಜಾಪ್ರಭುತ್ವ ಸರ್ಕಾರವು ವಿವೇಕಯುತವಾಗಿ ನಡೆದು ಪ್ರಜಾಹಿತವನ್ನು ಕೇಂದ್ರ ಸ್ಥಾನದಲ್ಲಿರಿಸುವ ಸರ್ಕಾರವಾಗುತ್ತದೆ.

ಪ್ರಜಾಪ್ರಭುತ್ವದ ಆಚರಣೆ

ಪ್ರಜಾಪ್ರಭುತ್ವಕ್ಕೆ, ಮೇಲಿನಂತಹ ಉತ್ತಮ ತಾತ್ವಿಕ ತಳಹದಿ ಇದ್ದರೂ, ಆಚರಣೆಯಲ್ಲಿ ಪ್ರಜಾಪ್ರಭುತ್ವದ ನಡವಳಿಕೆ ಇವುಗಳಿಗೆ ಅಪಚಾರವೆಸಗುತ್ತಾ ನಡೆದಿರುವುದು ನಮ್ಮೆಲ್ಲರಿಗೂ ಸಾಕಷ್ಟು ಮನವರಿಕೆ ಆಗಿದೆ. ಈ ಕಾರಣದಿಂದಲೇ ಅಬ್ರಹಾಂ ಲಿಂಕನ್‌ರ ಪ್ರಜಾಪ್ರಭುತ್ವವೆಂದರೆ ಪ್ರಜೆಗಳಿಂದಲೇ ನಡೆಯುವ, ಪ್ರಜೆಗಳಿಗೆ ಇರುವ, ಪ್ರಜೆಗಳದ್ದೇ ಆದ ಸರ್ಕಾರ ಎನ್ನುವ ವಿವರಣೆಯನ್ನು, 1960–70ರಲ್ಲಿ ಭಾರತದ ಲೋಕಸಭೆಯ ಸದಸ್ಯರಾಗಿದ್ದ ನಾಥ ಪೈ ಅವರು ಕ್ರಿಯಾತ್ಮಕವಾಗಿ ತಿರುಚಿ ಜನರಿಂದಲೇ, ಜನರಿಗಾಗಿ, ಜನರದ್ದೇ ಅಂದರೆ, ಜನರನ್ನು ಕೊಂಡುಕೊಂಡು, ಜನರನ್ನು ದೂರವಿಟ್ಟು, ಪ್ರಶ್ನಿಸಿದರೆ ಅಂತಹವರನ್ನು ಕೈಬಿಟ್ಟು ಇಲ್ಲವೇ ಹೊರಗಿಟ್ಟು ನಡೆಯುವ ಸರ್ಕಾರವೆಂದು ಚಟಾಕಿ ಹಾರಿಸಿದ್ದರು.

ಚುನಾವಣೆ, ಪ್ರಜಾಪ್ರಭುತ್ವದ ನಂದಿಕಂಬ ಹಾಗೂ ಆಧಾರಸ್ತಂಭವಾಗಿದೆ. ಇದರ ಆರಂಭದಿಂದಲೂ ಪಟ್ಟಭದ್ರ (ಸಂಪ್ರದಾಯಸ್ಥ) ಹಿತಾಸಕ್ತಿಗಳು ಚುನಾವಣೆಯ ಮೇಲೆ ಪ್ರಭಾವ ಬೀರಿ, ತಮ್ಮದೇ ಅನುಕೂಲಕ್ಕಾಗಿ ಅದನ್ನು ಬಳಸಿಕೊಂಡು ಸಾರ್ವಜನಿಕ ಹಿತವನ್ನು ಮೂಲೆಗೆ ತಳ್ಳುವ ಕೆಲಸವನ್ನು ಮಾಡಿಕೊಂಡು ಬಂದಿವೆ. ಇದರಿಂದಲೇ ಮೊದ ಮೊದಲು ಮತದಾನದ ಹಕ್ಕು ಲ್ಯಾಂಡ್ ಲಾರ್ಡ್‌ಗಳ (ಭೂ ಮಾಲೀಕರ), ಪಾಳೆಗಾರರ, ಶ್ರೀಮಂತರ, ವಿದ್ಯಾವಂತರ, ತೆರಿಗೆ ನೀಡುವವರ ಹಾಗೂ ಕೇವಲ ಗಂಡಸರ ಹಕ್ಕಾಗಿದ್ದು, ನಿಧಾನವಾಗಿ ಸುಧಾರಿಸುತ್ತಾ, 20ನೇ ಶತಮಾನದಲ್ಲಿ ಎಲ್ಲಾ ವಯಸ್ಕರ ಮತದಾನ ಹಕ್ಕಾಗಿ (Universal Adult Franchise) ಬದಲಾವಣೆಯಾಯಿತು. ಇದರಿಂದ ಪ್ರತೀ ವಯಸ್ಕ ವ್ಯಕ್ತಿಗೆ ನಮ್ಮನ್ನು ಯಾರು ಆಳಬೇಕು ಹಾಗೂ ಸಾರ್ವಜನಿಕ ಹಿತವನ್ನು ಹೇಗೆ ಕಾಪಾಡಬೇಕು ಎನ್ನುವ ಅವಕಾಶ ದೊರೆತಿದೆ.

ಆದರೆ, ಪಟ್ಟಭದ್ರ ಹಿತಾಸಕ್ತಿಗಳು ಸಾರ್ವಜನಿಕ ಅಧಿಕಾರವಾಗಲೀ ಅಥವಾ ಸಾರ್ವಜನಿಕ ಹಿತಾಸಕ್ತಿಯಾಗಲೀ ಅಶಕ್ತವಾಗಿಯೇ ಇರುವಂತೆ ಸದಾ ನೋಡಿಕೊಂಡಿದ್ದಾರೆ. ತಮ್ಮ 'ತೋಳ್ಬಲ'ವನ್ನು 'ಹಣದ ಬಲ' ಬಳಸಿ ಸರ್ಕಾರಗಳನ್ನು 'ರಾಷ್ಟ್ರದ ಹಿತದ' ಮುಸುಕು ಹಾಕಿ ಬಲಿಷ್ಠರ ಹಿತಸಾಧನವಾಗಿ ಉಳಿಸಿಕೊಂಡಿದ್ದಾರೆ.

ಆಧುನಿಕ ಚುನಾವಣಾ ಪದ್ಧತಿಯ ತವರಾದ ಇಂಗ್ಲೆಂಡಿನಲ್ಲಿ ಆರಂಭದಲ್ಲಿ ಚುನಾವಣೆಗಳು ಮುಕ್ತ ಸಾರ್ವಜನಿಕ ಸಭೆಗಳಲ್ಲಿ ಮತದಾರ ಕೈ ಎತ್ತುವುದರ ಮೂಲಕ ನಡೆಯುತ್ತಿದ್ದವು. ಇಂತಹ ಸಂದರ್ಭದಲ್ಲಿ ಪರಸ್ಪರ ಹೊಡೆದಾಟ ಇಲ್ಲವೆ ಉನ್ಮಾದ ಕೂಟದ ಸಂದರ್ಭಗಳಾಗುತ್ತಿದ್ದವು. ಒಬ್ಬ ತಜ್ಞರ ಅಭಿಪ್ರಾಯ ಇಂತಿದೆ;

"ಬೀರಿನ ನದಿ ಹರಿಯುತ್ತಿತ್ತು; ಲಂಚವನ್ನು ಮುಕ್ತವಾಗಿ ಕೊಟ್ಟು ತೆಗೆದುಕೊಳ್ಳಲಾಗುತ್ತಿತ್ತು; ದಾಂಡಿಗರು ಮತದಾರರನ್ನು ಬೆದರಿಸುತ್ತಾ, ಬಲವಂತ ಮಾಡುತ್ತಾ ಓಡಾಡುತ್ತಿದ್ದರು; ಮತದಾರರಲ್ಲದವರೂ ನುಗ್ಗಿ ಬಂದು ಪಾಲ್ಗೊಳ್ಳುತ್ತಿದ್ದರು; ತಮ್ಮ ಅಭಿಪ್ರಾಯ ತಿಳಿಸಲು 'ಕೊಳೆತ ಸೇಬುಗಳನ್ನೋ ಇಲ್ಲ ಸತ್ತ ಬೆಕ್ಕುಗಳನ್ನೋ ಎಸೆದಾಡುತ್ತಿದ್ದರು; ಕೆಲ ತಲೆಗಳು ಹೋಳಾಗುತ್ತಲೂ ಇದ್ದವು; ಏನೇ ಆದರೂ ಅದೊಂದು ಉನ್ಮಾದ ಕೂಟದ ಸಮಯವಾಗಿರುತ್ತಿತ್ತು. (Ogg. F.A. English Government and politicis 1936 PP 298-99)

ಇಂತಹ ಚುನಾವಣಾ ಕ್ಷೇತ್ರಗಳನ್ನು ಕೊಳೆತ ಕ್ಷೇತ್ರ (Rotten Borough) ಅಥವಾ ಬಲಿಷ್ಠರ ಜೋಬಿನ ಕ್ಷೇತ್ರ (Pocket Borough) ಎಂದು ಪರಿಗಣಿಸಲಾಗುತ್ತಿತ್ತು.

ಕುಡಿಯುವ ಬೀರಿನ (ಮದ್ಯದ) ಬಗ್ಗೆ ಮೇಲಿನ ಹೇಳಿಕೆಗಳಿಗೆ ಹೋಲುವ ಒಂದು ವಿಷಯ ನಮ್ಮಲ್ಲಿ ಈಗ ನಡೆಯುತ್ತಿರುವ ಲೋಕಸಭಾ ಚುನಾವಣೆ–2024 ರಲ್ಲೂ ಕಂಡುಬಂದಿದೆ. 'ದಿ ಹಿಂದೂ' ಪತ್ರಿಕೆಯ (ದಿನಾಂಕ 8 ಏಪ್ರಿಲ್, ಪುಟ 5ರಲ್ಲಿ), ಹಾಸನದಲ್ಲಿ ಏಪ್ರಿಲ್ 6 ರಂದು ರೂ. 9.54 ಕೋಟಿ ಮೌಲ್ಯದ ಬಿಯರ್ ಅನ್ನು, ಚುನಾವಣಾ ಮಾದರಿ ನೀತಿಯ ಉಲ್ಲಂಘನೆ ಕಾರಣಕ್ಕಾಗಿ, ಜಿಲ್ಲಾಡಳಿತ ವಶಪಡಿಸಿಕೊಂಡಿತು ಎನ್ನುವ ವರದಿ ಇದೆ. ಇದಕ್ಕೆ ಏನೆನ್ನಬಹುದು? ಬಿಯರ್‌ಗೆ ಮೃತ್ಯುವಿಲ್ಲ! ಪಟ್ಟಭದ್ರ ಹಿತಾಸಕ್ತರೂ ಅಮರ! ಬಹುಶಃ ಇವೆರಡೂ ಸತ್ಯ ಮತ್ತು ನಿರಂತರ ಎನ್ನುವುದು ಹೆಚ್ಚು ಸೂಕ್ತವಾದುದೇನೊ!)

ಚುನಾವಣಾ ಸುಧಾರಣೆ ಕಾಲಕ್ರಮೇಣ ನಿಧಾನವಾಗಿ ಬಂದು ಗುಪ್ತ ಮತದಾನ, ಮತಪತ್ರ, ಮತಪೆಟ್ಟಿಗೆ ಮತ್ತು ಮತದಾನ ಕೇಂದ್ರಗಳು ಜಾರಿಗೆ ಬಂದವು. ಇದನ್ನು ಅನುಸರಿಸಿ ತೋಳ್ಬಲ ಮತ್ತು 'ಹಣ ಬಲ'ದವರು ಮತದಾನ ಕೇಂದ್ರಗಳಿಗೆ ಮುತ್ತಿಗೆ ಹಾಕಿ, ವಶಪಡಿಸಿಕೊಂಡು ಮತಪೆಟ್ಟಿಗೆಗಳಿಗೆ ತಮ್ಮ ಮನ ಬಂದಂತೆ ಮತ ಒತ್ತಿ ತುಂಬುವ ತಂತ್ರಗಳನ್ನು ತಮ್ಮದಾಗಿಸಿಕೊಂಡರು. ನಂತರ ಬಂದ ಕಂಪ್ಯೂಟರ್ ಆಧಾರಿತ ಚುನಾವಣಾ ಮತಯಂತ್ರ (EVM) ಅಂದರೆ Electronic voting machineಗಳಿಂದಾಗಿ ಈ ಮತದಾನ ಕೇಂದ್ರದ ಮುತ್ತಿಗೆ ಕಡಿಮೆಯಾಯಿತು. ಆದರೆ ಸೈಬರ್ ಕ್ರೈಂ (ಅಪರಾಧಕ್ಕೆ ಕಂಪ್ಯೂಟರ್ ಯಂತ್ರಗಳ ದುರ್ಬಳಕೆ) ಸಾಧ್ಯತೆಯು ಈ ಇವಿಎಂಗಳ ನಿಷ್ಪಕ್ಷಪಾತತೆಯ ಮೇಲೆ ಕಪ್ಪು ನೆರಳು ಮೂಡಿಸಿದೆ. ದೇಶಗಳು ಈ ನಿಟ್ಟಿನಲ್ಲಿ ಇವಿಎಂನಿಂದ ಮತದಾನ ಪೆಟ್ಟಿಗೆಗೇ ವಾಪಸ್ ಆಗಿರುವುದು ಯೂರೋಪಿನಲ್ಲಿ (ಉದಾಹರಣೆ ಜರ್ಮನಿ) ಕಂಡುಬಂದಿದೆ. ನಮ್ಮ ಭಾರತದಲ್ಲಿ ಈ ವಿಷಯದಲ್ಲಿ ಶ್ರೇಷ್ಠ ನ್ಯಾಯಾಲಯದಲ್ಲಿ ದಾವೆಗಳಿದ್ದು ಇನ್ನೂ ಅಂತಿಮ ನಿರ್ಧಾರ ಹೊರಬರಬೇಕಾಗಿದೆ.

ತೋಳ್ಬಲ–ಹಣದ ಬಲ

ಈ ಎರಡೂ ಕರಾಳ ಛಾಯೆಗಳಲ್ಲಿ ಇತ್ತೀಚೆಗೆ ತೋಳ್ಬಲದ ಬಳಕೆ ಕಡಿಮೆಯಾಗಿದೆ. ಆದರೆ ಇದು ಇಲ್ಲವೇ ಇಲ್ಲ ಎನ್ನಲಾಗದು. ನಮ್ಮ ಚುನಾವಣೆಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಲ್ಲಿ ಹಾಗೂ ಚುನಾಯಿತರಾಗುವ ಪ್ರತಿನಿಧಿ ಸಭೆಗಳ ಸದಸ್ಯರಲ್ಲಿ ಅಂದಾಜು ಒಂದನೇ ಮೂರು ಭಾಗದಷ್ಟು ಮಂದಿ ಕ್ರಿಮಿನಲ್ ಆಪಾದನೆಗಳನ್ನು ಎದುರಿಸುತ್ತಿರುವವರೇ ಆಗಿದ್ದಾರೆ ಎನ್ನುವ ವಿಚಾರ ಇದಕ್ಕೆ ಸಾಕ್ಷಿಯಾಗಿದೆ.

ಇಂದಿನ ರಾಜಕೀಯದ ಬಾಹುಬಲಿ ಎಂದರೆ ಹಣ ಬಲವಾಗಿದೆ. ಇದು ನಮ್ಮ ಪ್ರಜಾಪ್ರಭುತ್ವವನ್ನು ನಗೆಪಾಟಲಿಗೀಡು ಮಾಡಿದೆ. ಮತದಾರರನ್ನು ಪ್ರಲೋಭನೆಗೆ ಒಳಪಡಿಸಿ, ಮತ್ತೇರಿದವರಂತೆ ಮಾಡಿ ಪ್ರಜಾಶಕ್ತಿ ಮತ್ತು ಹಿತಗಳನ್ನು ಹಿಂದಕ್ಕೆ ತಳ್ಳಿ, ಪ್ರಜಾಪ್ರಭುತ್ವವನ್ನು ಉಳ್ಳವರ ಹಿತಸೇವಕನನ್ನಾಗಿಸಿದೆ. ನಮ್ಮ ಚುನಾವಣೆಗಳಲ್ಲಿ ಹೆಚ್ಚುತ್ತಿರುವ ಕೋಟ್ಯಾಧಿಪತಿ ಅಭ್ಯರ್ಥಿಗಳ ಸಂಖ್ಯೆ, ಚುನಾಯಿತರಾಗಿ ನಮ್ಮ ಪ್ರತಿನಿಧಿ ಸಭೆಗಳನ್ನು ಅಲಂಕರಿಸುತ್ತಿರುವ ಕೋಟ್ಯಾಧೀಶರ ಸಂಖ್ಯೆ ಮತ್ತು ಚುನಾವಣಾ ಸಂದರ್ಭಗಳಲ್ಲಿ ಮಾದರೀ ಸಂಹಿತೆಗಳ ಉಲ್ಲಂಘಿಸಿದ ಕಾರಣಕ್ಕಾಗಿ ನಮ್ಮ ಚುನಾವಣಾಧಿಕಾರಿಗಳು ವಶಪಡಿಸಿಕೊಳ್ಳುತ್ತಿರುವ ಸಹಸ್ರಾರು ಕೋಟಿ ರೂ.ಗಳ ನಗದು ಹಣದ ವರದಿಗಳು ಇದಕ್ಕೆ ಸಾಕ್ಷಿಯಾಗಿವೆ.

ಪರ್ಯಾಯ ಹಣಕಾಸು ವ್ಯವಸ್ಥೆಯ ಅನ್ವೇಷಣೆ

ಈ ಅನ್ವೇಷಣೆಗೆ ಮೊದಲು ಎರಡು ಪ್ರಮುಖ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿದೆ.

- **ಏಕೆ ನಮ್ಮ ಚುನಾವಣೆಗಳು ದುಬಾರಿ ವೆಚ್ಚದ್ದಾಗಿವೆ?**
- **ಪ್ರಜಾಪ್ರಭುತ್ವದ ಆರೋಗ್ಯ ವೃದ್ಧಿಸಲು ಯಾರು ಚುನಾವಣೆ ಮತ್ತು ರಾಜಕೀಯ ಪಕ್ಷಗಳ ವೆಚ್ಚವನ್ನು ಭರಿಸಬೇಕು?**

ಈ ಪ್ರಶ್ನೆಗಳಿಗೆ ಉತ್ತರ ಇಲ್ಲಿ ಸೂಚಕವಾಗಿ ಮಾತ್ರ ಸಾಧ್ಯ, ವಿವರವಾಗಿ ಅಲ್ಲ.

ನಮ್ಮ ಚುನಾವಣೆಗಳು ಅನವಶ್ಯಕವಾಗಿ ದುಂದು ವೆಚ್ಚದಾಯಕವಾಗಿವೆ. ನಮ್ಮ ಚುನಾವಣೆಗಳಲ್ಲಿ ಅತ್ಯಂತ ಗಮನಾರ್ಹ ಪಾತ್ರ ವಹಿಸುತ್ತಿರುವ ನೋಟು–ಓಟಿನ ನಂಟು ಇದನ್ನು ಉದ್ದೇಶಪೂರ್ವಕವಾಗಿ ಹೀಗೆ ವ್ಯವಸ್ಥಿಸಿದೆ. ರಾಜಕೀಯ ವರ್ಗವು ನೋಟು, ಓಟು ಮತ್ತು ಅಧಿಕಾರಗಳನ್ನು ಇದೇ ಕ್ರಮದಲ್ಲಿ ಬೇಟೆಯಾಡುತ್ತದೆ. ಇವರಿಗೆ ಹಣ ಒದಗಿಸುವ ಖಾಸಗಿ ಹಣದ ಚೀಲಗಳು ರಾಜಕೀಯ ವರ್ಗದೊಡನೆ ಗುಪ್ತವಾದ ಕೊಟ್ಟು–ಪಡೆಯುವ (quid-pro-give) ಒಪ್ಪಂದ ಮಾಡಿಕೊಂಡು ತಾವು ನೀಡಿದ ಹಣದ ದುಪ್ಪಟ್ಟು ಅಥವಾ ಮೂರು ಪಟ್ಟು ಹಣವನ್ನು ನಿಧಾನವಾಗಿ ವಸೂಲು ಮಾಡಿಕೊಳ್ಳುತ್ತಾರೆ.

ಚುನಾವಣೆಗಳಲ್ಲಿ ಖರ್ಚು ವಿಪರೀತವಾಗಿರಲು ಅನೇಕ ಕಾರಣಗಳಿವೆ. ಮೊದಲನೆಯ ಕಾರಣ ಸ್ಪರ್ಧಿಸುವ ಅಭ್ಯರ್ಥಿಗಳು ಹಾಗೂ ಪಕ್ಷಗಳ ಖಾಸಗೀ ಪ್ರಚಾರ ಮಾರುಕಟ್ಟೆಯನ್ನು ಅವಲಂಬಿಸಬೇಕಾಗಿರುವುದು. ನಿರ್ದಿಷ್ಟ ಕಾಲದಲ್ಲಿ ಬೇಡಿಕೆ ಹೆಚ್ಚುವುದರಿಂದ ಈ ಮಾರುಕಟ್ಟೆಯ ಸೇವೆಗಳ ಹಾಗೂ ಪದಾರ್ಥಗಳ ವೆಚ್ಚ ಏರುಮುಖವಾಗಿರುತ್ತದೆ. ವಿಪರೀತವಾದ ಚುನಾವಣಾ ಪ್ರಚಾರ ಸಾಮಾಗ್ರಿ ಮುದ್ರಣದ ಖರ್ಚು, ರೇಡಿಯೋ ಹಾಗೂ ಟಿವಿ ಛಾನಲ್‌ಗಳಲ್ಲಿ ಸಮಯ ಕಾಯ್ದಿರಿಸುವ ಖರ್ಚು, ಪ್ರಚಾರಕ್ಕಾಗಿ ಜಾಹೀರಾತು ಜಾಗ ಪಡೆಯುವ ಖರ್ಚುಗಳು ಇದರಲ್ಲಿ ಸೇರುತ್ತವೆ. ಇವುಗಳಿಗಿಂತ ಹೆಚ್ಚಾಗಿ ಮತದಾರರನ್ನು ಪ್ರಲೋಭಿಸಿ ಅವರ ಮತಗಳನ್ನು ಕೊಂಡುಕೊಳ್ಳುವ ಖರ್ಚು ಲೆಕ್ಕವಿಲ್ಲದಷ್ಟಾಗುತ್ತದೆ.

(ಮುಂದುವರೆಯುವುದು)

ಬೆಂಗಳೂರಿನಲ್ಲಿ ಕೆಎಎಸ್ ಅಧಿಕಾರಿ ಪತ್ನಿ, ಹೈಕೋರ್ಟ್ ವಕೀಲೆ ಚೈತ್ರಾ ಆತ್ಮಹತ್ಯೆ



ಬೆಂಗಳೂರು,ಮೇ 11– ಕರ್ನಾಟಕ ಹೈಕೋರ್ಟ್‌ನಲ್ಲಿ ವಕೀಲರಾಗಿದ್ದ ಚೈತ್ರಾ ಎಂಬುವರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬೆಂಗಳೂರಿನ ಸಂಜಯ ನಗರ ಬಳಿಯಿರುವ ಅಣ್ಣಯ್ಯ ಲೇಔಟ್‌ನಲ್ಲಿ ನಡೆದಿದೆ. ಚೈತ್ರಾ ಅವರ ಪತಿ ಕೆಎಎಸ್ ಅಧಿಕಾರಿಯಾಗಿದ್ದು, ಯಾರೂ ಮನೆಯಲ್ಲಿ ಇಲ್ಲದ ವೇಳೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಹೇಳಲಾಗಿದೆ. ಅವರ ಶವ ಮನೆಯ ಫ್ಯಾನೊಂದಕ್ಕೆ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಶವದ ಬಳಿ ಡೆತ್‌ನೋಟ್ ಸಿಕ್ಕಿದ್ದು ಅದನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಘಟನೆ ನಡೆದಾಗ ಶಿವಕುಮಾರ್ ಅವರು ಹೊರಗಡೆ ಹೋಗಿದ್ದರು. ಅವರು ಪುನಃ ಮನೆಗೆ ಹಿಂದಿರುಗಿದಾಗ ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ. ಕೆಐಎಡಿಬಿಯಲ್ಲಿ ಉಪವಿಭಾಗಾಧಿಕಾರಿ ಆಗಿರುವ ಶಿವಕುಮಾರ್, ಅವರು, 2016ರಲ್ಲಿ ಚೈತ್ರಾ ಅವರನ್ನು ವಿವಾಹವಾಗಿದ್ದರು. ಅವರಿಗೆ ಐದು ವರ್ಷದ ಮಗುವಿದೆ. ಆತ್ಮಹತ್ಯೆಯ ವಿಷಯ ತಿಳಿಯುತ್ತಿದ್ದಂತೆ ಶಿವಕುಮಾರ್ ಅವರ ನಿವಾಸಕ್ಕೆ ಆಗಮಿಸಿದ ಸಂಜಯ್ ನಗರ ಪೊಲೀಸರು, ಮೃತದೇಹವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ರವಾನಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಪೊಲೀಸರು ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದ್ದಾರೆ. ಚೈತ್ರಾ ಅವರ ಮೃತದೇಹದ ಪಕ್ಕ ಸಿಕ್ಕಿರುವ ಡೆತ್ ನೋಟ್‌ನಲ್ಲಿ ಅವರು, 'ನಾನು ಕಳೆದ ಕೆಲವು ತಿಂಗಳುಗಳಿಂದ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದೇನೆ. ಆದರೆ, ಅದರಿಂದ ಆಚೆ ಬರಲು ನಾನು ಪ್ರಯತ್ನ ನಡೆಸಿದ್ದು, ಅದು ಸಾಧ್ಯವಾಗಲಿಲ್ಲ. ಹಾಗಾಗಿ, ನಾನು ಆತ್ಮಹತ್ಯೆಗೆ ಶರಣಾಗುತ್ತಿದ್ದೇನೆ. ಮಗಳನ್ನು ಚೆನ್ನಾಗಿ ನೋಡಿಕೊಳ್ಳಿ, ಲೈಫ್ ಎಂಜಾಯ್ ಮಾಡಿ' ಎಂದು ಚೈತ್ರಾ ಬರೆದಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಶ್ರೀನಿವಾಸ ಪ್ರಸಾದ್ ಚಿಂತನೆ, ರಾಜಕೀಯ ಜೀವನ ಪ್ರತಿಯೊಬ್ಬರಿಗೂ ಪ್ರೇರಣೆ

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅಭಿಮತ

ಮೈಸೂರು, ಮೇ 11(ಬಿಎಲ್‌ಯು)– ಶ್ರೀನಿವಾಸ



ಪ್ರಸಾದ್ ಅವರ ಚಿಂತನೆ, ರಾಜಕೀಯ ಜೀವನ ಎಲ್ಲರಿಗೂ ಪ್ರೇರಣೆಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಂದವಾಡಿ ರಸ್ತೆಯ ಸಿಲ್ಕ್ ಫ್ಯಾಕ್ಟರಿ ಬಳಿಯ ಡಾ.ಬಿ.ಆರ್. ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್‌ನಲ್ಲಿ ಇಂದು ಶ್ರೀನಿವಾಸ ಪ್ರಸಾದ್ ಶ್ರದ್ಧಾಂಜಲಿ– ಸ್ವಾಭಿಮಾನಿಗೆ ಸಾವಿರದ ನುಡಿ ನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉಸಿರಿರುವ ತನಕ ಸ್ವಾಭಿಮಾನಿಯಾಗಿ ಸೈದ್ಧಾಂತಿಕ ನಿಲುವಿಗೆ ಬದ್ಧರಾಗಿ ಶ್ರೀನಿವಾಸ ಪ್ರಸಾದ್ ದಿಟ್ಟ ಹೋರಾಟ ಮಾಡಿದರು ಎಂದರು. ಶ್ರೀನಿವಾಸ ಪ್ರಸಾದ್ ಇಂದು ಬೌದ್ಧಿಕವಾಗಿ ನಮ್ಮ ಜೊತೆ ಇಲ್ಲದಿದ್ದರೂ ಅವರ ಸಾರ್ಥಕ ಬದುಕು ಹಾಗೂ ಬದುಕಿನ ಮಾರ್ಗ, ಸೈದ್ಧಾಂತಿಕ ನಿಲುವು ನಮ್ಮೊಟ್ಟಿಗಿದೆ. ಸಾರ್ವಜನಿಕ ಜೀವನದಲ್ಲಿ ತನ್ನದೆ ಆದ ಛಾಪು ಮೂಡಿಸಿದ ಹಿರಿಯ ನೇತಾರನನ್ನು ನಾವು ಕಳೆದುಕೊಂಡಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು. ಆರು ಬಾರಿ ಸಂಸದರಾಗಿ, ಎರಡು ಬಾರಿ ಶಾಸಕರಾಗಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದಲ್ಲಿ ಸಚಿವರಾಗಿ ಶ್ರೀನಿವಾಸ ಪ್ರಸಾದ್ ಸೇವೆ ಸಲ್ಲಿಸಿದ್ದಾರೆ. ಇಷ್ಟು ಚುನಾವಣೆಯಲ್ಲಿ ಗೆಲುವು ಸಾಧಿಸುವುದು ಅಷ್ಟು ಸುಲಭದ ಮಾತಲ್ಲ. ರಾಜಕಾರಣದಲ್ಲಿ ತಮ್ಮ ಸಾರ್ಥಕ ಬದುಕಿನ ಮೂಲಕ ಶ್ರೀನಿವಾಸ ಪ್ರಸಾದ್ ಮಾದರಿ ಜನಪ್ರತಿನಿಧಿಯಾಗಿದ್ದರು ಎಂದು ಯಡಿಯೂರಪ್ಪ ಹೇಳಿದರು.

ನಾನು ಪಕ್ಷಾಂತರಿಯಾಗಿರಬಹುದು, ಆದರೆ ಎಂದೂ ತತ್ವಾಂತರಿಯಲ್ಲ. ಸಮಾಜ ಸೇವಕನಾಗಲು ಸಿದ್ಧನಾದವನು ಮಹಾನ್ ವ್ಯಕ್ತಿಯಾಗುತ್ತಾನೆ ಎಂಬ ಅಂಬೇಡ್ಕರ್ ಮಾತುಗಳನ್ನು ಶ್ರೀನಿವಾಸ ಪ್ರಸಾದ್ ಹೇಳುತ್ತಿದ್ದರು. ಅವರ ಇಂತಹ ಮಾತುಗಳನ್ನು ಕೇಳುವುದಕ್ಕೆ ಚೆಂದ ಇರುತ್ತಿತ್ತು.ಇಂತಹ ವಿಶಿಷ್ಟ ವ್ಯಕ್ತಿತ್ವದ ನಾಯಕರು ವಿರಳ ಎಂದು ಅಭಿಪ್ರಾಯಪಟ್ಟರು.

ಶ್ರೀನಿವಾಸ ಪ್ರಸಾದ್ ಇತ್ತೀಚೆಗೆ ತಮ್ಮ ರಾಜಕೀಯ ಸುವರ್ಣ ಮಹೋತ್ಸವವನ್ನು ಆಚರಿಸಿಕೊಂಡಿದ್ದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದಂತೆ ಸಾಮಾಜಿಕ ನ್ಯಾಯದ ಚಾಂಪಿಯನ್ ಆಗಿದ್ದರು. ಈ ಮೂಲಕ ಶ್ರೀನಿವಾಸ ಪ್ರಸಾದ್ ಅವರ ಚಿಂತನೆ, ರಾಜಕೀಯ ಜೀವನ ಎಲ್ಲರಿಗೂ ಪ್ರೇರಣೆಯಾಗಿದೆ ಎಂದು ಯಡಿಯೂರಪ್ಪ ಹೇಳಿದರು.

ಶ್ರೀನಿವಾಸಪ್ರಸಾದ್ ಮೇಲ್ಪಂಕ್ತಿ ಹಾಕಿಕೊಟ್ಟ ಮಹಾನ್ ನಾಯಕ

ಶುದ್ಧ ಹಸ್ತದ ಶ್ರೀನಿವಾಸಪ್ರಸಾದ್ ನಮಗೆಲ್ಲಾ ಮೇಲ್ಪಂಕ್ತಿ ಹಾಕಿಕೊಟ್ಟ



ಮಹಾನ್ ನಾಯಕರಾಗಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು. ಶ್ರೀನಿವಾಸ ಪ್ರಸಾದ್ ತೀರ್ಮಾನಗಳು ವಸ್ತುನಿಷ್ಠವಾಗಿರುತ್ತೆ ಹೊರತು, ಜಾತಿ ನಿಷ್ಠವಾಗಿರುತ್ತಿರಲಿಲ್ಲ. ಇಂತಹ ಮಹಾನ್ ನಾಯಕ ಇಂದು ನಮ್ಮ ಜೊತೆಯಲ್ಲಿ ಇಲ್ಲದಿರಬಹುದು, ಆದರೆ ಅವರ ವ್ಯಕ್ತಿತ್ವ ನಮ್ಮ ಜೊತೆ ಸದಾ ಕಾಲ ಇರುತ್ತದೆ ಎಂದರು.

ಒಬ್ಬ ಗ್ರಾಮ ಪಂಚಾಯಿತಿ ಸದಸ್ಯ ಕೂಡ ನನ್ನನ್ನು ಟೀಕೆ ಮಾಡಿದ್ದಾನೆ. ಆದರೆ ಶ್ರೀನಿವಾಸ ಪ್ರಸಾದ್ ಎಂದೂ ನನ್ನನ್ನು ಟೀಕಿಸಿರಲಿಲ್ಲ. ನಾನು ಕೆಲವು ಹೇಳಿಕೆ ಕೊಟ್ಟಾಗ ನಾಲ್ಕು ಗೋಡೆ ಮಧ್ಯೆ ಕೂರಿಸಿ ಬುದ್ಧಿವಾದ ಹೇಳುತ್ತಿದ್ದರೆ ಹೊರತು, ಎಂದೂ ಬಹಿರಂಗವಾಗಿ ನನ್ನನ್ನು ಟೀಕೆ ಮಾಡಿರಲಿಲ್ಲ. ನನ್ನ ಹಾಗೂ ಅವರ ಅಳಿಯ ಹರ್ಷವರ್ಧನ್ ನಡುವೆ ಕೆಲವು ಬಾರಿ ಸಣ್ಣಪುಟ್ಟ ವಿಚಾರದಲ್ಲಿ ಕೋಳಿ ಜಗಳವಾದಾಗ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಅಳಿಯನ ಪರ ವಾದ ಕೂಡ ಮಾಡುತ್ತಿರಲಿಲ್ಲ ಎಂದು ಪ್ರತಾಪ್ ಸಿಂಹ ಹೇಳಿದರು. ನನ್ನನ್ನು ಮನೆ ಮಗನ ರೀತಿ ಪ್ರೀತಿಯಿಂದ ಕಾಣುತ್ತಿದ್ದರು. ಇಂದು ಅವರ ಅಗಲಿಕೆ ನನ್ನ ತಂದೆ ಕಳೆದುಕೊಂಡಷ್ಟು ನೋವಾಗಿದೆ ಎಂದರು. ಶ್ರೀನಿವಾಸ ಪ್ರಸಾದ್, ಸಿದ್ದರಾಮಯ್ಯ, ಯಡಿಯೂರಪ್ಪ, ಹೆಚ್.ಡಿ.ದೇವೇಗೌಡರು ಸ್ವಂತ ಶಕ್ತಿ ಮೇಲೆ ಬೆಳೆದು ಬಂದಿದ್ದಾರೆ. ಇವರೆಲ್ಲಾ ಮಾದರಿಯಾಗಿ ನಮಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ ಎಂದು ಪ್ರತಾಪ್ ಸಿಂಹ ಹೇಳಿದರು.

ಪ್ರಸಾದ್ ನೆನಪು ಹಚ್ಚ ಹಸಿರಾಗಿಸಲು ತೀರ್ಮಾನ

ಶ್ರೀನಿವಾಸ ಪ್ರಸಾದ್ ಅವರ ನೆನಪು ಹಚ್ಚ ಹಸಿರಾಗಿ ಉಳಿಯುವ ನಿಟ್ಟಿನಲ್ಲಿ ಅವರ ಅಭಿಮಾನಿಗಳ ಅಭಿಲಾಷೆ ಈಡೇರಿಸಲು ಸರ್ಕಾರ ಸಕಾರಾತ್ಮಕ ತೀರ್ಮಾನ ಮಾಡಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಭರವಸೆ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್‌ಗೆ ಈ ಜಾಗವನ್ನು ಸರ್ಕಾರ ಮಂಜೂರು ಮಾಡಿದ್ದು, ಇಲ್ಲಿ ಶ್ರೀನಿವಾಸ ಪ್ರಸಾದ್ ಹೆಸರಿನಲ್ಲಿ ಸರ್ಕಾರ ಪ್ರತಿಷ್ಠಾನ ಸ್ಥಾಪನೆ ಮಾಡಬೇಕೆಂಬ ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಆಗ್ರಹಕ್ಕೆ ಪ್ರತಿಕ್ರಿಯೆ ನೀಡಿದರು. ಈಗ ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಯಾವುದೇ ವಿಚಾರ ಪ್ರಕಟ ಮಾಡುವಂತಿಲ್ಲ. ಆದ ಕಾರಣ ಚುನಾವಣೆ ನಂತರ ಈ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದರು.

ನಾಯಕತ್ವ ಇಲ್ಲದ ಸಮುದಾಯ ಅನಾಥವಾಗುತ್ತದೆ ಎಂದು ಡಾ.ಅಂಬೇಡ್ಕರ್ ಹೇಳುತ್ತಿದ್ದರು. ಈ ನಿಟ್ಟಿನಲ್ಲಿ ಶ್ರೀನಿವಾಸ ಪ್ರಸಾದ್ ನಮ್ಮ ಸಮುದಾಯದ ನಾಯಕತ್ವದ ಸ್ಥಾನ ತುಂಬಿದ್ದರು. ಆದರೆ ಇಂದು ಇಂತಹ ಮಹಾನ್ ನಾಯಕನನ್ನು ಕಳೆದುಕೊಂಡಿದೆ ಎಂದು ನೋವಿನಿಂದ ನುಡಿದರು.

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕಟ್ಟಾ ಅಭಿ



ಮಾನಿಯಾಗಿದ್ದ ಶ್ರೀನಿವಾಸ ಪ್ರಸಾದ್ ಸ್ವಾಭಿಮಾನದ ಗುಣ ಮೈಗೂಡಿಸಿಕೊಂಡಿದ್ದರು. ಸ್ವಾಭಿಮಾನಿ ಆಗಿಲ್ಲದಿದ್ದರೆ ಬದುಕಿದ್ದೇನು ಪ್ರಯೋಜನ ಎಂಬ ಅಂಬೇಡ್ಕರ್ ಮಾತು ಮನದಟ್ಟು ಮಾಡಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಸ್ವಾಭಿಮಾನಿಯಾಗಿ ಸಾರ್ಥಕ ಬದುಕು ಕಂಡಿದ್ದರು ಎಂದು ಡಾ.ಮಹದೇವಪ್ಪ ಹೇಳಿದರು. ತುಂಬಾ ಚಟುವಟಿಕೆಯಿಂದ ಓಡಾಡಬೇಕಿರುವ ಕಂದಾಯ ಖಾತೆಯನ್ನು ಶ್ರೀನಿವಾಸ ಪ್ರಸಾದ್‌ಗೆ ನೀಡುವುದು ಎಷ್ಟು ಸರಿ ಎಂದು ನಾನು ಪ್ರಶ್ನೆ ಮಾಡಿದೆ. ಆದರೆ ನನ್ನ ಮಾತು ಒಪ್ಪದ ಸಿದ್ದರಾಮಯ್ಯ, ನಾವು ರಾಜ್ಯ ಸುತ್ತೋಣ, ಶ್ರೀನಿವಾಸ ಪ್ರಸಾದ್ ಇದ್ದಲ್ಲಿಯೇ ಇದ್ದು ಅನ್ಯಾಯಕ್ಕೊಳಗಾದ ಜನರ ಪರ ದನಿ ಎತ್ತಿ ಹೋರಾಟ ಮಾಡಲಿ ಎಂದು ಶ್ರೀನಿವಾಸ ಪ್ರಸಾದ್‌ಗೆ ಕಂದಾಯ ಖಾತೆ ನೀಡಿದರು ಎಂದು ಹೇಳಿದರು. ಸಿದ್ದರಾಮಯ್ಯ ಸರ್ಕಾರ ಜಾರಿಗೊಳಿಸಿರುವ ಹಲವು ಯೋಜನೆಗಳು ಶ್ರೀನಿವಾಸ ಪ್ರಸಾದ್ ಅವರ ಅಭಿಪ್ರಾಯವಾಗಿತ್ತು ಎಂದು ಡಾ.ಮಹದೇವಪ್ಪ ತಿಳಿಸಿದರು.

ಮೈಸೂರಲ್ಲಿ ಭಾರೀ ಗಾಳಿ–ಮಳೆ ಹಾನಿ; ಸಮರೋಪಾದಿ ಪರಿಹಾರ ಕಾರ್ಯಾಚರಣೆ

ಮೈಸೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ: ಎಚ್ಚೆತ್ತ ಪಾಲಿಕೆ ಸಿಬ್ಬಂದಿ



ಮೈಸೂರಿನ ಜೆಎಲ್‌ಬಿ ರಸ್ತೆಯ ಮಹಾರಾಣಿ ವಿಜ್ಞಾನ ಕಾಲೇಜಿನ ಮುಂಭಾಗ ಮುರಿದು ಬಿದ್ದಿದ್ದ ಅರಳಿಮರ ತೆರವುಗೊಳಿಸುತ್ತಿರುವುದು.

ಮೈಸೂರು, ಮೇ 11(ಎಂಟಿವೈ)– ಮೈಸೂರಲ್ಲಿ ಕಳೆದ ರಾತ್ರಿ ಸುರಿದ ಧಾರಾಕಾರ ಮಳೆಗೆ ವಿವಿಧೆಡೆ ಧರೆಗುರುಳಿದ್ದ ಮರಗಳನ್ನು ಮೈಸೂರು ನಗರ ಪಾಲಿಕೆಯ ಅಭಯ ತಂಡದ ಸಿಬ್ಬಂದಿ ತೆರವುಗೊಳಿಸಿದರು. ಮೈಸೂರಿನ ಜೆಎಲ್‌ಬಿ ರಸ್ತೆಯ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಮಂಭಾಗ ಬೃಹತ್ ಅರಳಿಮರವೊಂದು ಉರುಳಿ ಬಿದ್ದಿತ್ತು. ಅದು ವಿದ್ಯುತ್ ಕಂಬದೊಂದಿಗೆ ಜೆಎಲ್‌ಬಿ ರಸ್ತೆಗೆ ಅಡ್ಡಲಾಗಿ ಬಿದ್ದಿತ್ತು. ಇದರಿಂದ ವಾಹನ ಸಂಚಾರಕ್ಕೆ ಅಡಚಣೆಯುಂಟಾಗಿತ್ತು. ಮುಂಜಾನೆಯಿಂದಲೇ ಅಭಯ ತಂಡ ಹಾಗೂ ಇತರೆ ಕಾರ್ಮಿಕರ ತಂಡ, ಪೊಲೀಸ್ ಹಾಗೂ ಚೆಸ್ಕಾಂ ಸಿಬ್ಬಂದಿ ಸಂಘಟಿತ ಶ್ರಮದಿಂದ ಮಧ್ಯಾಹ್ನದ ವೇಳೆಗೆ ಉರುಳಿ ಬಿದ್ದಿದ್ದ ಮರದ ಕೊಂಬೆಗಳನ್ನು ತುಂಡರಿಸಿ, ಕ್ರೇನ್ ಮೂಲಕ ರಸ್ತೆ ಬದಿಗೆ ಸರಿಸಿದ ನಂತರ ತುಂಡಾಗಿದ್ದ ವಿದ್ಯುತ್ ಕಂಬ ತೆರವು ಮಾಡಿ ಹೊಸ ಕಂಬ ನೆಟ್ಟು, ವೈರ್ ಜೋಡಣೆ ಮಾಡಿದರು. ಎಲ್ಲಾ ಕಾರ್ಯ ಮುಗಿದ ನಂತರ ಜೆಎಲ್‌ಬಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಮುಕ್ತ ಮಾಡಲಾಯಿತು.



ಕುಂಬಾರಕೊಪ್ಪಲಿನ ತಗ್ಗು ಪ್ರದೇಶದ ಮನೆಗೆ ಮಳೆ ನೀರು ನುಗ್ಗಿರುವುದು.

ಕುಂಬಾರಕೊಪ್ಪಲಿನಲ್ಲಿ ಮನೆಗೆ ನೀರು: ಮೈಸೂರಿನ ಕುಂಬಾರಕೊಪ್ಪಲಿನ ತಗ್ಗು ಪ್ರದೇಶದ ಕೆಲವು ಮನೆಗಳಿಗೆ ಮಳೆ ನೀರು ನುಗ್ಗಿದ್ದರಿಂದ ಮನೆಯಲ್ಲಿದ್ದ ಕೆಲ ವಸ್ತುಗಳು ನೀರಿನಿಂದ ತೊಯ್ದು ಹೋಗಿದ್ದವು. ಬೆಳಗ್ಗೆ ಮನೆಯೊಳಗೆ ಮಳೆ ನೀರಿನಿಂದ ಹಾನಿಗೊಳಗಾಗಿದ್ದ ವಸ್ತುಗಳನ್ನು ಮನೆಯಿಂದ ಹೊರಗೆ ತಂದು ಬಿಸಿಲಿನಲ್ಲಿ ಒಣಗಿಸುತ್ತಿದ್ದ ದೃಶ್ಯ ಕಂಡು ಬಂದಿತು. ರಾತ್ರಿಯೇ ಮಳೆ ನಿಂತ ನಂತರ ಮನೆಗೆ ನುಗ್ಗಿದ್ದ ನೀರನ್ನು ಹೊರ ಹಾಕಿ ಮನೆ ಸ್ವಚ್ಛ ಮಾಡಿಕೊಂಡರು.

ಮೈಸೂರಲ್ಲಿದ್ದರು ಮುಖ್ಯಮಂತ್ರಿ!?: ಮೈಸೂರಲ್ಲಿ ವಾರದ ಹಿಂದೆ ಮೊದಲ ಗಾಳಿ–ಮಳೆಯಿಂದ ಹಲವೆಡೆ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದ್ದವು. ಚೆಸ್ಕಾಂ ತನ್ನ ಪಾಲಿನ ಪರಿಹಾರ ಕಾರ್ಯವನ್ನು ಕ್ಷಿಪ್ರವಾಗಿ ಪೂರೈಸಿತ್ತು. ಆದರೆ ಪಾಲಿಕೆ ಧರೆಗುರುಳಿದ ಮರ, ಮುರಿದು ಬಿದ್ದ ರೆಂಬೆ–ಕೊಂಬೆಗಳ ತೆರವಿಗೆ ಮೀನಾ–ಮೇಷ ಎಣಿಸುತ್ತಿತ್ತು. ಆದರೆ ಮುಖ್ಯಮಂತ್ರಿಗಳು ಮೈಸೂರಿಗೆ ಬರುವ ಕೆಲವೇ ಗಂಟೆಗಳಲ್ಲಿ ಎಲ್ಲೆಡೆ ಮುರಿದು ಬಿದ್ದ ಮರಗಳ ತೆರವುಗೊಳಿಸಿ, ತಮ್ಮ ಕ್ಷಿಪ್ರ ಕಾರ್ಯವೈಖರಿ ಮೆರೆದಿದ್ದಾರೆ. ಇದು ಜನರ ಹಿತದೃಷ್ಟಿಯಿಂದ ಆದ ತ್ವರಿತ ಕಾರ್ಯವಲ್ಲ, ಮುಖ್ಯಮಂತ್ರಿಗಳ ಭಯದ ಕಾರ್ಯವಾಗಿದೆ ಎಂದು ಜನರ ಬಾಯಲ್ಲೇ ಬರುತ್ತಿದೆ.

ಮೈಸೂರಲ್ಲಿ ಕಣ್ಣು ಹಾಯಿಸಿದೆಡೆಯೆಲ್ಲಾ ಪ್ರವಾಸಿಗರ ದಂಡು

● ಚಾಮುಂಡಿಬೆಟ್ಟ, ಅರಮನೆ, ಮೃಗಾಲಯ, ಕೆಆರ್‌ಎಸ್, ಶ್ರೀರಂಗಪಟ್ಟಣ, ಮೇಲುಕೋಟೆ, ನಂಜನಗೂಡು ದೇವಸ್ಥಾನಗಳಲ್ಲಿ ನೂಕು ನುಗ್ಗಲು ● ಸಾಲು ಸಾಲು ರಜೆಯಿಂದ ಸಾಂಸ್ಕೃತಿಕ ನಗರಿಯಲ್ಲಿ ಪ್ರವಾಸಿಗರ ಜಾತ್ರೆ



ಮೈಸೂರು, ಮೇ 11 (ಆರ್‌ಕೆ): ಮೂರು ದಿನಗಳ ನಿರಂತರ ಸರ್ಕಾರಿ ರಜೆ ಇರುವ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಿಗೆ ಪ್ರವಾಸಿಗರ ದಂಡೇ ಹರಿದು ಬರುತ್ತಿದೆ.

ನಿನ್ನೆ (ಮೇ10) ಬಸವ ಜಯಂತಿ, ಇಂದು (ಮೇ11) 2ನೇ ಶನಿವಾರ ಮತ್ತು ನಾಳೆ (ಮೇ12) ಭಾನುವಾರ ಸರ್ಕಾರಿ ರಜೆ ಇರುವುದರಿಂದ ಕರ್ನಾಟಕದ ವಿವಿಧ ಜಿಲ್ಲೆಗಳು, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ದೇಶದಾದ್ಯಂತ ವಿವಿಧ ರಾಜ್ಯಗಳಿಂದ ಪ್ರವಾಸಿಗರು ಕುಟುಂಬ ಸಮೇತ ಮೈಸೂರಿಗೆ ಬರುತ್ತಿದ್ದಾರೆ.

ಗುರುವಾರ (ಮೇ 9) ರಾತ್ರಿಯಿಂದಲೇ ಬೆಂಗಳೂರು, ಮಡಿಕೇರಿ, ಊಟಿ ಇನ್ನಿತರ ಕಡೆಯಿಂದ ಬಸ್ಸು, ರೈಲು, ವಿಮಾನ, ಕಾರುಗಳಲ್ಲಿ ಪ್ರವಾಸಿಗರು ಆಗಮಿಸಿ ಮೈಸೂರು ನಗರದ ಹೋಟೆಲ್, ಲಾಡ್ಜ್‌ಗಳಲ್ಲಿ ವಾಸ್ತವ್ಯ ಹೂಡಿದ್ದು, ಕೆಲವರು ತಮ್ಮ ಸಂಬಂಧಿಕರ ಮನೆಯಲ್ಲಿ ಉಳಿದುಕೊಂಡು ಸ್ಥಳೀಯ ಪ್ರವಾಸಿ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದಾರೆ.

ಕೊಠಡಿಗಳು ಭರ್ತಿ: ಪ್ರವಾಸಿಗರ ದಂಡೇ ಹರಿದು ಬರುತ್ತಿರುವುದರಿಂದ ಮೈಸೂರಿನ ಎಲ್ಲಾ ಹೋಟೆಲು, ಲಾಡ್ಜ್‌ಗಳ ಸುಮಾರು 10 ಸಾವಿರ ಕೊಠಡಿಗಳು ಭರ್ತಿಯಾಗಿದ್ದು, ನಗರದ ಹೃದಯ ಭಾಗದ ಹೋಟೆಲ್‌ಗಳ ಕೊಠಡಿಗಳು ಭಾನುವಾರ ರಾತ್ರಿವರೆಗೂ ಬುಕ್ ಆಗಿವೆ ಎಂದು ಹೋಟೆಲು ಮಾಲಿಕರ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ ತಿಳಿಸಿದ್ದಾರೆ.

ನೂಕು ನುಗ್ಗಲು: ಶುಕ್ರವಾರ ಮತ್ತು ಇಂದು ಮೈಸೂರಿನ ಪ್ರಮುಖ ಪ್ರವಾಸಿ ತಾಣಗಳಾದ ಅಂಬಾವಿಲಾಸ ಅರಮನೆ, ಮೃಗಾಲಯ, ಕಾರಂಜಿ ಕೆರೆ ಉದ್ಯಾನವನ, ಚಾಮುಂಡಿಬೆಟ್ಟ, ಜಗನ್ಮೋಹನ ಅರಮನೆಗಳಿಗೆ ಸಾವಿರಾರು ಮಂದಿ ಭೇಟಿ ನೀಡಿದ್ದು ನೂಕು–ನುಗ್ಗಲು ನಿಯಂತ್ರಿಸಲು ಅಧಿಕಾರಿಗಳು ಹಾಗೂ ಸಿಬ್ಬಂದಿ ಹರಸಾಹಸಪಡುತ್ತಿದ್ದಾರೆ.

ಇಂದು ಮಧ್ಯಾಹ್ನದವರೆಗೆ ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ 35ಸಾವಿರ ಮಂದಿ ಭೇಟಿ ನೀಡಿದ್ದು, ರಾತ್ರಿವರೆಗೆ ಸುಮಾರು 55ಸಾವಿರ ಭಕ್ತರು ದೇವಿಯ ದರ್ಶನ ಮಾಡುವ ಸಾಧ್ಯತೆ ಇದೆ ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.



ಪಾರ್ಕಿಂಗ್ ಸ್ಥಳ ಭರ್ತಿ: ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಆಗಮಿಸಿರುವುದರಿಂದ ಮೈಸೂರಿನ ಅರಮನೆ ಆವರಣ, ದೊಡ್ಡಕೆರೆ ಮೈದಾನ, ಮೃಗಾಲಯದ ಎದುರು, ಕಾರಂಜಿಕೆರೆ ಉದ್ಯಾನವನ ಪ್ರವೇಶದ್ವಾರ ಹಾಗೂ ಚಾಮುಂಡಿ ಬೆಟ್ಟದ ಪಾರ್ಕಿಂಗ್ ಸ್ಥಳ ಭರ್ತಿಯಾಗಿ ವಾಹನ ನಿಲ್ಲಿಸಲು ವಾಹನಗಳ ಚಾಲಕರು ಪರದಾಡುತ್ತಿದ್ದಾರೆ.

ಶ್ರೀ ಕಂಠೇಶ್ವರ ದೇವಾಲಯ: ದಕ್ಷಿಣ ಕಾಶಿ ಎಂದೇ ಖ್ಯಾತಿಯಾಗಿರುವ ನಂಜನಗೂಡಿನ ಶ್ರೀ ಕಂಠೇಶ್ವರ ದೇವಾಲಯಕ್ಕೆ ಅಕ್ಷಯ ತೃತಿಯ, ಬಸವ ಜಯಂತಿ ದಿನವಾದ ಶುಕ್ರವಾರ ಹಾಗೂ ಇಂದು ದಾಖಲೆ ಪ್ರಮಾಣದ ಭಕ್ತರು ಭೇಟಿ ನೀಡಿದ್ದು, ಉದ್ದುದ್ದ ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಮಾಡಿದ್ದಾರೆ.

ವಾಹನ ಸಂಚಾರ ದಟ್ಟಣೆ: ಮೈಸೂರು ನಗರದ ಪ್ರಮುಖ ರಸ್ತೆಗಳು, ರಿಂಗ್ ರೋಡ್, ಮೈಸೂರು–ಬೆಂಗಳೂರು ಹೆದ್ದಾರಿ, ಹುಣಸೂರು ರಸ್ತೆ, ನಂಜನಗೂಡು ರಸ್ತೆ, ತಿ.ನರಸೀಪುರ ರಸ್ತೆಗಳಲ್ಲಿ ಶುಕ್ರವಾರ ಮತ್ತು ಶನಿವಾರ ವಾಹನ ದಟ್ಟಣೆಯಿಂದಾಗಿ ಅಲ್ಲಲ್ಲಿ ಟ್ರಾಫಿಕ್ ಜಾಮ್ ಆಗುತ್ತಿದ್ದ ದೃಶ್ಯ ಕಂಡುಬಂತು. ಸಂಚಾರ ಪೊಲೀಸರು ಸ್ಥಳದಲ್ಲಿ ಹಾಜರಿದ್ದು, ಸಂಚಾರ ಸುಗಮಗೊಳಿಸಲು ಹೆಣಗಾಡುತ್ತಿದ್ದಾರೆ.

ಸಂಚಾರಕ್ಕೆ ಅಡ್ಡಿ: ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಹಲವು ಗಣ್ಯರುಗಳ ಸಂಚಾರವಿದ್ದ ಕಾರಣ ಇಂದು ಕೆಲ ಕಾಲ ಸಿಲ್ಕ್ ಫ್ಯಾಕ್ಟರಿ ರಸ್ತೆ, ಜೆಎಲ್‌ಬಿ ರಸ್ತೆ, ವಿದ್ಯಾರಣ್ಯಪುರಂ ಭಾಗದ ಕೆಲವೆಡೆ ಸಾರ್ವಜನಿಕರ ಸಂಚಾರಕ್ಕೆ ಅಡ್ಡಿಯುಂಟಾಯಿತು.

ಅದೇ ರೀತಿ ಕೆಆರ್‌ಎಸ್, ರಂಗನತಿಟ್ಟು ಪಕ್ಷಿಧಾಮ, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯ, ಟಿಪ್ಪುಸುಲ್ತಾನ್ ದರಿಯಾ ದೌಲತ್, ಶ್ರೀ ನಿಮಿಷಾಂಬ ದೇವಾಲಯ, ತೊಣ್ಣೂರು ಕೆರೆ ಹಾಗೂ ಮೇಲುಕೋಟೆ ಪ್ರವಾಸಿ ತಾಣಗಳಲ್ಲೂ ಪ್ರವಾಸಿಗರ ನೂಕು–ನುಗ್ಗಲು ಉಂಟಾಗಿದೆ.

ಭರ್ಜರಿ ವ್ಯಾಪಾರ: ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಲಗ್ಗೆ ಇಟ್ಟಿರುವುದರಿಂದ ಹೋಟೆಲ್ ಮಾಲೀಕರು, ಟ್ರಾವೆಲ್ ಏಜೆನ್ಸಿಗಳು, ಟ್ಯಾಕ್ಸಿ, ಟಾಂಗಾ, ಸಣ್ಣಪುಟ್ಟ ಆಟಿಕೆ ವಸ್ತುಗಳು, ತಿಂಡಿ–ತಿನಿಸು ಮಾರುವವರಿಗೆ ಭರ್ಜರಿ ವ್ಯಾಪಾರವಾಗುತ್ತಿದೆ. ಪ್ರವಾಸಿ ಗೈಡ್‌ಗಳು ಸಹ ಬಿಡುವಿಲ್ಲದೆ ಬ್ಯುಸಿಯಾಗಿದ್ದಾರೆ.


ಮೈಸೂರಲ್ಲಿ ಹೆಚ್ಚುವರಿಯಾಗಿ ಹತ್ತು ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್

ಒಟ್ಟು 62 ಸಿಗ್ನಲ್ ಲೈಟ್‌ಗಳ ಮೂಲಕ ವಾಹನ ಸಂಚಾರ ದಟ್ಟಣೆ ನಿರ್ವಹಣೆ

ಮೈಸೂರು, ಮೇ 11(ಆರ್‌ಕೆ)–ವಾಹನ ಸಂಚಾರ ದಟ್ಟಣೆ ನಿಯಂತ್ರಣ ಮತ್ತು ಅಪಘಾತ ತಪ್ಪಿಸುವ ಸಲುವಾಗಿ ಮೈಸೂರಿನ 10 ಕಡೆ ಜಂಕ್ಷನ್‌ಗಳಿಗೆ ಟ್ರಾಫಿಕ್ ಸಿಗ್ನಲ್ ಅಳವಡಿಸುವ ಕಾರ್ಯ ಭರದಿಂದ ಸಾಗಿದೆ.

ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರ ನಿರ್ದೇಶನದಂತೆ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಅವರ ಸೂಚನೆ ಮೇರೆಗೆ ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಅವರು ಅಗತ್ಯವಿರುವ ಸ್ಥಳಗಳನ್ನು ಗುರ್ತಿಸಿ ವಾಹನ ಸಂಚಾರ ದಟ್ಟಣೆ ನಿರ್ವಹಿಸಲು ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಿಕೊಡುವಂತೆ ಮೈಸೂರು ಮಹಾನಗರ ಪಾಲಿಕೆಯನ್ನು ಕೋರಿದ್ದರು.





ಅದರಂತೆ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ (MGNVY) ಅನುದಾನದ ಶೇ.5ರಷ್ಟು ಹಣವನ್ನು ಈ ಉದ್ದೇಶಕ್ಕೆ ಖರ್ಚು ಮಾಡಲು ಅವಕಾಶವಿರುವುದರಿಂದ ಪೊಲೀಸರ ಮನವಿಯನ್ನು ಪರಿಗಣಿಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಮೈಸೂರಿನ 10 ಸರ್ಕಲ್‌ಗಳಿಗೆ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಲು ಮಹಾನಗರ ಪಾಲಿಕೆಯು ಮುಂದಾಗಿದೆ.

ಎಂಜಿಎನ್‌ವಿವೈ ಯೋಜನೆಯಡಿ 2 ಕೋಟಿ ರೂ. ವೆಚ್ಚದಲ್ಲಿ ಸಿಗ್ನಲ್ ಲೈಟ್ ಅಳವಡಿಸಲು ಟೆಂಡರ್ ಮೂಲಕ ಅರ್ಹ ಗುತ್ತಿಗೆದಾರರಿಗೆ ಕಾಮಗಾರಿ ವಹಿಸಲಾಗಿದೆ. ಕಾರ್ಯಾದೇಶದನ್ವಯ 6 ಕಡೆಯೂ ಅಳವಡಿಕೆ ಕೆಲಸ ಬಹುತೇಕ ಪೂರ್ಣಗೊಂಡಿದ್ದು, ಉಳಿದ 4 ಜಂಕ್ಷನ್‌ಗಳಲ್ಲಿ ಕಾಮಗಾರಿ ಪ್ರಗತಿಯಲ್ಲಿದೆ. ಈಗಾಗಲೇ ಸ್ಥಳದಲ್ಲಿ ಪೈಪ್‌ಗಳು, ಪ್ಯಾನಲ್ ಹಾಗೂ ಸಾಮಗ್ರಿಗಳ ತಂದು ಹಾಕಲಾಗಿದ್ದು, ಎರಡು ದಿನದೊಳಗಾಗಿ ಅಳವಡಿಸಲಾಗುವುದು ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ. ಈಗಾಗಲೇ ಅಳವಡಿಸಿರುವ ಸಿಗ್ನಲ್ ಲೈಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಹಿಂದೆಯೇ ಸೋಲಾರ್ ಪ್ಯಾನಲ್ ಅನ್ನು ಹಾಕಲಾಗುತ್ತಿದೆ. ಎಲ್ಲಾ ಮೆಟೀರಿಯಲ್ ಸಿದ್ಧವಿರುವುದರಿಂದ ಮೂರ್ನಾಲ್ಕು ದಿನದೊಳಗಾಗಿ ಕಾಮಗಾರಿ ಮುಗಿದು ಎಲ್ಲಾ 10 ಹೊಸ ಸಿಗ್ನಲ್ ಲೈಟ್‌ಗಳೂ ಆನ್ ಆಗುತ್ತವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಜೆಎಲ್‌ಬಿ ರಸ್ತೆಯ ಆರ್‌ಟಿಓ ಸರ್ಕಲ್, ಮಹಾತ್ಮ ಗಾಂಧಿ ರಸ್ತೆಯ ಅಗ್ರಹಾರ ಸರ್ಕಲ್, ಕ್ರಾಫರ್ಡ್ ಹಾಲ್ ಬಳಿಯ ಕೌಟಿಲ್ಯ ವೃತ್ತ, ರಾಜರಾಜೇಶ್ವರಿ ನಗರದ ಬಳಿ ರಿಂಗ್ ರಸ್ತೆ ಜಂಕ್ಷನ್, ಅಕ್ಕಮಹಾದೇವಿ ರಸ್ತೆಯ ಜೆ.ಪಿ. ನಗರ ಜಂಕ್ಷನ್, ರಿಂಗ್ ರೋಡ್‌ನ ದೇವೇಗೌಡ ಸರ್ಕಲ್, ಸಾತಗಳ್ಳಿ ಬಳಿ ಕೆಎಸ್ ಆರ್‌ಟಿಸಿ ಬಸ್ ಡಿಪೋ ಜಂಕ್ಷನ್, ವಿಜಯನಗರ 4ನೇ ಹಂತದ ಬಸವನಹಳ್ಳಿ ಮುಖ್ಯ ರಸ್ತೆ ರಿಂಗ್ ರೋಡ್ ಜಂಕ್ಷನ್, ಹಿನಕಲ್ ರಿಂಗ್ ರೋಡ್ ಜಂಕ್ಷನ್ ಹಾಗೂ ನಜರ್‌ಬಾದ್ ಸರ್ಕಲ್‌ಗಳಲ್ಲಿ ಹೊಸದಾಗಿ ಟ್ರಾಫಿಕ್ ಸಿಗ್ನಲ್ ಲೈಟ್ ಅಳವಡಿಸಲಾಗುತ್ತಿದೆ.

ಮೈಸೂರಿನಲ್ಲಿ ಈಗಾಗಲೇ 52 ಸಿಗ್ನಲ್ ಲೈಟ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಹೊಸದಾಗಿ 10 ಕಡೆ ಸೇರಿದಲ್ಲಿ ಒಟ್ಟು 62 ಜಂಕ್ಷನ್‌ಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಿದಂತಾಗಲಿದ್ದು, ಸಂಚಾರ ಪೊಲೀಸರು ಟ್ರಾಫಿಕ್ ಎನ್‌ಫೋರ್ಸ್‌ಮೆಂಟ್ ಪ್ರಕ್ರಿಯೆಯನ್ನು ನಿರ್ವಹಿಸುವರು. ಎಲ್ಲಾ ಸಿಗ್ನಲ್ ಲೈಟ್‌ಗಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸಿದೆಯಾದರೂ ವಿದ್ಯುತ್ ಕಡಿತವಾದಾಗಲೂ ಕಾರ್ಯ ನಿರ್ವಹಿಸಲು ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಲಾಗುತ್ತಿದೆ.

> ಪೊಲೀಸರ ಕೋರಿಕೆಯಂತೆ ಪಾಲಿಕೆಯಿಂದ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ಮೈಸೂರಿನ 10 ಕಡೆಗಳಲ್ಲಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗುತ್ತಿದ್ದು, ಈಗಾಗಲೇ ಬಹುತೇಕ ಕಾಮಗಾರಿ ಮುಗಿದಿದೆ. ವಿದ್ಯುತ್ ಸಂಪರ್ಕ ಮತ್ತು ಸೋಲಾರ್ ಪ್ಯಾನಲ್ ಹಾಕುವ ಕೆಲಸವೂ ಪ್ರಗತಿಯಲ್ಲಿರುವುದರಿಂದ ಒಂದೆರಡು ದಿನಗಳಲ್ಲಿ ಕೆಲಸ ಮುಗಿಸಿ ಪೊಲೀಸರಿಗೆ ಹಸ್ತಾಂತರಿಸುತ್ತೇವೆ. ಅವರು ಆನ್ ಮಾಡಿಕೊಂಡು ಸಂಚಾರ ನಿಯಂತ್ರಣ ಪ್ರಕ್ರಿಯೆ ಆರಂಭಿಸಬಹುದಾಗಿದೆ.
>
> –ಕೆ.ಜೆ.ಸಿಂಧು, ಸೂಪರಿಂಟೆಂಡಿಂಗ್ ಇಂಜಿನಿಯರ್, ಮೈಸೂರು ನಗರಪಾಲಿಕೆ

ಮೈಸೂರು ಮಿತ್ರ ಭಾನುವಾರ 12 ಮೇ 2024

ಮತ್ತೆ ಮುನ್ನೆಲೆಗೆ ಬಂದ ಕೆರಗೋಡು ಹನುಮಾನ್ ಧ್ವಜ ವಿವಾದ ಪ್ರಕರಣ

ಹನುಮ ಭಕ್ತರ ಮೇಲೆ ಪೊಲೀಸ್ ದೌರ್ಜನ್ಯ ಖಂಡಿಸಿ ಭಾರಿ ಪ್ರತಿಭಟನೆ

ಮಂಡ್ಯ,ಮೇ 11– ಕಳೆದ ಜನವರಿಯಲ್ಲಿ ರಾಜ್ಯ ಮಟ್ಟದಲ್ಲಿ ಗಮನ ಸೆಳೆದಿದ್ದ ಮಂಡ್ಯ ತಾಲೂಕಿನ ಕೆರಗೋಡು ಗ್ರಾಮದ ಹನುಮ ಧ್ವಜ ವಿವಾದ ಮತ್ತೆ ಮುನ್ನೆಲೆಗೆ ಬಂದಿದ್ದು, ಕೆರಗೋಡು ಹನುಮ ಧ್ವಜ ಹೋರಾಟದಲ್ಲಿ ಭಾಗಿಯಾಗಿದ್ದ ಹನುಮ ಭಕ್ತರ ಮೇಲೆ ರಾಜಕೀಯ ಪ್ರಭಾವಕ್ಕೊಳಗಾಗಿ ನಿರಂತರ ದೌರ್ಜನ್ಯ, ದಬ್ಬಾಳಿಕೆಯನ್ನು ಪೊಲೀಸರು ನಡೆಸುತ್ತಿದ್ದಾರೆ ಎಂದು ಆರೋಪಿಸಿ ಹಿಂದೂ ಸಂಘಟನೆಗಳ ಕಾರ್ಯಕರ್ತರು ಕೆರಗೋಡು ಗ್ರಾಮದಲ್ಲಿ ಶನಿವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಗ್ರಾಮದ ಬಸ್ ನಿಲ್ದಾಣ ಸಮೀಪದ ವೃತದಿಂದ ವಿಶ್ವ ಹಿಂದೂ ಪರಿಷತ್ ನೇತೃತ್ವದಲ್ಲಿ ಹಿಂದೂ ಸಂಘಟನೆಯ ಕಾರ್ಯಕರ್ತರು ಮೆರವಣಿಗೆ ಹೊರಟು ಜೈ ಶ್ರೀರಾಮ್ ಘೋಷಣೆ ಕೂಗುತ್ತಾ ಪೊಲೀಸ್ ಠಾಣೆವರೆಗೆ ತೆರಳಿ ಪೊಲೀಸರು ಜಾರಿ ಮಾಡಿದ್ದ ನೋಟಿಸ್‌ಗೆ ಉತ್ತರ ನೀಡಿದರು. ದೌರ್ಜನ್ಯವೆಸಗುತ್ತಿರುವ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸುವಂತೆ ಆಗ್ರಹಿಸಿದರು.



ಪೊಲೀಸರ ದೌರ್ಜನ್ಯ ಖಂಡಿಸಿ ಕೆರಗೋಡು ಗ್ರಾಮದಲ್ಲಿ ಶನಿವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಹನುಮಧ್ವಜ ಹೋರಾಟದಲ್ಲಿ ಭಾಗಿಯಾಗಿದ್ದವರ ಮೇಲೆ ಶಾಸಕರು ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ. ರಾಜಕೀಯ ಒತ್ತಡಕ್ಕೆ ಒಳಗಾಗಿರುವ ಪೊಲೀಸರು ಅಮಾಯಕರ ಮೇಲೆ ದೌರ್ಜನ್ಯ, ದಬ್ಬಾಳಿಕೆ ಮಾಡುತ್ತಿದ್ದಾರೆ. ಜೈ ಶ್ರೀರಾಮ್ ಘೋಷಣೆ ಕೂಗಿದವರನ್ನು ಠಾಣೆಗೆ ಕರೆಸಿ ಬೆದರಿಕೆ ಹಾಕಲಾಗುತ್ತಿದೆ. ಅಷ್ಟೇ ಅಲ್ಲದೆ ಹನುಮ ಧ್ವಜ ಹೋರಾಟದಲ್ಲಿ ಭಾಗಿಯಾಗಿದ್ದ ಬಾಲಕೃಷ್ಣ, ಶಿವು, ಕಾರ್ತಿಕ್ ಹಾಗೂ ಹರೀಶ್‌ಗೆ ನಿಮ್ಮನ್ನು ಏಕೆ ರೌಡಿಶೀಟರ್ ಪಟ್ಟಿಗೆ ಸೇರಿಸಬಾರದು ಎಂದು ನೋಟಿಸ್ ಜಾರಿ ಮಾಡಿದ್ದಾರೆ.

–ಪ್ರತಿಭಟನಾಕಾರರ ಆಕ್ರೋಶ

ಕೆರಗೋಡು ಗ್ರಾಮದಲ್ಲಿ ಕಳೆದ ಕೆಲವು ತಿಂಗಳ ಹಿಂದೆ ಹನುಮ ಧ್ವಜಸ್ಥಂಭದಲ್ಲಿ ಹನುಮ ಧ್ವಜ ಹಾರಿಸಲಾಗಿತ್ತು. ಇದಕ್ಕೆ ಜಿಲ್ಲಾಡಳಿತ ರಾಷ್ಟ್ರಧ್ವಜ ಹಾರಿಸಲು ಅನುಮತಿ ಪಡೆದು ಹನುಮ ಧ್ವಜ ಹಾರಿಸಲಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದಾಗ ಹನುಮ ಧ್ವಜ ಉಳಿವಿಗಾಗಿ ಸಾವಿರಾರು ಹನುಮ ಭಕ್ತರು ಹೋರಾಟ ಮಾಡಿದ್ದರು. ರಾಜ್ಯ ಸರ್ಕಾರ ಹಾಗೂ ಸಚಿವ, ಶಾಸಕರ ಒತ್ತಡಕ್ಕೆ ಮಣಿದು ಹನುಮ ಧ್ವಜ ತೆರವು ಮಾಡಿ ರಾಷ್ಟ್ರಧ್ವಜ ಹಾರಿಸಿದ್ದರು. ಅಂದು ಹೋದ ಅಧಿಕಾರಿಗಳು ಇಂದಿಗೂ ಸಹ ಇತ್ತ ತಲೆ ಹಾಕದೆ ರಾಷ್ಟ್ರಧ್ವಜವನ್ನು ಸಹ ಹಾರಿಸದೆ ಅಗೌರವ ತೋರುತ್ತಿದ್ದಾರೆ ಎಂದು ಕಿಡಿಕಾರಿದರು.

ರೌಡಿಶೀಟರ್ ಪಟ್ಟಿಗೆ ಸೇರ್ಪಡೆ ಮಾಡಲು ಅದಕ್ಕೆ ಆದ ನಿಯಮಾವಳಿಗಳಿವೆ. ಆದರೆ ಅದನ್ನೆಲ್ಲ ಗಾಳಿಗೆ ತೂರಿ ಯಾವುದೇ ಕ್ರಿಮಿನಲ್ ಅಪರಾಧ ಇಲ್ಲದಿದ್ದರೂ ಹನುಮ ಧ್ವಜ ಹೋರಾಟದಲ್ಲಿ ಬಾಗಿಯಾಗಿದ್ದಾರೆ ಎಂಬ ಏಕೈಕ ಕಾರಣಕ್ಕೆ ರೌಡಿಶೀಟರ್ ಪಟ್ಟಿಗೆ ಸೇರಿಸಲು ಪೋಲಿಸ್ ಅಧಿಕಾರಿಗಳು ಮುಂದಾಗಿದ್ದಾರೆ. ಕೆರಗೋಡು ಠಾಣೆಯ ಸಬ್ ಇನ್ಸ್‌ಸ್ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್ ಹಾಗೂ ಡಿವೈಎಸ್‌ಪಿ ವಿನಾಕಾರಣ ಕಿರುಕುಳ ನೀಡುತ್ತಿದ್ದು, ಹಿಂದೂ ಸಂಘಟನೆಗಳ ಕಾರ್ಯಕರ್ತರನ್ನು ಗುರಿ ಮಾಡಲಾಗಿದೆ ಎಂದು ಕಿಡಿಕಾರಿದರು.

ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಒತ್ತಡದಿಂದ ಯುವಕರನ್ನು ಹೆದರಿಸಿ, ಬೆದರಿಸುವ ಕೆಲಸಕ್ಕೆ ಪೊಲೀಸರು ಮುಂದಾಗಿದ್ದು, ಹನುಮಧ್ವಜ ವಿಚಾರದಲ್ಲಿ ಜಿಲ್ಲಾಡಳಿತ ನಮ್ಮಗಳ ವಿರುದ್ಧ ನಿಂತಾಗ ಕಾನೂನಾತ್ಮಕ ಹೋರಾಟದಿಂದ ನ್ಯಾಯ ಪಡೆಯಲು ಮುಂದಾಗಿದ್ದಾರೆ. ಆದರೆ ಪೊಲೀಸರು ಕೆರಗೋಡು ಮತ್ತು ಸುತ್ತಮುತ್ತಲ ಗ್ರಾಮದ ಯುವ ಜನರಲ್ಲಿ ಭೀತಿ ವಾತಾವರಣ ಸೃಷ್ಟಿ ಮಾಡುತ್ತಿದ್ದು, ಈ ಕೂಡಲೇ ಪೊಲೀಸ್ ಅಧಿಕಾರಿಗಳನ್ನು ಅಮಾನತು ಮಾಡುವಂತೆ ಒತ್ತಾಯಿಸಿದರು.

ಪೊಲೀಸರ ನೋಟಿಸ್‌ಗೆ ಉತ್ತರ ನೀಡುತ್ತೇವೆ. ಪೊಲೀಸರು ರಾಜಕೀಯ ಪ್ರಭಾವಕ್ಕೆ ಒಳಗಾಗಿ ಅಮಾಯಕ ಯುವಕರನ್ನು ರೌಡಿಶೀಟರ್ ಪಟ್ಟಿಗೆ ಸೇರಿಸಲು ಮುಂದಾದರೆ ಕಾನೂನು ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮನ್‌ಮುಲ್ ಮಾಜಿ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಮನ್‌ಮುಲ್ ಉಪಾಧ್ಯಕ್ಷ ಎಂ.ಎಸ್.ರಘುನಂದನ್, ಮುಖಂಡರಾದ ವಸಂತಕುಮಾರ್, ಯೋಗೇಶ್, ನರಸಿಂಹಮೂರ್ತಿ, ವಿರೂಪಾಕ್ಷ ಬಾಲುಚಿಕ್ಕಬಳ್ಳಿ, ಶ್ರೀನಿವಾಸ್ ಭಾಗ ವಹಿಸಿದ್ದರು.

ರಾಮಾನುಜಾಚಾರ್ಯರ ರಥೋತ್ಸವ

ಮೇಲುಕೋಟೆ: 1007ನೇ ಜಯಂತ್ಯುತ್ಸವದ 9ನೇ ಉತ್ಸವದ ಅಂಗವಾಗಿ ಸಾಮಾಜಿಕ ಸಾಮರಸ್ಯದ ಹರಿಕಾರ ರಾಮಾನುಜಾಚಾರ್ಯರಿಗೆ ಶನಿವಾರ ಮಹಾರಥೋತ್ಸವ ವೈಭವದಿಂದ ನೆರವೇರಿತು. ತಮಿಳುನಾಡು ಆಂಧ್ರಪ್ರದೇಶ ಸೇರಿದಂತೆ ವಿವಿಧೆಡೆಯಿಂದ ನೂರಾರು ಸಂಖ್ಯೆಯ ಶ್ರೀವೈಷ್ಣವ ಭಕ್ತರು ಭಾಗವಹಿಸಿದ್ದರು.

ದೇವಾಲಯದಲ್ಲಿ ಆಚಾರ್ಯರಿಗೆ ಬೆಳಿಗ್ಗೆ 9ಗಂಟೆಗೆ ಯಾತ್ರಾದಾನವಾದ ನಂತರ ವೇದಪಾರಾಯಣ ಮತ್ತು ಮಂಗಳವಾದ್ಯದೊಂದಿಗೆ ಒಳಪ್ರಾಕಾರದಲ್ಲಿ ಉತ್ಸವ ನೆರವೇರಿತು. ನಂತರ ರಾಮಾನುಜರ ಎದರುಸೇವೆಯಲ್ಲಿ ಚೆಲುವನಾರಾಯಣ ಸ್ವಾಮಿಗೆ ಮಹಾಮಂಗಳಾರತಿ ನಡೆದು ರಾಮಾನುಜರಿಗೆ ಮರ್ಯಾದೆ ನಡೆದ ನಂತರ ಉತ್ಸವ ರಥದಮಂಟಪದ ಬಳಿಗೆ ಬಂದು ಸೇರಿತು. ರಥಮಂಟಪಕ್ಕೆ ಮೂರು ಪ್ರದಕ್ಷಿಣೆ ಹಾಗೂ ಜೋಯಿಸರಿಂದ ಮಂತ್ರ ಪಠಣೆಯಾದ ನಂತರ 10–30ಕ್ಕೆ ರಥಾರೋಹಣ ಕಾರ್ಯಕ್ರಮ ನೆರವೇರಿತು. ದಿವ್ಯಪ್ರಬಂದ ಪಾರಾಯಣಗೋಷ್ಠಿ ನೆರವೇರಿತು.

ಧಾರ್ಮಿಕದತ್ತಿ ಇಲಾಖೆಯ ಅಧಿಕಾರಿ ಯತಿರಾಜ ಸಂಪತ್ಕುಮಾರನ್ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಎಚ್.ಎಸ್.ಮಹೇಶ್ ಸರಪಣಿ ಎಳೆಯುವ ಮೂಲಕ 11–30 ಗಂಟೆಗೆ ಮಹಾರಥಕ್ಕೆ ಚಾಲನೆ ನೀಡಿದರು. ಮಹಾರಥ ಮಾರಿಗುಡಿ ಬೀದಿ, ರಾಜಬೀದಿ, ವಾನಮಾಮಲೈ ಮಠದ ಬೀದಿಗಳಲ್ಲಿ ಸಂಚರಿಸಿ ಮಧ್ಯಾಹ್ನ 4–ಗಂಟೆಯವೇಳೆಗೆ ಮುಕ್ತಾಯವಾಯಿತು.



ಪಾಂಡವಪುರದಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣ

ಪ್ರಮುಖ ಆರೋಪಿಯ ಕಾರು ಚಾಲಕ ಸೇರಿ ಇಬ್ಬರ ಸೆರೆ

ಪಾಂಡವಪುರ, ಮೇ 11– ಪಟ್ಟಣದ ಆರೋಗ್ಯ ಇಲಾಖೆಯ ವಸತಿ ಗೃಹದಲ್ಲಿ ನಡೆಯುತ್ತಿದ್ದ ಹೆಣ್ಣು ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಾಂಡವಪುರ ಪೊಲೀಸರು ಮಿಂಚಿನ ಕಾರ್ಯಾಚರಣೆ ನಡೆಸಿ ಮತ್ತಿಬ್ಬರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈ ಪ್ರಕರಣದಲ್ಲಿ ಇದುವರೆಗೂ 8 ಮಂದಿಯನ್ನು ಬಂಧಿಸಿದಂತಾಗಿದೆ.

ಪ್ರಕರಣದ ಪ್ರಮುಖ ಆರೋಪಿಯಾಗಿರುವ ಅಭಿಷೇಕ್ ಗೌಡನ ಕಾರು ಚಾಲಕ ಪಾಂಡವಪುರ ತಾಲ್ಲೂಕಿನ ಹೊಸಕೋಟೆ ಗ್ರಾಮದ ಅಖಿಲಾಶ್(23) ಹಾಗೂ ಮಹದೇಶ್ವರಪುರ ಗ್ರಾಮದ ಕಿರಣ್(35) ಬಂಧಿತರು, ಸರ್ಕಲ್ ಇನ್ಸ್‌ಪೆಕ್ಟರ್ ಕುಮಾರ್ ಹಾಗೂ ಸಬ್ ಇನ್ಸ್‌ಪೆಕ್ಟರ್ ಉಮೇಶ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ಕಾರು ಚಾಲಕ ಅಖಿಲಾಶ್ ಮತ್ತು ತನ್ನ ಹೆಂಡತಿಯ ಭ್ರೂಣ ಹತ್ಯೆ ಮಾಡಿಸಿದ್ದ ಮಹದೇಶ್ವರಪುರ ಗ್ರಾಮದ ಕಿರಣ್‌ನನ್ನು ಬಂಧಿಸಿ ವೈದ್ಯಕೀಯ ಪರೀಕ್ಷೆ ನಡೆಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಘಟನೆ ಬೆಳಕಿಗೆ ಬಂದ ದಿನವೇ ನಾಲ್ಕು ಮಂದಿಯನ್ನು ಬಂಧಿಸಿದ್ದ ಪೊಲೀಸರು ಆ ಬಳಿಕ ಸುಂಕಾತೊಣ್ಣೂರು ಗ್ರಾಮದ ನವೀನ್ ಕುಮಾರ್, ಪ್ರಮುಖ ಆರೋಪಿ ಎಂ.ಶೆಟ್ಟಿಹಳ್ಳಿ ಗ್ರಾಮದ ಅಭಿಷೇಕ್‌ಗೌಡನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು.

ಇದೀಗ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸಕೋಟೆ ಗ್ರಾಮದ ಅಖಿಲಾಶ್ ಹಾಗೂ ಮಹದೇಶ್ವರಪುರ ಗ್ರಾಮದ ಕಿರಣ್ ಬಂಧಿಸಿದ್ದು ಪ್ರಕರಣದಲ್ಲಿ ಒಟ್ಟು 8 ಮಂದಿ ಆರೋಪಿಗಳನ್ನು ಪತ್ತೆಹಚ್ಚಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಮತ್ತಷ್ಟು ಆರೋಪಿಗಳ ಪತ್ತೆಗಾಗಿ ಪೊಲೀಸರು ಬಲೆ ಬೀಸಿದ್ದಾರೆ. ಪಾಂಡವಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಪ್ರಕರಣದ ಸಂಬಂಧ ಈವರೆಗೆ ಎಂಟು ಮಂದಿಯ ಬಂಧನ



ಅಖಿಲಾಶ್



ಕಿರಣ್

ಊಗಿನಹಳ್ಳಿ ಎಂ. ಕಿಶನ್ ಟಾಪರ್

ಕಿಕ್ಕೇರಿ: ಹೋಬಳಿಯ ಊಗಿನಹಳ್ಳಿ ಗ್ರಾಮದ ಎಂ.ಕಿಶನ್ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ. 95.4ಅಂಕಗಳಿಸಿ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ. ಸಾಹಿತಿ ಜೇನುಗೂಡು ಮಹೇಶ್ ಹಾಗೂ ಭವ್ಯಶ್ರೀ ಪುತ್ರನಾದ ಎಂ. ಕಿಶನ್ ಬೆಂಗಳೂರಿನ ಇಗ್ಲೂರಿನ ನ್ಯಾಷನಲ್ ಪಬ್ಲಿಕ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ಕುಗ್ರಾಮವಾದ ಊಗಿನಹಳ್ಳಿ ತನ್ನ ತವರಾಗಿದೆ. ವಾಹನ ಸೌಲಭ್ಯವಿಲ್ಲದೆ ಓದಲು ಪರದಾಡುವ ಸ್ಥಿತಿ ಇದೆ. ಪೋಷಕರ ಸಹಕಾರ ಮರೆಯಲಾರೆ. ಅತೀ ಹೆಚ್ಚು ಅಂಕಗಳಿಕೆಗೆ ಪರಿಶ್ರಮದ ಜೊತೆ ಪತ್ರಿಕೆಯಲ್ಲಿ ನಿತ್ಯ ಪ್ರಕಟಿಸುತ್ತಿದ್ದ ಎಸ್ಸೆಸ್ಸೆಲ್ಸಿ ಮಾರ್ಗಸೂಚಿ ಉಪಯುಕ್ತ ಮಾಹಿತಿ ಕಾರಣವಾಗಿದೆ ಎಂದರು.

ಕಾಂಗ್ರೆಸ್ ವಿರುದ್ಧ ಇಂದು ಬೃಹತ್ ಪ್ರತಿಭಟನೆ

ಭಾರತೀನಗರ.ಮೇ11– ಎನ್‌ಡಿಎ ಮೈತ್ರಿಕೂಟ ಮತ್ತು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕುಟುಂಬದ ವಿರುದ್ಧ ಕಾಂಗ್ರೆಸ್ ಪಕ್ಷದ ನಾಯಕರು ನಡೆಸುತ್ತಿರುವ ಷಡ್ಯಂತರವನ್ನು ಖಂಡಿಸಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ವತಿಯಿಂದ ಬೃಹತ್ ಪ್ರತಿಭಟನೆಯನ್ನು ಮೇ 12 ಬೆಳಿಗ್ಗೆ 10 ಗಂಟೆಗೆ ಮದ್ದೂರು ಪಟ್ಟಣದ ಟಿಬಿ ಸರ್ಕಲ್ ವೃತ್ತದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಡಿ.ಸಿ.ತಮ್ಮಣ್ಣ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದ ನೀಚ ರಾಜಕಾರಣದ ವಿರುದ್ಧ ಬೃಹತ್ ಪ್ರತಿಭಟನೆ ನಡೆಸಲಾಗುತ್ತಿದ್ದು, ಕಾರ್ಯಕರ್ತರು, ಮುಖಂಡರು ಭಾಗವಹಿಸಬೇಕೆಂದು ಕೋರಿದರು.

ಪೆನ್‌ಡ್ರೈವ್ ವಿಚಾರದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕುಟುಂಬವನ್ನು ಮುಗಿಸಲು ಹಲವಾರು ಆರೋಪಗಳನ್ನು ಮಾಡುತ್ತಿರುವುದು ಸರಿಯಲ್ಲ. ತಮ್ಮ ಯೋಗ್ಯತೆಗೆ ತಕ್ಕಂತೆ ಮಾತನಾಡುವುದು ಉತ್ತಮ. ನಾಲಿಗೆ ಇದೆ ಎಂದು ಗೌಡರ ಮತ್ತು ಮಾಜಿ ಸಿ.ಎಂ ಎಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧ ಲಘುವಾಗಿ ಮಾತನಾಡುವುದು ತರವಲ್ಲ. ಹೆಣ್ಣುಮಕ್ಕಳ ಬಗ್ಗೆ ಕಾಳಜಿ ಇದ್ದಿದ್ದರೆ ಪೆನ್‌ಡ್ರೈವ್ ಹಂಚಿದವರನ್ನು ಮತ್ತು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟವರ ಬಗ್ಗೆ ಕೂಡಲೇ ಕ್ರಮಕೈಗೊಳ್ಳಲಿ. ಹೆಣ್ಣುಮಕ್ಕಳನ್ನು ಸಾಮಾಜಿಕ ಜಾಲತಾಣದ ಮೂಲಕ ಬೀದಿಗೆ ಬರುವಂತೆ ಮಾಡಿರುವ ಕಾಂಗ್ರೆಸ್ ಪಕ್ಷದ ಮುಖಂಡರ ವಿರುದ್ಧ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಪಿಡಿಓ ಯೋಗೇಶ್ ನಿಧನ

ಕೆ.ಆರ್.ಪೇಟೆ: ತಾಲೂಕಿನ ಸಾರಂಗಿ ಗ್ರಾಮ ಪಂಚಾಯತ್ ಪಿಡಿಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶೀಳನೆರೆ ಯೋಗೇಶ್(55) ಅವರು ಇಂದು ಮುಂಜಾನೆ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೃತರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಹುಟ್ಟೂರು ಶೀಳನೆರೆ ಗ್ರಾಮದಲ್ಲಿ ಸಂಜೆ ನಡೆಯಿತು. ಮೃತರ ನಿಧನಕ್ಕೆ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.



ಒಂದನೇ ಪುಟದಿಂದ

ಪರಾರಿಯಾಗಿದ್ದ ಹಂತಕನ ಬಂಧನ

ಆಕೆಯ ರುಂಡವನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ವಿಷಯ: ಸೂರ್ಲಬ್ಬಿ ಸರ್ಕಾರಿ ಪ್ರೌಢಶಾಲೆಯ ಏಕೈಕ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿ ಮೀನಾ ಮೇ9 ರಂದು ಪ್ರಕಟವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಳು. ಅದೇ ದಿನ ಬೆಳಗ್ಗೆ ಈಕೆಗೂ ಮೊಣ್ಣಂಡ ಪ್ರಕಾಶ್‌ಗೂ ನಿಶ್ಚಿತಾರ್ಥ ನೆರವೇರಿತ್ತು. ಆದರೆ, ಬಾಲ್ಯ ವಿವಾಹದ ವಿಚಾರ ತಿಳಿದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ತೆರಳಿ, ಎರಡೂ ಕುಟುಂಬದವರಿಗೂ ಕಾನೂನಿನ ತಿಳುವಳಿಕೆ ಹೇಳಿ, ಬಾಲಕಿಗೆ 18 ವರ್ಷ ತುಂಬುವವರೆಗೂ ಮದುವೆ ಮಾಡಬಾರದೆಂದು ತಾಕೀತು ಮಾಡಿದ್ದಲ್ಲದೇ, ಮುಚ್ಚಳಿಕೆ ಬರೆಸಿಕೊಂಡಿದ್ದರು.

ತನ್ನ ಮದುವೆ ಮುಂದೂಡಲಾಯಿತು ಎಂದು ಆಕ್ರೋಶಗೊಂಡಿದ್ದ ಪ್ರಕಾಶ್ ಅಂದು ಸಂಜೆ ಇಬ್ಬರು ಯುವಕರೊಂದಿಗೆ ಬಾಲಕಿ ಮನೆಗೆ ತೆರಳಿ ತನಗೆ ಬಾಲಕಿಯನ್ನು ಕೂಡಲೇ ಮದುವೆ ಮಾಡಿಕೊಡಬೇಕೆಂದು ಒತ್ತಾಯಿಸಿದ್ದಾನೆ. ಆದರೆ, ಆಕೆಗೆ 18 ವರ್ಷ ತುಂಬುವವರೆಗೂ ಮದುವೆ ಮಾಡಿಕೊಡಲಾಗದು ಎಂದು ಪೋಷಕರು ಹೇಳಿದಾಗ ಸಿಟ್ಟಿಗೆದ್ದ ಆತ ಬಾಲಕಿಯ ತಂದೆ ಮತ್ತು ತಾಯಿ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ, ಬಾಲಕಿಯನ್ನು ಎಳೆದೊಯ್ದು, ಆಕೆಯ ತಲೆ ಕಡಿದು ರುಂಡದೊಂದಿಗೆ ಪರಾರಿಯಾಗಿದ್ದ. ಈತನ ಜೊತೆ ತೆರಳಿದ್ದ ಯುವಕರು ಅನಿರೀಕ್ಷಿತವಾಗಿ ನಡೆದ ಘಟನೆಯಿಂದ ಶಾಕ್ ಆಗಿದ್ದಲ್ಲದೇ ಆತನನ್ನು ತಡೆಯುವಲ್ಲಿಯೂ ವಿಫಲರಾಗಿದ್ದಾರೆ ಎನ್ನಲಾಗಿದೆ.

ನಂತರ ಮನೆಗೆ ತೆರಳಿದ್ದ ಪ್ರಕಾಶ್ ಮನೆಯಲ್ಲಿದ್ದ ಒಂಟಿನಳಿಕೆ ಬಂದೂಕು ಮತ್ತು ಕಾಡತೂಸುಗಳೊಂದಿಗೆ ತಲೆಮರೆಸಿಕೊಂಡಿದ್ದ. ನಿಶ್ಚಿತಾರ್ಥಕ್ಕೆ ಬಾರದಿದ್ದ ಮೀನಾ ಅಕ್ಕನೇ ಸಮಾಜ ಕಲ್ಯಾಣ ಇಲಾಖೆಗೆ ಮಾಹಿತಿ ನೀಡಿ ತನ್ನ ಮದುವೆ ಮುಂದೂಡಲು ಕಾರಣ ಎಂದು ಆಕೆಯನ್ನು ಕೊಲ್ಲಲು ಮನೆಯಿಂದ ಬಂದೂಕು ಕೊಂಡೊಯ್ದಿದ್ದಾನೆ ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಕೊಡಗು ಎಸ್ಪಿ ರಾಮರಾಜನ್ ಅವರು ಬಾಲಕಿ ಮನೆ, ಗರ್ವಾಲೆಯಲ್ಲಿರುವ ಆಕೆಯ ಅಕ್ಕನ ಮನೆ ಮತ್ತು ಬಾಲಕಿ ತಂದೆ ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆಗೆ ಶಸ್ತ್ರಸಜ್ಜಿತ ಪೊಲೀಸರನ್ನು ನಿಯೋಜಿಸಿದ್ದಲ್ಲದೇ, ಸೂರ್ಲಬ್ಬಿ ಮತ್ತು ಗರ್ವಾಲೆ ನಡುವಿನ ಮಾರ್ಗದಲ್ಲಿ ಹಂತಕನ ಹುಡುಕಾಟಕ್ಕಾಗಿ ಶಸ್ತ್ರಸಜ್ಜಿತ ಪೊಲೀಸ್ ಪಡೆಯನ್ನು ನಿಯೋಜಿಸಲಾಗಿತ್ತು.

ಇಂದು ಬೆಳಗ್ಗೆ ಪ್ರಕಾಶ್ ಸೂರ್ಲಬ್ಬಿ ಮತ್ತು ಗರ್ವಾಲೆ ನಡುವಿನ ಅರಣ್ಯ ಪ್ರದೇಶದಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ಆತನನ್ನು ವಿಚಾರಣೆಗೊಳಪಡಿಸಿ ಆತ ಕೊಂಡೊಯ್ದಿದ್ದ ಬಾಲಕಿಯ ರುಂಡವನ್ನು ಪೊದೆಯೊಂದರಲ್ಲಿ ವಶಪಡಿಸಿಕೊಂಡಿದ್ದಾರೆ.

ಬಾಲಕಿಯ ಅಕ್ಕನೇ ಹಂತಕನ ಮುಂದಿನ ಟಾರ್ಗೆಟ್

ಮಡಿಕೇರಿ: ಈ ಕೊಲೆಗೆ ಮದುವೆ ಮುಂದೂಡಿಕೆಯೇ ಕಾರಣ. ಬಾಲಕಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆಯಾಗಿ ಸಂಭ್ರಮದಲ್ಲಿದ್ದಳು. ಆ ದಿನವೇ ಮೀನಾ ಮತ್ತು ಪ್ರಕಾಶ್ ಮದುವೆ ನಿಶ್ಚಿತಾರ್ಥ ನೆರವೇರಿತ್ತು. ಬಾಲ್ಯ ವಿವಾಹ ಮಾಹಿತಿ ತಿಳಿದ ಮಹಿಳಾ ಮತ್ತು ಮಕ್ಕಳ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ತೆರಳಿ ಬಾಲಕಿ ಅಪ್ರಾಪ್ತಳಾದ ಕಾರಣ 18 ವರ್ಷ ತುಂಬುವವರೆಗೆ ಮದುವೆ ಮಾಡುವಂತಿಲ್ಲ ಎಂದು ಮಾಹಿತಿ ನೀಡಿ ಎರಡೂ ಕುಟುಂಬಸ್ಥರಿಂದ ಮುಚ್ಚಳಿಕೆ ಬರೆಸಿಕೊಂಡಿದ್ದರು ಎಂದು ಮಡಿಕೇರಿ ಎಸ್ಪಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದರಿಂದ ಕುಪಿತನಾದ ಆರೋಪಿ ಪ್ರಕಾಶ್ ಅದೇ ದಿನ ಸಂಜೆ ವೇಳೆ ಬಾಲಕಿ ಮನೆಗೆ ತೆರಳಿ ಮದುವೆ ಮುಂದೂಡಿಕೆ ವಿಚಾರವಾಗಿ ಜಗಳ ಮಾಡಿದ್ದಾನೆ. ಈ ಸಂದರ್ಭ ಮುಂದಿನ 2 ವರ್ಷ ಮದುವೆ ಸಾಧ್ಯವಿಲ್ಲ ಎಂದು ಬಾಲಕಿ ಪೋಷಕರು ಹೇಳಿದ್ದರು. ಈ ವೇಳೆ ಬಾಲಕಿಯ ತಂದೆ ಸುಬ್ರಮಣಿ ಮತ್ತು ಅವರ ಪತ್ನಿ ಜಾನಕಿ ಅವರ ಮೇಲೆ ಹಲ್ಲೆ ನಡೆಸಿದ್ದಾನೆ. ಬಳಿಕ ಮನೆಯಲ್ಲಿದ್ದ ಮರ ಕಡಿಯುವ ಕತ್ತಿಯ ಸಮೇತ ಬಾಲಕಿಯನ್ನು ಮನೆಯಿಂದ 100 ಮೀಟರ್ ಎಳೆದೊಯ್ದು ಆಕೆಯ ತಲೆ ಕಡಿದು ಕೊಲೆ ಮಾಡಿದ್ದಾನೆ. ಬಳಿಕ ಆಕೆಯ ರುಂಡವನ್ನು ಅಲ್ಲಿಂದ 100 ಮೀಟರ್ ದೂರದ ಪೊದೆಯಲ್ಲಿ ಹಾಕಿದ್ದಾನೆ ಎಂದು ಹೇಳಿದರು.

ನಿಶ್ಚಿತಾರ್ಥದ ಬಳಿಕ ತಮ್ಮ ಮದುವೆ ಮುಂದೂಡಿಕೆಯಾಗಲು ಗರ್ವಾಲೆ ಗ್ರಾಮದಲ್ಲಿರುವ ಬಾಲಕಿಯ ಅಕ್ಕ ಕಾರಣ. ಆಕೆಯೇ ಸಮಾಜ ಕಲ್ಯಾಣ ಇಲಾಖೆಗೆ ಮಾಹಿತಿ ನೀಡಿದ್ದರು ಎಂದು ಆರೋಪಿ ಪ್ರಕಾಶ್ ಶಂಕಿಸಿದ್ದ. ಬಾಲ್ಯ ವಿವಾಹದ ಮದುವೆ ನಿಶ್ಚಿತಾರ್ಥ ಕಾರ್ಯಕ್ಕೂ ಕೂಡ ಬಾಲಕಿಯ ಅಕ್ಕ ಬಂದಿರಲಿಲ್ಲ. ಈ ಹಿನ್ನೆಲೆಯಲ್ಲಿ ಆಕೆಯೇ ಮದುವೆ ಮುಂದೂಡಿಕೆಗೆ ಕಾರಣ ಎಂದು ಶಂಕಿಸಿದ್ದ ಆರೋಪಿ, ಆಕೆಯನ್ನು ಕೂಡ ಕೊಲೆ ಮಾಡುವ ಸಂಚನ್ನು ರೂಪಿಸಿದ್ದ. ಇದಕ್ಕಾಗಿ ಮನೆಯಲ್ಲಿದ್ದ ಒಂಟಿ ನಳಿಕೆಯ ಬಂದೂಕು ಸಹಿತ ಕಾಡತೂಸುಗಳನ್ನು ಪಡೆದುಕೊಂಡು ಕಾಡಿನಲ್ಲಿ ತಲೆಮರೆಸಿಕೊಂಡಿದ್ದ ಎಂದು ಎಸ್.ಪಿ. ರಾಮರಾಜನ್ ವಿವರಿಸಿದರು.

ತನಿಖೆ ಮುಂದುವರೆಯಲಿದೆ: ಕೊಲೆ ಕೃತ್ಯ ನಡೆದ ಸಂದರ್ಭ ಆರೋಪಿ ಜೊತೆಯಲ್ಲಿ ಇನ್ನಿಬ್ಬರು ಯುವಕರಿದ್ದರು ಎಂದು ಗ್ರಾಮಸ್ಥರು ಹೇಳಿದ್ದಾರೆ. ಈ ಕೊಲೆ ಪ್ರಕರಣಕ್ಕೂ ಮುನ್ನ ಆ ಯುವಕರು ಆರೋಪಿಯ ಜೊತೆ ಸೇರಿ ಸಂಚು ರೂಪಿಸಿದ್ದಾರೆಯೇ ಎನ್ನುವ ಕುರಿತೂ ತನಿಖೆ ನಡೆಯಲಿದೆ ಎಂದರು.

ಮೈಸೂರು ಬಿವಿಬಿ ಶಾಲೆಗೆ ಶೇ.100 ಫಲಿತಾಂಶ

ಮೈಸೂರು, ಮೇ 11– ಮೈಸೂರು ವಿಜಯನಗರ ಮೊದಲ ಹಂತದ ಭಾರತೀಯ ವಿದ್ಯಾಭವನ (ಬಿವಿಬಿ) ಶಾಲೆ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದೆ.

ಪರೀಕ್ಷೆಗೆ ಹಾಜರಾಗಿದ್ದ ಎಲ್ಲಾ 155 ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದಾರೆ. ಇವರಲ್ಲಿ 103 ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, 26ಕ್ಕೂ ಹೆಚ್ಚು ವಿದ್ಯಾರ್ಥಿಗಳು 600ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. 52 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಪಡೆದಿದ್ದಾರೆ ಎಂದು ಶಾಲೆಯ ಪ್ರಕಟಣೆ ತಿಳಿಸಿದೆ.

ವಿಕಲಚೇತನ ಮಕ್ಕಳ ದಾಖಲಾತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 11– ಮೈಸೂರಿನ ವಾಗ್ದೇವಿ ನಗರದಲ್ಲಿರುವ ಶ್ರೀಮತಿ ಪುಟ್ಟೀರಮ್ಮ ಶ್ರವಣದೋಷವುಳ್ಳ ಮಕ್ಕಳ ವಸತಿ ಶಾಲೆಯು ಶ್ರವಣದೋಷವುಳ್ಳ ವಿಕಲಚೇತನ ಹೆಣ್ಣು ಮಕ್ಕಳಿಗಾಗಿ 35 ವರ್ಷಗಳಿಂದ ಶಾಲೆಯನ್ನು ನಡೆಸಿಕೊಂಡು ಬರುತ್ತಿದೆ.

ಈ ಮಕ್ಕಳೆಲ್ಲರೂ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಂದ ಬಂದು ವಿದ್ಯೆಯನ್ನು ಪಡೆದುಕೊಂಡು ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಿದ್ದಾರೆ. ಈ ವಸತಿ ಶಾಲೆಗೆ 2023–24ನೇ ಸಾಲಿಗೆ 1 ರಿಂದ 10ನೇ ತರಗತಿಯವರೆಗೆ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಂದ ಶಾಲೆಗೆ ದಾಖಲಾತಿಯನ್ನು ಮಾಡಿಕೊಳ್ಳಲಾಗುತ್ತಿದೆ.

ದಾಖಲಾದ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸ, ಊಟ, ವಸತಿ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಲಾಗುವುದು. ಹೆಚ್ಚಿನ ಮಾಹಿತಿಗೆ ಶ್ರೀಮತಿ ಪುಟ್ಟೀರಮ್ಮ ಶ್ರವಣದೋಷವುಳ್ಳ ಹೆಣ್ಣು ಮಕ್ಕಳ ವಸತಿ ಶಾಲೆ, #350, ವಾಗ್ದೇವಿನಗರ, ಟೆಲಿಕಾಂ ಬಡಾವಣೆ, ಅಖಿಲ ಭಾರತೀಯ ವಾಕ್ ಶ್ರವಣ ಸಂಸ್ಥೆಯ ಹತ್ತಿರ, ದೂ. 9591265216,9980057655 ಸಂಪರ್ಕಿಸಬಹುದು.

ಜೆಎಸ್‌ಎಸ್ ಪ್ರೌಢಶಾಲೆಗೆ ಶೇ. 100 ಫಲಿತಾಂಶ

ಮೈಸೂರು, ಮೇ 11–ಇತ್ತೀಚೆಗೆ ಪ್ರಕಟವಾದ ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶದಲ್ಲಿ ಮೇಟಗಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆಗೆ ಶೇ.100 ರಷ್ಟು ಫಲಿತಾಂಶ ಬಂದಿದೆ. ಪರೀಕ್ಷೆ ತೆಗೆದುಕೊಂಡ ಒಟ್ಟು 54 ವಿದ್ಯಾರ್ಥಿಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, A+ ಶ್ರೇಣಿಯಲ್ಲಿ–11 ವಿದ್ಯಾರ್ಥಿಗಳು, A ಶ್ರೇಣಿಯಲ್ಲಿ – 12 ವಿದ್ಯಾರ್ಥಿಗಳು, B+ ಶ್ರೇಣಿಯಲ್ಲಿ – 12 ವಿದ್ಯಾರ್ಥಿಗಳು, B ಶ್ರೇಣಿಯಲ್ಲಿ – 12 ವಿದ್ಯಾರ್ಥಿಗಳು, C+ ಶ್ರೇಣಿಯಲ್ಲಿ – 07 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಕು. ಅರುಣ ಹೆಚ್ ಆರ್ ವಿದ್ಯಾರ್ಥಿನಿಯು 625ಕ್ಕೆ 606 ಅಂಕ ಗಳಿಸಿದ್ದಾಳೆ.

ದೇಶದಲ್ಲೇ ಮೊಟ್ಟಮೊದಲ ಬಾರಿಗೆ ಒಬಿಸಿಗೆ ಮೀಸಲಾತಿ ಜಾರಿಗೆ ತಂದ ಹೆಗ್ಗಳಿಕೆ ನಾಲ್ವಡಿ ಕೃಷ್ಣ ಒಡೆಯರ್‌ಗೆ ಸಲ್ಲುತ್ತೆ

ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ ಅಭಿಮತ

ಮೈಸೂರು, ಮೇ 11(ಎಸ್‌ಪಿಎನ್)– ದೇಶದಲ್ಲೇ ಮೊದಲ ಬಾರಿಗೆ 1919ರಲ್ಲಿ ದಲಿತರನ್ನೊಳಗೊಂಡ ಒಬಿಸಿ ಮೀಸಲಾತಿ ಜಾರಿಗೊಳಿಸಿದ ಕೀರ್ತಿ ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಲ್ಲುತ್ತದೆ ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ ಹೇಳಿದರು.

ಮೈಸೂರು ಗಂಗೋತ್ರಿ ಬಡಾವಣೆಯ ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ ವತಿಯಿಂದ ಆಯೋಜಿಸಿದ್ದ 'ಮೈಸೂರು ಸಂಸ್ಥಾನದಲ್ಲಿ ಮೀಸಲಾತಿ; ಒಡೆಯರ್‌ಗಳ ಕೊಡುಗೆ' ಕುರಿತು ವಿಶೇಷ ಉಪನ್ಯಾಸ ಸರಣಿ–2ರಲ್ಲಿ ಅವರು ಮಾತನಾಡಿದರು.

ಸಮಾಜದಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿರು ಹಿಂದುಳಿದ ವರ್ಗಗಳ ಶೈಕ್ಷಣಿಕ ಅಭಿವೃದ್ಧಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿ ಮತ್ತು ವಿಕಾಸ ಮನೋಭಾವವನ್ನು ಸ್ವಾಗತಿಸಲೇಬೇಕು. ಪ್ರತಿಭೆಗೆ ಮೊದಲ ಆದ್ಯತೆ ನೀಡಬೇಕೆಂಬ ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರ ವಿರೋಧದ ನಡುವೆಯೂ ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕ ಹಾಗೂ ಹುದ್ದೆಗಳಲ್ಲಿ ಮೀಸಲಾತಿ ಜಾರಿಗೊಳಿಸಿದ ಘಟನಾವಳಿಗಳನ್ನು ಎಳೆಎಳೆಯಾಗಿ ವಿವರಿಸಿದರು.

ಸರ್ಕಾರಿ ಹುದ್ದೆಗಳಲ್ಲಿ ಒಬಿಸಿ ವರ್ಗದವರಿಗೂ ಮೀಸಲಾತಿ ನೀಡಬೇಕು. ಎಲ್ಲರಿಗೂ ಶಿಕ್ಷಣ ದೊರಕುವಂತಾಗಬೇಕು ಎಂದು ಆಗ್ರಹಿಸಿ ಹಿಂದುಳಿದ ವರ್ಗಗಳ ಜಾಗೃತಿ ಆಂದೋಲನದ ವಿಶೇಷಾಧಿಕಾರಿ ಕೆ.ಎಚ್.ರಾಮಯ್ಯರ ಹೋರಾಟ ಹಾಗೂ ರಾಜ್ಯದ ಮೊದಲ ಪ್ರಾದೇಶಿಕ ಪಕ್ಷವಾದ ಪ್ರಜಾಮಿತ್ರ ಮಂಡಳಿ ಸಂಸ್ಥಾಪಕ ಚನ್ನಯ್ಯನವರ ಜಾಣತನವನ್ನು ಮೀಸಲಾತಿ ಜಾರಿ ವಿಚಾರದಲ್ಲಿ ನಾವ್ಯಾರು ಮರೆಯಬಾರದು ಎಂದು ತಿಳಿಸಿದರು.

ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ.50 ರಷ್ಟು ಮೀಸಲಾತಿ ನೀಡುವ ಪದ್ಧತಿ ಜಾರಿಗೆ ತಂದ ಕೀರ್ತಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಸಲ್ಲುತ್ತದೆ. ಶೇ.96ರಷ್ಟು ಹಿಂದುಳಿದ ಜನರು ಆರ್ಥಿಕವಾಗಿ ತೀರಾ ಹಿಂದುಳಿದಿದ್ದಾರೆಂದು ಮಹಾರಾಜರು ಮತ್ತು ಬ್ರಿಟಿಷ್ ಅಧಿಕಾರಿಗಳಿಗೆ ಮನದಟ್ಟು ಮಾಡಿಸುವ ವಿಚಾರದಲ್ಲಿ ಬ್ಯಾರಿಸ್ಟರ್ ಕೆ.ಎಚ್.ರಾಮಯ್ಯ ಮತ್ತು ಚನ್ನಯ್ಯ ಅವರ ಶ್ರಮವನ್ನು ನಾವು ಎಂದಿಗೂ ಮರೆಯುವಂತಿಲ್ಲ ಎಂದರು.

ಮೈಸೂರು ಸಂಸ್ಥಾನದ ಜಾರಿಗೊಳಿಸಿದ್ದ ಹಿಂದುಳಿದ ವರ್ಗದ ಮೀಸಲಾತಿ ಹೋರಾಟವನ್ನು ದಾಖಲಿಸುವಲ್ಲಿ ಇಂದಿಗೂ ಯಾವುದೇ ಸಂಶೋಧಕರು ಮುಂದಾಗಿಲ್ಲ ಎಂಬುದು ದುರಂತವೇ ಸರಿ. ಅಲ್ಲದೆ, ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರ ಅಭಿಪ್ರಾಯಗಳಿಗೂ ಮನ್ನಣೆ ನೀಡಿ, ಒಬಿಸಿ ವರ್ಗಕ್ಕೆ ನ್ಯಾಯ ಒದಗಿಸಿದ ಕೀರ್ತಿ ಮೈಸೂರು ಸಂಸ್ಥಾನಕ್ಕೆ ಸಲ್ಲುತ್ತದೆ ಎಂದರಲ್ಲದೆ. ಶೇ.50ರಷ್ಟು ಹಿಂದುಳಿದ ವರ್ಗದವರಿಗೆ ಮೀಸಲಾತಿ ನೀಡುವ ವಿಚಾರವಾಗಿ ವರದಿ ತಯಾರಿಸಲು 1917ರ ಮೇ 8ರಂದು ಜಸ್ಟೀಸ್ ಮಿಲ್ಲರ್ ನೇತೃತ್ವದ ಸಮಿತಿ ರಚಿಸಿದ ಪ್ರಸಂಗವನ್ನು ವಿವರಿಸಿದರು.

ಈ ಮಧ್ಯೆ ದಿವಾನ್ ವಿಶ್ವೇಶ್ವರಯ್ಯವರು ಅಸಿಸ್ಟಂಟ್ ಕಮಿಷನರ್‌ಗಳ ನೇಮಕಾತಿಯಲ್ಲಿ ಎಲ್ಲಾ ಹುದ್ದೆಗಳಿಗೂ ಮೇಲ್ವರ್ಗದ ಅಭ್ಯರ್ಥಿಗಳನ್ನೇ ಆಯ್ಕೆ ಮಾಡಿದ ಪ್ರಸಂಗದಲ್ಲಿ ಪ್ರಜಾಮಿತ್ರ ಮಂಡಳಿ ಪಕ್ಷ ಈ ವಿಷಯವನ್ನು ಬ್ರಿಟಿಷ್ ಅಧಿಕಾರಿಗಳ ಗಮನಕ್ಕೆ ತಂದು ಮಹಾರಾಜರ ಮೇಲೆ ಒತ್ತಡ ಹಾಕಿಸಿ, ಸರ್ಕಾರಿ ಉದ್ಯೋಗದಲ್ಲಿ 10 ಹುದ್ದೆಯನ್ನು ಹಿಂದುಳಿದ ವರ್ಗದವರಿಗೆ ನೀಡಿದ ಸನ್ನಿವೇಶವನ್ನು ವಿವರಿಸಿದರು.

ಮಹಾರಾಜರ ಆದೇಶದಿಂದ ಅಸಮಾಧಾನಗೊಂಡ ಸರ್‌ಎಂವಿ ಅವರು 1918ರ ಡಿ.8ರಂದು ತಮ್ಮ ಪದವಿಗೆ ರಾಜೀನಾಮೆ ನೀಡಿ ನಿರ್ಗಮಿಸಿದರು. ಮುಂದೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಂಗಿ ಜಯಲಕ್ಷ್ಮಮ್ಮಣ್ಣಿಯವರ ಪತಿ ಕಾಂತರಾಜ ಅರಸ್ ಅವರು ದಿವಾನರಾಗಿ ಅಧಿಕಾರವಹಿಸಿಕೊಂಡ ನಂತರ ಮಿಲ್ಲರ್ ಆಯೋಗದ ವರದಿಯನ್ನು ನಂತರ, ಅಂತಿಮವಾಗಿ ಹಿಂದುಳಿದ ವರ್ಗಗಳಿಗೆ ಸರ್ಕಾರಿ ಉದ್ಯೋಗದಲ್ಲಿ ಶೇ.50ರಷ್ಟು ಮೀಸಲಾತಿ ನೀಡುವ ವರದಿಯನ್ನು ಶಾಸನ ಬದ್ಧಗೊಳಿಸುವ ಆದೇಶ ಹೊರಡಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಮುಕ್ತ ವಿವಿ ವಿಶ್ರಾಂತ ಕುಲಪತಿ ಪ್ರೊ.ರಾಮೇಗೌಡ, ಮಾಜಿ ಮೇಯರ್ ವಿಶ್ವನಾಥ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



'ಮೈಸೂರು ಸಂಸ್ಥಾನದಲ್ಲಿ ಮೀಸಲಾತಿ; ಒಡೆಯರ್‌ಗಳ ಕೊಡುಗೆ' ಕುರಿತು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ ವಿಶೇಷ ಉಪನ್ಯಾಸ ನೀಡಿದರು.



ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ನೂತನ ಗ್ರಂಥಾಲಯ ಸಂಕೀರ್ಣದಲ್ಲಿ ಆಯೋಜಿಸಲಾಗಿರುವ ಕರ್ನಾಟಕ ಎಂಡೋಕ್ರೈನ್ ಸೊಸೈಟಿಯ 6ನೇ ವಾರ್ಷಿಕ ಸಮ್ಮೇಳನ 'ಹಾರ್ಮೋನ್ ರಿದಮ್'ಗೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಶನಿವಾರ ಚಾಲನೆ ನೀಡಿದರು. ಮೈಸೂರು ವೈದ್ಯಕೀಯ ಕಾಲೇಜಿನ ಡೀನ್ ಡಾ.ದಾಕ್ಷಾಯಣಿ, ಶ್ರೀ ಆದಿಚುಂಚನಗಿರಿ ವೈದ್ಯಕೀಯ ಕಾಲೇಜಿನ ಕುಲಪತಿ ಡಾ.ಶೇಖರ್, ಕರ್ನಾಟಕ ಎಂಡೋಕ್ರೈನ್ ಸೊಸೈಟಿಯ ಡಾ.ಅರ್ಪಣ ದೇವ್, ಡಾ.ಸೋಮಶೇಖರ ರೆಡ್ಡಿ, ಮೈಸೂರು ಎಂಡೋಕ್ರೈನ್ ಸೊಸೈಟಿಯ ಛೇರ್ಮನ್ ಡಾ.ಅನೀಸ್ ಬೆಲ್, ಸಮ್ಮೇಳನದ ಆಯೋಜಕರಾದ ಡಾ.ಎಂ.ಎಸ್.ರಘು, ಡಾ.ಲಕ್ಷ್ಮಿ, ಡಾ.ಅಜಯ್, ಡಾ.ಪ್ರವೀಣ್, ಡಾ.ಹರೀಶ್ ಡರ್ಲಾ, ಡಾ.ಶ್ರುತಿ, ಡಾ.ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.

ಉಚಿತ ದಾಖಲಾತಿಗೆ ಅರ್ಜಿ ಆಹ್ವಾನ

ಮೈಸೂರು, ಮೇ 11– ಮೈಸೂರಿನ ಇಲವಾಲದಲ್ಲಿರುವ ಕಲಾಭಾರತಿ ವಿದ್ಯಾಸಂಸ್ಥೆಯು ಅನಾಥ ಮಕ್ಕಳಿಗೆ ಪಿಯುಸಿ ಕಾಲೇಜಿನ ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಿಗೆ ಎಸ್‌ಎಸ್‌ಎಲ್‌ಸಿಯಲ್ಲಿ ಪಡೆದ ಅಂಕಗಳಿಗೆ ಅನುಗುಣವಾಗಿ ಉಚಿತ ದಾಖಲಾತಿ ಮಾಡಿಕೊಳ್ಳಲು ನಿರ್ಧರಿಸಿದೆ. ಬಾಲಕರಿಗೆ ಬಿಸಿಎಂ ಹಾಸ್ಟೆಲ್ ವ್ಯವಸ್ಥೆಯೂ ಇದೆ. ದಾಖಲಾತಿ ಸಮಯದಲ್ಲಿ ಪೋಷಕರ ಮರಣ ಪತ್ರ ಮತ್ತು ಆಧಾರ್ ಕಾರ್ಡ್ ಕಡ್ಡಾಯ. ಹೆಚ್ಚಿನ ಮಾಹಿತಿಗೆ ಮೊ. 9535333467, 8150964055 ಸಂಪರ್ಕಿಸಬಹುದು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯಾಗಿ ಈ.ಸಿ.ನಿಂಗರಾಜು ಗೌಡ

ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡರೊಂದಿಗೆ ಸೆಣಸಾಟ

ಮೈಸೂರು, ಮೇ 11(ಎಸ್‌ಬಿಡಿ)– ವಿಧಾನಪರಿಷತ್ ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಈ.ಸಿ.ನಿಂಗರಾಜು ಗೌಡ ಅವರನ್ನು ಕಣಕ್ಕಿಳಿಸಲಾಗಿದೆ.



ನಿಂಗರಾಜು ಗೌಡ

ವಿಧಾನಪರಿಷತ್‌ನ 6 ಕ್ಷೇತ್ರಗಳ ಪೈಕಿ ನೈರುತ್ಯ ಶಿಕ್ಷಕರ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಲಾಗಿದ್ದು, ಉಳಿದಂತೆ ದಕ್ಷಿಣ ಶಿಕ್ಷಕರ ಕ್ಷೇತ್ರಕ್ಕೆ ಈ.ಸಿ.ನಿಂಗರಾಜು ಗೌಡ, ಈಶಾನ್ಯ ಪದವೀಧರ ಕ್ಷೇತ್ರಕ್ಕೆ ಅಮರನಾಥ್ ಪಾಟೀಲ್, ನೈರುತ್ಯ ಪದವೀಧರ ಕ್ಷೇತ್ರಕ್ಕೆ ಡಾ.ಧನಂಜಯ ಸರ್ಜಿ, ಬೆಂಗಳೂರು ಪದವೀಧರ ಕ್ಷೇತ್ರಕ್ಕೆ ಅ.ದೇವೇಗೌಡ ಹಾಗೂ ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ವೈ.ಎ.ನಾರಾಯಣಸ್ವಾಮಿ ಅವರನ್ನು ಎನ್‌ಡಿಎ ಅಭ್ಯರ್ಥಿಗಳನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಂಗರಾಜು ಪರಿಚಯ: ದಕ್ಷಿಣ ಶಿಕ್ಷಕರ ಕ್ಷೇತ್ರದ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಈ.ಸಿ.ನಿಂಗರಾಜು ಗೌಡ, ಮೂಲತಃ ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು ಈರೇಗೌಡನಕೊಪ್ಪಲಿನವರಾಗಿದ್ದು, ಮೈಸೂರಿನ ಶ್ರೀರಾಂಪುರದಲ್ಲಿ ನೆಲೆಸಿದ್ದಾರೆ. ಬಿ.ಎಸ್ಸಿ, ರಾಜ್ಯಶಾಸ್ತ್ರ ಹಾಗೂ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದಲ್ಲಿ ಎಂ.ಎ, ಪಿಹೆಚ್.ಡಿ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಎಂ.ಫಿಲ್ ಹಾಗೂ ವಿವಿಧ ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಮೈಸೂರು ವಿವಿ ಮಾಹಿತಿ ವಿಜ್ಞಾನ ಮತ್ತು ತಂತ್ರಜ್ಞಾನ ಕೇಂದ್ರ ಮತ್ತು ಆಡಳಿತ ತರಬೇತಿ ಸಂಸ್ಥೆ(ಎಟಿಐ)ಯಲ್ಲಿ ಗ್ರಂಥಪಾಲಕರಾಗಿ ಸೇವೆ ಸಲ್ಲಿಸಿ, ಸ್ವಯಂ ನಿವೃತ್ತಿ ಪಡೆದಿದ್ದಾರೆ.

ವಿದ್ಯಾರ್ಥಿ ದೆಸೆಯಲ್ಲೇ ಆರ್‌ಎಸ್‌ಎಸ್, ಎಬಿವಿಪಿಯಲ್ಲಿ ಸಕ್ರಿಯರಾಗಿದ್ದ ಇವರು, ಒಕ್ಕಲಿಗ ಜಾಗೃತ ವೇದಿಕೆ, ಮೈಸೂರು ವಿಶ್ವವಿದ್ಯಾನಿಲಯ ಹೋರಾಟ ಸಮಿತಿ ಸೇರಿದಂತೆ ಹಲವು ಸಂಘಟನೆ ಹಾಗೂ ಸಂಸ್ಥೆಗಳ ಪದಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದಾರೆ. ಹಲವು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗಿಯಾಗಿದ್ದು, 1994ರಿಂದಲೂ ಬಿಜೆಪಿ ಕಾರ್ಯಕರ್ತರಾಗಿ ಹಲವು ಚುನಾವಣೆಗಳಲ್ಲಿ ಜವಾಬ್ದಾರಿ ನಿರ್ವಹಿಸಿದ್ದಾರೆ. ಮೈಸೂರು ವಿವಿ ಸಿಂಡಿಕೇಟ್ ಸದಸ್ಯರಾಗಿ ಅಧ್ಯಾಪಕರ ಸಮಸ್ಯೆಗಳಿಗೆ ದನಿಯಾಗಿದ್ದ ಈ.ಸಿ.ನಿಂಗರಾಜು ಗೌಡರು, ಪದವೀಧರರು ಮತ್ತು ಶಿಕ್ಷಕರೊಂದಿಗೆ ಉತ್ತಮ ಒಡನಾಟ ಹೊಂದಿದ್ದಾರೆ.

ಅವಕಾಶಕ್ಕೆ ಸಂತಸವಾಗಿದೆ: ಬಿಜೆಪಿಯಲ್ಲಿ ಸಾಮಾನ್ಯ ಕಾರ್ಯಕರ್ತರಿಗೂ ಅವಕಾಶ ಸಿಗಲಿದೆ ಎಂಬುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಹಾಗೆಯೇ ನನ್ನನ್ನೂ ಗುರುತಿಸಿ ಟಿಕೆಟ್ ನೀಡಿರುವುದು ಸಂತಸ ತಂದಿದೆ. ಹಲವು ವರ್ಷಗಳಿಂದ ಬಿಜೆಪಿ ಕಾರ್ಯಕರ್ತನಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕಳೆದ ಬಾರಿ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ನೀಡುವಂತೆ ಕೋರಿದ್ದೆ. ಆದರೆ ಅವಕಾಶ ಸಿಗದಿದ್ದರೂ ಪಕ್ಷ ಆಯ್ಕೆ ಮಾಡಿದ್ದ ಅಭ್ಯರ್ಥಿ ಪರವಾಗಿ ಕೆಲಸ ಮಾಡಿದ್ದೆವು. ಈ ಬಾರಿ ನನ್ನ ಪಕ್ಷ ನಿಷ್ಠೆ ಗುರುತಿಸಿ ಟಿಕೆಟ್ ನೀಡಿರುವುದಕ್ಕೆ ಪಕ್ಷದ ನಾಯಕರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಎಂದು ಈ.ಸಿ.ನಿಂಗರಾಜ್ ಗೌಡ ಸಂತಸ ವ್ಯಕ್ತಪಡಿಸಿದ್ದಾರೆ.

ಮರಿತಿಬ್ಬೇಗೌಡ v/s ನಿಂಗರಾಜು ಗೌಡ

ದಕ್ಷಿಣ ಶಿಕ್ಷಕರ ಕ್ಷೇತ್ರ ಎಲ್ಲಾ ಪಕ್ಷಗಳಿಗೂ ಪ್ರತಿಷ್ಠೆಯ ಕಣವಾಗಿದೆ. ಕಳೆದ ಬಾರಿ ಜೆಡಿಎಸ್‌ನಿಂದ ಆಯ್ಕೆಯಾಗಿದ್ದ ಮರಿತಿಬ್ಬೇಗೌಡರು ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯಲಿದ್ದು, ಅಧಿಕೃತ ಘೋಷಣೆಯಷ್ಟೇ ಬಾಕಿ ಇದೆ. ಬಿಜೆಪಿ–ಜೆಡಿಎಸ್ ಮೈತ್ರಿ ಹಿನ್ನೆಲೆಯಲ್ಲಿ ಉಭಯ ಪಕ್ಷಗಳಲ್ಲೂ ಸಾಕಷ್ಟು ಮಂದಿ ಆಕಾಂಕ್ಷಿಗಳಿದ್ದರು. ಅಂತಿಮವಾಗಿ ಮೈತ್ರಿ ಅಭ್ಯರ್ಥಿಯಾಗಿ ಈ.ಸಿ.ನಿಂಗರಾಜು ಗೌಡರನ್ನು ಅಖಾಡಕ್ಕಿಳಿಸಲಾಗಿದೆ. ರಾಜ್ಯದ ಮೂರು ಶಿಕ್ಷಕರ ಕ್ಷೇತ್ರಗಳಿಗೆ ಮತ್ತು ಮೂರು ಪದವೀಧರ ಕ್ಷೇತ್ರಗಳಿಗೆ ಜೂ. 3ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆವರೆಗೆ ಮತದಾನ ನಡೆಯಲಿದ್ದು, ಜೂ.6ರಂದು ಫಲಿತಾಂಶ ಪ್ರಕಟವಾಗಲಿದೆ. ನಾಮಪತ್ರ ಸಲ್ಲಿಕೆಗೆ ಮೇ 16 ಕೊನೆಯ ದಿನವಾಗಿದೆ.

ಪಕ್ಷ ಬದಲಾವಣೆ ಮಾಡಿದ್ದರೂ ನನ್ನ ವ್ಯಕ್ತಿತ್ವ ಬದಲಾಗಿಲ್ಲ: ಪ್ಲೀಸ್ ನನ್ನ ಬೆಂಬಲಿಸಿ

ದಕ್ಷಿಣ ಶಿಕ್ಷಕರ ಕ್ಷೇತ್ರ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಮನವಿ

ಮೈಸೂರು, ಮೇ 11(ಎಂಕೆ)– ಪಕ್ಷ ಬದಲಾವಣೆ ಮಾಡಿದ್ದರೂ ನನ್ನ ವ್ಯಕ್ತಿತ್ವ ಬದಲಾಗಿಲ್ಲ. ಬುದ್ಧ, ಬಸವ, ಅಂಬೇಡ್ಕರ್ ಮತ್ತು ಕುವೆಂಪು ಅವರ ತತ್ವಗಳೊಂದಿಗೆ ಕಳೆದ 24 ವರ್ಷ ರಾಜ್ಯದ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಧ್ವನಿಯಾಗಿ ಕೆಲಸ ಮಾಡಿರುವ ನಾನು, ಮುಂದೆಯೂ ಶಿಕ್ಷಕ ಬಂಧುಗಳಿಗೆ ಗೌರವ ತರುವ ಕೆಲಸವನ್ನು ಮಾಡುತ್ತೇನೆ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಹಾಗೂ ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಹೇಳಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ನಡೆದ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ಪೂರ್ವ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಪ್ರಥಮ ಆದ್ಯತೆಯನ್ನು ಶಿಕ್ಷರಿಗೆ ಕೊಟ್ಟಿದ್ದೇನೆ. ಪಕ್ಷ ಬದಲಾವಣೆ ಮಾಡಿದ್ದರೂ ವ್ಯಕ್ತಿತ್ವದಲ್ಲಿ ಬದಲಾವಣೆ ಮಾಡಿಕೊಂಡಿಲ್ಲ. ಮುಂದೆಯೂ ಶಿಕ್ಷಕರ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಕೆಲಸ ಮಾಡುವ ಸದುದ್ದೇಶದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ. ಕಾಂಗ್ರೆಸ್ ಪಕ್ಷದ ಎಲ್ಲಾ ಹಂತದ ಕಾರ್ಯಕರ್ತರು, ಮುಖಂಡರು, ಜನಪ್ರತಿನಿಧಿಗಳು ನನಗೆ ಬೆಂಬಲವಾಗಿ ನಿಲ್ಲುವಂತೆ ಮನವಿ ಮಾಡಿದರು.

ವಸತಿ ಶಾಲೆಗಳಲ್ಲಿನ ಗ್ರಾಮೀಣ ಮಕ್ಕಳಿಗಿಂದು ಒಳ್ಳೆಯದಾಗಿದೆ ಎಂದರೆ ಅದು ರಾಜ್ಯ ಕಾಂಗ್ರೆಸ್ ಸರ್ಕಾರದಿಂದ. ವಸತಿ ಶಾಲೆಗಳ ಶಿಕ್ಷಕರು ಕರ್ತವ್ಯ ವೇಳೆ ನಿಧನರಾದರೆ, ನೀಡಲಾಗುತ್ತಿದ್ದ 1 ಲಕ್ಷ ರೂ.ಗಳನ್ನು 5 ಲಕ್ಷಕ್ಕೆ ಏರಿಕೆ ಮಾಡಿದ್ದು, ವಾರ್ಷಿಕ 5 ಲಕ್ಷ ಆರೋಗ್ಯ ವಿಮಾ ಸೌಲಭ್ಯವನ್ನು ಕಲ್ಪಿಸಿದ್ದು ಕಾಂಗ್ರೆಸ್ ಸರ್ಕಾರ. ಶಾಲೆಗಳಲ್ಲಿ ವಾರದಲ್ಲಿ ಒಂದು ದಿನ ನೀಡುತ್ತಿದ್ದ ಮೊಟ್ಟೆಯನ್ನು ಎರಡು ದಿನ ನೀಡಬೇಕು ಎಂಬ ಮನವಿಗೆ ಸ್ಪಂದಿಸಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯ. ಹಾಗಾಗಿ ಶಿಕ್ಷಕರ ಸಮಸ್ಯೆಗಳನ್ನು ಬಗೆಹರಿಸಲು ಕಾಂಗ್ರೆಸ್ ಸರ್ಕಾರದಿಂದ ಮಾತ್ರ ಸಾಧ್ಯ. ಕಾಂಗ್ರೆಸ್ ಎಂದರೆ ಬಡವರ ಪಕ್ಷ, ಕಾಂಗ್ರೆಸ್ ಸರ್ಕಾರವೆಂದರೆ ಬಡವರ ಸರ್ಕಾರ ಎಂಬುದು ಮನೆ ಮಾತಾಗಿದೆ. ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ದೇಶದಲ್ಲಿಯೇ ಮಾದರಿ ಸರ್ಕಾರವಾಗಿದೆ. ಆರ್ಥಿಕ ಸಂಕಷ್ಟಗಳ ನಡುವೆಯೂ ಜನಪರ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ದೇಶಕ್ಕೆ ಮಾದರಿಯಾಗಿದೆ ಎಂದರು.



ನಗರದ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ನಡೆದ ದಕ್ಷಿಣ ಶಿಕ್ಷಕರ ಕ್ಷೇತ್ರದ ಚುನಾವಣಾ ಪೂರ್ವ ಸಭೆಯನ್ನುದ್ದೇಶಿಸಿ ಮರಿತಿಬ್ಬೇಗೌಡ ಮಾತನಾಡಿದರು.

ಐದನೇ ಬಾರಿ: ವಿಧಾನಪರಿಷತ್ ಚುನಾವಣೆಗೆ ಮೊದಲ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಈಗ 5ನೇ ಬಾರಿಗೆ ಮತ್ತೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದೇನೆ. ಈ ನಡುವಿನ ಮೂರು ಅವಧಿಯಲ್ಲಿ ಜೆಡಿಎಸ್‌ನಲ್ಲಿ ಹೆಚ್ಚು ಕೆಲಸ ಮಾಡಿದರೂ ವಿಧಾನ ಸಭೆ ಪ್ರವೇಶ ಮಾಡುವ ಅವಕಾಶ ದೊರೆಯಲಿಲ್ಲ. ನನ್ನ ಮೊದಲ ವಿಧಾನಪರಿಷತ್ ಚುನಾವಣೆಯ ಮೊದಲ ಪೂರ್ವ ಸಭೆಯಲ್ಲಿ ಅಜೀಜ್ ಸೇಠ್ ಅವರು ಮಾತನಾಡಿದಂತೆ ಇಂದು ಅವರ ಪುತ್ರ ತನ್ವೀರ್ ಸೇಠ್ ನನ್ನ ಪರವಾಗಿ ಸಭೆಯಲ್ಲಿ ಮಾತನಾಡಿದ್ದಾರೆ ಎಂದು ಸ್ಮರಿಸಿದರಲ್ಲದೆ ಇದೇ ಮೊದಲ ಬಾರಿಗೆ ಆಡಳಿತ ಪಕ್ಷದ ಅಭ್ಯರ್ಥಿಯಾಗಿದ್ದೇನೆ. ಇದುವರೆಗೂ ನಾನು ಯಾರಿಗೂ ದುಡ್ಡು ಹಂಚಿಲ್ಲ. ಶಿಕ್ಷಕ ಬಂಧುಗಳು ಕೂಡ ಕೇಳಿಲ್ಲ. ಕಾಂಗ್ರೆಸ್‌ನಿಂದ ಆರಂಭಿಸಿ, ಕಾಂಗ್ರೆಸ್‌ನಲ್ಲಿಯೇ ರಾಜಕೀಯ ಅಂತ್ಯವಾಗಲಿದೆ ಎನ್ನುವ ಮೂಲಕ ಇದೇ ತಮ್ಮ ಕಡೇ ಚುನಾವಣೆ ಎಂಬುದನ್ನು ಪರೋಕ್ಷವಾಗಿ ಹೇಳಿದರು.

ಒಗ್ಗಟ್ಟಿನ ಕೆಲಸ: ಶಾಸಕ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್ ಮಾತನಾಡಿ, ದಕ್ಷಿಣ ಶಿಕ್ಷಕರ ಕ್ಷೇತ್ರದಲ್ಲಿ ಮೈಸೂರು, ಮಂಡ್ಯ, ಹಾಸನ ಹಾಗೂ ಚಾ.ನಗರ ಜಿಲ್ಲೆಗಳು ಬರಲಿದ್ದು, ಒಗ್ಗಟ್ಟಿನಿಂದ ಕೆಲಸ ಮಾಡಿದರಷ್ಟೇ ಅಭ್ಯರ್ಥಿ ಗೆಲುವು ಸಾಧ್ಯ. ಈ ನಿಟ್ಟಿನಲ್ಲಿ ಇಂದಿನಿಂದಲೇ ಕಾರ್ಯಕರ್ತರು, ಮುಖಂಡರು, ಜನಪ್ರತಿನಿಧಿಗಳು ಕಾರ್ಯಪ್ರವೃತ್ತರಾಗಬೇಕು. ನಾಲ್ಕು ಬಾರಿ ವಿಧಾನಪರಿಷತ್ ಸದಸ್ಯರಾಗಿರುವ ಮರಿತಿಬ್ಬೇಗೌಡರ ಪರವಾಗಿ ಮತದಾರರನ್ನು ಮತಗಟ್ಟೆಗೆ ಕರೆತಂದು ಮತದಾನ ಮಾಡಿಸುವ ಕೆಲಸವನ್ನು ನಾವೆಲ್ಲರೂ ಮಾಡಬೇಕಿದೆ. ನಾನಾ–ನೀನಾ ಎನ್ನದೆ ಜವಾಬ್ದಾರಿ ಹಂಚಿಕೊಂಡು ಕೆಲಸ ಮಾಡುವಂತೆ ಕರೆ ನೀಡಿದರು.

ಮತದಾರರನ್ನು ಖುದ್ದು ಭೇಟಿಯಾಗಬೇಕು: ಮಾಜಿ ಶಾಸಕ ಡಾ.ಯತೀಂದ್ರ ಮಾತನಾಡಿ, ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರನ್ನು ಖುದ್ದು ಭೇಟಿ ಮಾಡಿ ಮತಯಾಚನೆ ಮಾಡಬೇಕು. ಎಲ್ಲಾ ಸಹಕಾರವನ್ನು ಆಯಾ ವಿಧಾನಸಭಾ ಕ್ಷೇತ್ರದ ಶಾಸಕರು ನೀಡಬೇಕು. ಬಹಳ ವರ್ಷಗಳಿಂದ ದಕ್ಷಿಣ ಶಿಕ್ಷಕರ ಕ್ಷೇತ್ರ ಕಾಂಗ್ರೆಸ್‌ಗೆ ಸಿಕ್ಕಿಲ್ಲ. ಹಾಗಾಗಿ ಈ ಬಾರಿಯ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿ ಕೆಲಸ ಮಾಡಬೇಕಿದೆ ಎಂದು ತಿಳಿಸಿದರು. ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಳಲೆ ಕೇಶವಮೂರ್ತಿ, ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ರಾಜ್ಯ ಮಹಿಳಾ ಘಟಕದ ಅಧ್ಯಕ್ಷ ಪುಷ್ಪಾ ಅಮರನಾಥ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಮೈಲ್ಯಾಕ್ ಮಾಜಿ ಅಧ್ಯಕ್ಷ ವೆಂಕಟೇಶ್ ಮತ್ತಿತರರಿದ್ದರು.

ಮೇ 14 ರಂದು ನಾಮಪತ್ರ ಸಲ್ಲಿಕೆ...

ಇದೇ ತಿಂಗಳ ಮೇ 14ರ ಮಂಗಳವಾರ ನಾಮಪತ್ರ ಸಲ್ಲಿಸಲಿದ್ದೇನೆ. ಅಂದು ಬೆಳಗ್ಗೆ ನಾಮಪತ್ರ ಸಲ್ಲಿಕೆಗೂ ಮುನ್ನ ಸಭೆ ನಡೆಸಿ, ಕಾಲ್ನಡಿಗೆ ಮೂಲಕ ಚುನಾವಣಾ ಅಧಿಕಾರಿಗಳ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಸಲಾಗುವುದು. ಮೈಸೂರು ನಗರದಲ್ಲಿನ 12 ಬೂತ್‌ಗಳಲ್ಲಿ ಮತದಾನ ನಡೆಯಲಿದ್ದು, ಪಕ್ಷದ ಎಲ್ಲರೂ ನನ್ನೊಂದಿಗಿರಬೇಕು. ಎಲ್ಲಾ ಶಿಕ್ಷಕರ ಆಶೀರ್ವಾದಿಂದ ಇಲ್ಲಿಯವರೆಗೆ ಬಂದಿದ್ದೇನೆ. ಮುಂದೆಯೂ ಸೇವೆ ಮಾಡಲು ಅವಕಾಶ ನೀಡುತ್ತಾರೆ ಎಂಬ ನಂಬಿಕೆ ಇದೆ.

– **ಮರಿತಿಬ್ಬೇಗೌಡ**, ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

ಸಂಪೂರ್ಣ ಬೆಂಬಲ ನೀಡುತ್ತೇನೆ...

2012ರ ವಿಧಾನಪರಿಷತ್ ಚುನಾವಣೆಯಲ್ಲಿ ಮರಿತಿಬ್ಬೇಗೌಡರ ವಿರುದ್ಧವೇ ಸೋತಿದ್ದೆ. ಆಗ ಅವರ ಮೇಲೆ ತುಂಬಾ ಸಿಟ್ಟಿತ್ತು. ಆದರೀಗ ಅವರೇ ಕಾಂಗ್ರೆಸ್ ಸೇರಿದ್ದು, ಕೋಪಕ್ಕೆ ಬದಲಾಗಿ ಅವರ ಮೇಲೆ ಪ್ರೀತಿ ಬಂದಿದೆ. ಅವರ ಗೆಲುವಿಗಾಗಿ ಸಂಪೂರ್ಣ ಬೆಂಬಲ ನೀಡಲಾಗುವುದು. ನೂರಕ್ಕೆ ನೂರರಷ್ಟು ಮರಿತಿಬ್ಬೇಗೌಡರು ಗೆಲ್ಲುತ್ತಾರೆ. ಮತದಾರರು ಬಿಜೆಪಿ–ಜೆಡಿಎಸ್ ಆಮಿಷಗಳಿಗೆ ಒಳಗಾದಂತೆ ಗಮನಿಸುವ ಜೊತೆಗೆ ಮೊದಲ ಪ್ರಾಶಸ್ತ್ಯ ಮತವನ್ನು ಕಾಂಗ್ರೆಸ್ ಅಭ್ಯರ್ಥಿಗೆ ನೀಡುವಂತೆ ಮನವಿ ಮಾಡಬೇಕು. ನಾವೆಲ್ಲಾ ಕಾಂಗ್ರೆಸ್ ತಾಯಿ ಮಕ್ಕಳಾಗಿ ಒಟ್ಟಾಗಿ ಕೆಲಸ ಮಾಡಬೇಕು.

– **ಎಂ.ಲಕ್ಷ್ಮಣ**, ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿ

ಹಿರಿಯ ವಿಧಾನಪರಿಷತ್ ಸದಸ್ಯರು...

ನಮ್ಮ ಹಳೇ ಕಾಲದ ಸಂಗಾತಿ ಮರಿತಿಬ್ಬೇಗೌಡರು ವಿಧಾನಪರಿಷತ್‌ನ ಹಿರಿಯ ಸದಸ್ಯರಾಗಿದ್ದು, ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ಅತ್ಯಂತ ಗಂಭೀರ ವಿಚಾರಗಳನ್ನು ಸದನದಲ್ಲಿ ಚರ್ಚಿಸಿದ್ದಾರೆ. ಶಿಕ್ಷಕರ ಸಮಸ್ಯೆಗಳ ಕುರಿತು ಅಪಾರ ಅರಿವು ಅವರಿಗಿದೆ. ಅವರ ಸೇವೆ ಶಿಕ್ಷಕ ಕ್ಷೇತ್ರಕ್ಕೆ ಅಗತ್ಯವಿದ್ದು, ಅವರನ್ನು ಮತ್ತೊಮ್ಮೆ ಗೆಲ್ಲಿಸುವ ನಿಟ್ಟಿನಲ್ಲಿ ಕಮಿಟಿಗಳನ್ನು ರಚನೆ ಮಾಡಿ ಜವಾಬ್ದಾರಿ ಹಂಚಿಕೆ ಮಾಡಿಕೊಂಡು ಕೆಲಸ ಮಾಡಬೇಕು.

– **ಡಾ.ಹೆಚ್.ಸಿ.ಮಹದೇವಪ್ಪ**, ಜಿಲ್ಲಾ ಉಸ್ತುವಾರಿ ಸಚಿವ

ಶ್ರೀನಿವಾಸ ಪ್ರಸಾದ್ ಡಾ.ಅಂಬೇಡ್ಕರ್ ಅವರನ್ನು ಆಧ್ಯಾತ್ಮ ನಾಯಕರನ್ನಾಗಿ ಸ್ವೀಕರಿಸಿದ್ದರು

ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಮತ

ಮೈಸೂರು, ಮೇ 11(ಎಸ್‌ಪಿಎನ್)– ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಅವರ ಜೀವಿತಾವಧಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ತಮ್ಮ ಬದುಕಿನ ಆಧ್ಯಾತ್ಮ ನಾಯಕರನ್ನಾಗಿ ಸ್ವೀಕರಿಸಿ, ಬದುಕು ಕಟ್ಟಿಕೊಂಡಿದ್ದರು ಎಂದು ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ಮೈಸೂರು ಅಶೋಕಪುರಂನಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿ ಸಂಸದ ವಿ. ಶ್ರೀನಿವಾಸ್ ಪ್ರಸಾದ್ ಅವರಿಗೆ ನುಡಿನಮನ ಸಲ್ಲಿಸುತ್ತಾ, ಪ್ರಸಾದ ಅವರು, ಅಂಬೇಡ್ಕರ್ ಮೌಲ್ಯಗಳೊಟ್ಟಿಗೆ ಬದುಕಿದ ಅಪ್ಪಟ ಸ್ವಾಭಿಮಾನಿ ರಾಜಕಾರಣಿಯಾಗಿದ್ದರು ಎಂದರು.

ಮೌಲ್ಯಯುತ ರಾಜಕಾರಣಿ ಎಂಬ ಪದವನ್ನು ಹೇಳುವುದಕ್ಕೇ ಹೆದರುವ ಕಾಲಘಟ್ಟದಲ್ಲಿ ತಮ್ಮ ಐದು ದಶಕಗಳ ಸುದೀರ್ಘ ರಾಜಕಾರಣದಲ್ಲಿ ಮೌಲ್ಯಾಧಾರಿತ ರಾಜಕಾರಣವನ್ನು ಪ್ರಸಾದರು ಮಾಡಿದರು. ಬದುಕಿನಲ್ಲಿ ಮೌಲ್ಯಗಳನ್ನು ಅಳವಡಿಸಿಕೊಂಡು ಜೀವಿಸುವುದು ತುಂಬಾ ಕಷ್ಟ, ಆದರೆ, ಪ್ರಸಾದ್ ಅವರು ತಮ್ಮ ಜೀವನ ಮತ್ತು ರಾಜಕಾರಣದಲ್ಲಿ ಪರಿಶುದ್ಧತೆ ಮತ್ತು ಪ್ರಾಮಾಣಿಕತೆಯನ್ನು ಅಳವಡಿಸಿಕೊಂಡಿದ್ದರಿಂದ ಮೌಲ್ಯಯುತ ರಾಜಕಾರಣ ಮಾಡಲು ಸಾಧ್ಯವಾಯಿತು ಎಂದು ಬಣ್ಣಿಸಿದರು.



ಮೈಸೂರು ಅಶೋಕಪುರಂನಲ್ಲಿರುವ ಡಾ. ಬಿ.ಆರ್.ಅಂಬೇಡ್ಕರ್ ಉದ್ಯಾನವನದಲ್ಲಿ ಸಂಸದ ವಿ. ಶ್ರೀನಿವಾಸ್ ಪ್ರಸಾದ್ ಅವರಿಗೆ ನುಡಿನಮನ ಸಲ್ಲಿಸಲಾಯಿತು.

ಹಂಸ ನೀರನ್ನು ಬೇರ್ಪಡಿಸಿ ಹಾಲನ್ನೇ ಕುಡಿಯುವಂತೆ ಶ್ರೀನಿವಾಸ ಪ್ರಸಾದ್, ಹಾಲು ಮತ್ತು ನೀರಿನಂತೆ ಕೂಡಿರುವ ಸಮಾಜದಲ್ಲಿ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಮಾತ್ರ ಸ್ವೀಕರಿಸುತ್ತಿದ್ದರು. ಅವರಿಗೆ ಪಕ್ಷಕ್ಕಿಂತ ಘನತೆ ಮತ್ತು ಸ್ವಾಭಿಮಾನ ಮುಖ್ಯವಾಗಿತ್ತು. ಅವರ ಘನತೆ, ಗೌರವಕ್ಕೆ ಧಕ್ಕೆಯಾಗುವ ಯಾವುದೇ ಸ್ಥಳ ಅಥವಾ ಪಕ್ಷದಲ್ಲಿ ಕ್ಷಣ ಕೂಡ ಇರಲು ಅವರು ಇಚ್ಛೆಪಡುತ್ತಿರಲಿಲ್ಲ ಎಂದರು.

ಹಿರಿಯ ಸಾಹಿತಿ ಡಾ.ಕೆ.ಲೀಲಾ ಪ್ರಕಾಶ್ ಮಾತನಾಡಿ, ಶ್ರೀನಿವಾಸ್ ಪ್ರಸಾದ್ ಅವರ ಬದುಕು ಮತ್ತು ಸಾಧನೆ ಇಂದಿನ ಯುವಕರಿಗೆ ಮಾದರಿ. ಅಲ್ಲದೆ, ಪ್ರಸಾದ್ ಅವರ ಬದುಕು ಕಠಿಣ ಮಾರ್ಗಗಳಲ್ಲಿ ಸಾಗಿ ಸಂವೇದನೆಯಿಂದ ಸಾಧನೆಯ ಶಿಖರವೇರಿದ ಅಸಾಮಾನ್ಯ ವ್ಯಕ್ತಿ ಎಂದು ಗುಣಗಾನ ಮಾಡಿದರು.

ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್, ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ. ಚಂದ್ರ ಶೇಖರ್, ಅರುಣ್ ಬುದ್ಧ, ನಟ ಸುಪ್ರಿತ್, ವಾಸು, ಚನ್ನಕೇಶವ, ಅಶೋಕಪುರಂ ದೊರೆಸ್ವಾಮಿ ಸೇರಿದಂತೆ ಇತರರಿದ್ದರು.

ಮಹಾರಾಷ್ಟ್ರಕ್ಕೆ ತೆರಳುತ್ತಿದ್ದ ಕ್ರೂಸರ್ ಪಲ್ಟಿ; ಮೂವರು ಮಹಿಳೆಯರು ಸಾವು

ಬೆಳಗಾವಿ, ಮೇ 11– ಮಹಾರಾಷ್ಟ್ರಕ್ಕೆ ತೆರಳುತ್ತಿದ್ದ ಕ್ರೂಸರ್ ವಾಹನ ಪಲ್ಟಿಯಾಗಿ ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಬಳ್ಳಿಗೇರಿ ಗ್ರಾಮದ ಮೂವರು ಮಹಿಳೆಯರು ಸಾವನ್ನಪ್ಪಿದ ದಾರುಣ ಘಟನೆ ಶನಿವಾರ ನಡೆದಿದೆ.

ಕೆಲಸಕ್ಕಾಗಿ ಮಹಾರಾಷ್ಟ್ರಕ್ಕೆ ತೆರಳುತ್ತಿದ್ದಾಗ ಜತ್ತ ಬಳಿ ಕ್ರೂಸರ್ ಟೈರ್ ಬ್ಲಾಸ್ಟ್ ಆಗಿ ಈ ಅಪಘಾತ ಸಂಭವಿಸಿದ್ದು, ಭೀಕರ ಅಪಘಾತದಲ್ಲಿ ಮೂವರು ಮಹಿಳೆಯರು ಮೃತಪಟ್ಟಿದ್ದು, ಹಲವರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮೃತರನ್ನು ಮಹಾದೇವಿ ಚೌಗಲಾ, ಗೀತಾ ದೊಡ್ಡಮನಿ ಹಾಗೂ ಕಸ್ತೂರಿ ಎಂದು ಗುರುತಿಸಲಾಗಿದೆ. ಬಳ್ಳಿಗೇರಿ ಗ್ರಾಮದಲ್ಲಿ ಮೃತ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಮೃತದೇಹಗಳನ್ನು ಮರಣೋತ್ತರ ಪರೀಕ್ಷೆ ಬಳಿಕ ಕುಟುಂಬಕ್ಕೆ ಹಸ್ತಾಂತರ ಮಾಡಿದ್ದಾರೆ.

ಮತದಾನ ಕುರಿತು ಛಾಯಾಚಿತ್ರ ಸ್ಪರ್ಧೆ

ಮೈಸೂರು,ಮೇ 11(ಪಿಎಂ)– ಭಾರತೀಯ ಚುನಾವಣಾ ಆಯೋಗದ ಕರ್ನಾಟಕ ಮುಖ್ಯ ಚುನಾವಣಾಧಿಕಾರಿಗಳ ಕಚೇರಿ ವತಿಯಿಂದ 'ಡೆಮಾಕ್ರಸಿ ಇನ್ ಆಕ್ಷನ್' ಶೀರ್ಷಿಕೆಯಡಿ ಛಾಯಾಚಿತ್ರ ಸ್ಪರ್ಧೆ ಆಯೋಜಿಸಲಾಗಿದೆ.

ಏ.26 ಮತ್ತು ಮೇ 7ರಂದು ನಡೆದ ಸಾರ್ವತ್ರಿಕ ಲೋಕಸಭಾ ಚುನಾವಣೆಯ ಮತದಾನದಲ್ಲಿ ತೆಗೆದಂತಹ ಗರಿಷ್ಠ 5 ಅತ್ಯುತ್ತಮ ಛಾಯಾಚಿತ್ರಗಳನ್ನು ಸೂಕ್ತ ಶೀರ್ಷಿಕೆಯೊಂದಿಗೆ ಕಳುಹಿಸಬೇಕು. ವಾರ್ತಾ ಇಲಾಖೆ ನೀಡಿರುವ ಅಕ್ರೆಡಿಷನ್ ಕಾರ್ಡ್ ಅಥವಾ ಮಾಧ್ಯಮ ಸಂಸ್ಥೆ ನೀಡಿರುವ ಐಡಿ ಕಾರ್ಡ್ ಒಳಗೊಂಡಂತೆ ಮನೆ ವಿಳಾಸ, ಮೊಬೈಲ್ ಸಂಖ್ಯೆ ಸೇರಿದಂತೆ ಮತ್ತಿತರ ವಿವರಗಳನ್ನು ಇ–ಮೇಲ್ (mediacellceokarnataka@gmail.com) ಮಾಡಬೇಕು.

'ಪ್ರಜಾಪ್ರಭುತ್ವದ ಮಹದಾದ ಹಬ್ಬ ಮತದಾನ' ಸ್ಪರ್ಧೆಯ ವಿಷಯವಾಗಿದ್ದು, ಮಾಧ್ಯಮಗಳಲ್ಲಿ ಕಾರ್ಯನಿರ್ವಹಿಸುವ ಪ್ರತಿನಿಧಿಗಳು ಹಾಗೂ ಹವ್ಯಾಸಿ ಛಾಯಾಗ್ರಾಹಕರು ಸ್ಪರ್ಧೆಗೆ ಅರ್ಹರಾಗಿದ್ದಾರೆ. ಪ್ರಥಮ ಬಹುಮಾನ 25 ಸಾವಿರ, ದ್ವಿತೀಯ ಬಹುಮಾನ 15 ಸಾವಿರ, ತೃತೀಯ ಬಹುಮಾನ 10 ಸಾವಿರ, ಸಮಾಧಾನಕರ ಬಹುಮಾನ 6 ಸಾವಿರ ಹಾಗೂ ವಿಶೇಷ ಬಹುಮಾನ 5 ಸಾವಿರ ರೂ. ದೊರೆಯಲಿದೆ. ಛಾಯಾಚಿತ್ರ ಒಳಗೊಂಡಂತೆ ಮಾಹಿತಿ ಸಲ್ಲಿಸಲು ಮೇ 15 ಕಡೆ ದಿನವಾಗಿದ್ದು, ಅಂದು ಸಂಜೆ 5ರೊಳಗೆ ಸಲ್ಲಿಸಬೇಕೆಂದು ವಾರ್ತಾ ಇಲಾಖೆ ಪ್ರಕಟಣೆ ತಿಳಿಸಿದೆ.

ಎಸ್‌ಎಸ್‌ಎಲ್‌ಸಿಯಲ್ಲಿ ಹಿತಶ್ರೀಗೆ ಉನ್ನತ ಶ್ರೇಣಿ



ಮೈಸೂರು,ಮೇ 11(ಪಿಎಂ)– ಮೈಸೂರಿನ ವಿದ್ಯಾವಿಕಾಸ ಪ್ರೌಢಶಾಲೆ ವಿದ್ಯಾರ್ಥಿನಿ ಡಿ.ಟಿ.ಹಿತಶ್ರೀ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಕ್ಕೆ 591 ಅಂಕ ಪಡೆಯುವ ಮೂಲಕ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಹಿತಶ್ರೀ ನಗರದ ಶಾಂತವೇರಿ ಗೋಪಾಲಗೌಡ ಬಡಾವಣೆಯ ತಾಂಡವಮೂರ್ತಿ ಮತ್ತು ಧನಲಕ್ಷ್ಮಿ ದಂಪತಿಯ ಪುತ್ರಿಯಾಗಿದ್ದಾಳೆ.

ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು, ಮೇ 11– ಮೈಸೂರಿನ ಗನ್‌ಹೌಸ್ ಹತ್ತಿರ, ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಜೂ. 2 ರಂದು ಮಧ್ಯಾಹ್ನ 3 ರಿಂದ 6 ರವರೆಗೆ ವೀರಶೈವ ಲಿಂಗಾಯತ ವಧು–ವರರ ಸಮಾವೇಶ ಏರ್ಪಡಿಸಲಾಗಿದೆ. ಮೈಸೂರು ಜಿಲ್ಲೆಯ ಎಲ್ಲಾ ತಾಲೂಕಿನ ಪದವಿ ವಿದ್ಯಾರ್ಹತೆ ಹಾಗೂ ಉತ್ತಮ ಕೆಲಸವುಳ್ಳ ವೀರಶೈವ ಲಿಂಗಾಯತ ವಧು–ವರರು ಇದರ ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ. ಆಸಕ್ತರು ಜೂ. 1 ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ. 9686205346 ಸಂಪರ್ಕಿಸಬಹುದು.



ಜೆಡಿಎಸ್ ಪಕ್ಷದ ವತಿಯಿಂದ ಮೈಸೂರಿನ ಬಸವೇಶ್ವರ ವೃತ್ತದಲ್ಲಿರುವ ಬಸವಣ್ಣ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ. ರಾಮು, ಎಂ.ಜೆ. ಸತ್ಯನಾರಾಯಣ್, ಪ್ರಧಾನ ಕಾರ್ಯದರ್ಶಿಗಳಾದ ಒಂಟಿಕೊಪ್ಪಲ್ ಪಿ.ಸತೀಶ್, ಆರ್.ಮುದ್ದುರಾಜ್, ರಾಜ್ಯ ಕಾರ್ಯದರ್ಶಿ ಕೆ. ಚಂದ್ರೇಗೌಡ, ಸಂಘಟನಾ ಕಾರ್ಯದರ್ಶಿ ಆರ್. ರಾಧಕೃಷ್ಣ ಇನ್ನಿತರರಿದ್ದರು.

ಅಪರಿಚಿತ ಶವ ಪತ್ತೆ





ಮೈಸೂರು, ಮೇ 11– ನಜರ್‌ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ನಗರದ ದೊಡ್ಡಕೆರೆ ಮೈದಾನದಲ್ಲಿ ಅಪರಿಚಿತ ವ್ಯಕ್ತಿ ಶವ ಪತ್ತೆಯಾಗಿದೆ. ಮೇ 8ರಂದು 35ರಿಂದ 40 ವರ್ಷದ ಅಪರಿಚಿತ ವ್ಯಕ್ತಿ ಶವ ಪತ್ತೆಯಾಗಿದ್ದು, ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿರಿಸಲಾಗಿದೆ. ವಾರಸುದಾರರಿದ್ದಲ್ಲಿ ಕಂಟ್ರೋಲ್ ರೂಂ ನಂ. 112, 0821–2418339/308 ಅನ್ನು ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಪ್ರವಾಸಿಗರ ಸೆಳೆಯುತ್ತಿದೆ ಡಾ.ವಿಷ್ಣುವರ್ಧನ್ ಸ್ಮಾರಕ

ಅವ್ಯವಸ್ಥೆ ಆರೋಪ ತಳ್ಳಿ ಹಾಕಿದ ಅಧಿಕಾರಿಗಳು







ಡಾ.ವಿಷ್ಣುವರ್ಧನ್ ಸ್ಮಾರಕದ ಒಳನೋಟ. ಇಲ್ಲಿನ ಕೊಳದಲ್ಲಿ ನಿರ್ಮಿಸಿರುವ ಬೃಹತ್ ಕಡಗದ ಮಾದರಿ ಒಳಗಿನಿಂದ ಡಾ.ವಿಷ್ಣುವರ್ಧನ್ ಪ್ರತಿಮೆ ಕಾಣಿಸುತ್ತಿರುವುದನ್ನೂ ನೋಡಬಹುದು. ಮತ್ತೊಂದು ಚಿತ್ರದಲ್ಲಿ ಸ್ಮಾರಕದ ಆವರಣದಲ್ಲಿ ನಿಲ್ಲಿಸಿರುವ ವಿಷ್ಣುವರ್ಧನ್ ಬಳಸುತ್ತಿದ್ದ ಕಾರನ್ನು ಕಾಣಬಹುದು.

ಮೈಸೂರು,ಮೇ 11(ಪಿಎಂ)– ಹೆಚ್‌ಡಿ ಕೋಟೆ ರಸ್ತೆಯ ಹಾಲಾಳು ಗ್ರಾಮದಲ್ಲಿ (ಉದ್ಬೂರು ಗೇಟ್) ನಿರ್ಮಾಣಗೊಂಡು ಕಳೆದ ವರ್ಷ ಜನವರಿಯಲ್ಲಷ್ಟೇ ಉದ್ಘಾಟನೆಯಾದ 'ಸಾಹಸಸಿಂಹ ಡಾ.ವಿಷ್ಣುವರ್ಧನ್ ಸ್ಮಾರಕ' ಇದೀಗ ಪ್ರವಾಸಿಗರ ಆಕರ್ಷಣೆಯ ಕೇಂದ್ರವಾಗಿದೆ.

ಈ ನಡುವೆ ಸ್ಮಾರಕವು ಅವ್ಯವಸ್ಥೆಯಿಂದ ಕೂಡಿದೆ ಎಂದು ಸಾಮಾಜಿಕ ಜಾಲತಾಣದಲ್ಲಿ ಕೇಳಿ ಬಂದಿದ್ದ ಆರೋಪವನ್ನು ಸ್ಮಾರಕದ ನಿರ್ವಹಣೆಯ ಜವಾಬ್ದಾರಿ ಹೊತ್ತಿರುವ ವಾರ್ತಾ ಇಲಾಖೆ ತಳ್ಳಿಹಾಕಿದೆ ಅಲ್ಲದೆ ಆರೋಪದ ಬಳಿಕ ಇಲಾಖೆ ಅಧಿಕಾರಿಗಳು ಎಚ್ಚೆತ್ತು ಅವ್ಯವಸ್ಥೆಗಳನ್ನು ಸರಿಪಡಿಸಿದ್ದಾರೆ ಎಂಬುದನ್ನೂ ಇಲಾಖೆ ಅಧಿಕಾರಿಗಳು ನಿರಾಕರಿಸಿದ್ದಾರೆ.

ಐದು ಎಕರೆ ಪ್ರದೇಶದಲ್ಲಿ 11 ಕೋಟಿ ರೂ. ವೆಚ್ಚದಲ್ಲಿ ಸ್ಮಾರಕ ನಿರ್ಮಾಣಗೊಂಡಿದೆ. ವಿಷ್ಣುವರ್ಧನ್ ಕೈಯ್ಯಲ್ಲಿ ಧರಿಸುತ್ತಿದ್ದ ಕಡಗದ ಸಂಕೇತವಾಗಿ ವೃತ್ತಾಕಾರದ ವಿನ್ಯಾಸದಲ್ಲಿ ಸ್ಮಾರಕ ನಿರ್ಮಿಸಿರುವುದು ವಿಶೇಷ. ಜೊತೆಗೆ ಸ್ಮಾರಕಕ್ಕೆ ಪ್ರವೇಶ ಪಡೆಯುತ್ತಿದ್ದಂತೆ ಕೊಳ ನಿರ್ಮಿಸಿರುವುದು ಆಕರ್ಷಣೀಯವಾಗಿದೆ. ಬೃಹತ್ ಕಡಗ ನಿರ್ಮಿಸಿರುವುದು ಕೊಳದಲ್ಲಿ ಗೋಚರಿಸಲಿದ್ದು, ಅದರೊಳಗಿನಿಂದಲೇ ವಿಷ್ಣುವರ್ಧನ್ ಪ್ರತಿಮೆ ನೋಡಬಹುದು.

ಅವ್ಯವಸ್ಥೆಯ ಆರೋಪದ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ' ಶನಿವಾರ ಸ್ಥಳಕ್ಕೆ ಭೇಟಿ ನೀಡಿದಾಗ, ಬಹುತೇಕ ಎಲ್ಲವೂ ಸುವ್ಯವಸ್ಥೆಯಿಂದ ಕೂಡಿತ್ತು. ಸ್ಮಾರಕದ ಸಭಾಂಗಣದ ಮೆಟ್ಟಿಲುಗಳ ಪೈಕಿ ಕೆಲವುಗಳಲ್ಲಿ ಸಣ್ಣದಾಗಿ ಕಾಂಕ್ರಿಟ್ ಕಿತ್ತು ಬಂದಿರುವುದು ಬಿಟ್ಟರೇ ಬೇರೆ ಯಾವ ಗಂಭೀರ ಸಮಸ್ಯೆಗಳು ಕಂಡು ಬರಲಿಲ್ಲ. ಈ ನಡುವೆ ಆರೋಪದ ಬಳಿಕ ಅಧಿಕಾರಿಗಳು ಎಚ್ಚೆತ್ತು ಸರಿಪಡಿಸಿದ್ದಾರೆ ಎಂದಿರುವ ಮಾಹಿತಿಯೂ ಬಂದಿತು. ಆದರೆ ಇದನ್ನು ನಿರಾಕರಿಸಿದ ಅಧಿಕಾರಿಗಳು ಎಂದಿನಂತೆ ನಮ್ಮ ಕೆಲಸವನ್ನು ನಿಷ್ಠೆಯಿಂದ ಮಾಡಿದ್ದೇವೆ. ಅದರ ಹೊರತಾಗಿ ಬೇರೇನೂ ಇಲ್ಲ ಎಂದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ವಾರ್ತಾ ಇಲಾಖೆ ಸಹಾಯಕ ನಿರ್ದೇಶಕರೂ ಆದ ಡಾ.ವಿಷ್ಣುವರ್ಧನ್ ಸ್ಮಾರಕದ ಸದಸ್ಯ ಕಾರ್ಯದರ್ಶಿ ವಿಜಯಾನಂದ್, ನಿತ್ಯದ ಕೆಲಸದಂತೆ ಸ್ಮಾರಕದ ಕೊಳವನ್ನು ಸ್ವಚ್ಛಗೊಳಿಸಲಾಗಿದೆ. ಅದರ ಹೊರತಾಗಿ ಬೇರೇನೂ ಇಲ್ಲ. ಮೊನ್ನೆ ಮಳೆ–ಗಾಳಿ ಹಿನ್ನೆಲೆಯಲ್ಲಿ ಕೊಳದಲ್ಲಿ ಧೂಳು ಆವರಿಸಿತ್ತು. ತೆರೆದ ಕೊಳವನ್ನು ಎಷ್ಟೇ ಸ್ವಚ್ಛಗೊಳಿಸಿದರೂ ವಾರದಲ್ಲಿ ಅದು ಪಾಚಿಗೆ ತಿರುಗುತ್ತದೆ. ಆರೇಳು ಮಂದಿ ಸಿಬ್ಬಂದಿ ಈ ದೊಡ್ಡ ಆವರಣವನ್ನು ಅತ್ಯಂತ ಪ್ರಾಮಾಣಿಕ ಹಾಗೂ ವ್ಯವಸ್ಥಿತವಾಗಿ ನಿರ್ವಹಣೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ವಿಷ್ಣು ಕಾರು ಆಕರ್ಷಣೆ: ವಿಷ್ಣುವರ್ಧನ್ ಧರಿಸುತ್ತಿದ್ದ ಕಡಗದ ಸಂಕೇತವಾಗಿಯೇ ಇಲ್ಲಿನ ಕೊಳದಲ್ಲಿ ಬೃಹತ್ ಕಡಗದ ಮಾದರಿಯನ್ನು ನಿರ್ಮಿಸಲಾಗಿದೆ ಅಂತೆಯೇ ವಿಷ್ಣುವರ್ಧನ್ ಅವರ ಪ್ರತಿಮೆಯು ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್ ಅವರ ಕೈಚಳಕದಲ್ಲಿ ಮೂಡಿಬಂದಿದೆ. ಅಮೃತ ಶಿಲೆಯಲ್ಲಿ ಸುಮಾರು 7 ಅಡಿ ಎತ್ತರದಲ್ಲಿ ಈ ಪ್ರತಿಮೆ ಕೆತ್ತನೆ ಮಾಡಲಾಗಿದೆ. ವಿಷ್ಣುವರ್ಧನ್ ಅವರ 600ಕ್ಕೂ ಹೆಚ್ಚು ಅಪರೂಪದ ಫೋಟೋಗಳು ಇಲ್ಲಿವೆ. 230 ಆಸನ ವ್ಯವಸ್ಥೆಯ ಸಿನಿಮಾ ಮಂದಿರ ಇದ್ದು, ಇದೇ ಆವರಣದಲ್ಲಿ ವಿಷ್ಣುವರ್ಧನ್ ಅವರು ಬಳಸುತ್ತಿದ್ದ ಕಾರನ್ನೂ ನೋಡಬಹುದು.

ಸ್ಮಾರಕ ಆವರಣದ ಉದ್ಯಾನವದಲ್ಲಿ ಸಸ್ಯಗಳು ನಳನಳಿಸುತ್ತಿವೆ. ಬೆಳಗ್ಗೆ 9ರಿಂದ ಸಂಜೆ 5ರವರೆಗೆ ಸಾರ್ವಜನಿಕರು ಸ್ಮಾರಕಕ್ಕೆ ಭೇಟಿ ನೀಡಬಹುದು. ಪ್ರವೇಶ ಉಚಿತವಿದೆ. 'ಶನಿವಾರ ಮತ್ತು ಭಾನುವಾರ ದಿನಕ್ಕೆ ಕನಿಷ್ಠ 2 ಸಾವಿರ ಮಂದಿ ಭೇಟಿ ನೀಡುತ್ತಾರೆ. ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿದಿನ ಕನಿಷ್ಠ ಸಾವಿರ ಮಂದಿ ಭೇಟಿ ನೀಡುತ್ತಾರೆ. ದಿನನಿತ್ಯ ಜನಜಂಗುಳಿ ಇದ್ದೇ ಇರುತ್ತದೆ' ಎನ್ನುತ್ತಾರೆ ಸ್ಮಾರಕದ ಸಿಬ್ಬಂದಿ.

ಹಳ್ಳಿಗಟ್ಟು ಊರಿನಲ್ಲಿ ಮೇ 18ರವರೆಗೆ ದೇವ ಕಟ್ಟ್

ಮೇ 18, 19ರಂದು ಬೋಡ್ ನಮ್ಮೆ



ಹಳ್ಳಿಗಟ್ಟು ಊರಿನಲ್ಲಿ ವಿವಿಧ ಕಟ್ಟುಪಾಡುಗಳಿಗೆ ಚಾಲನೆ ನೀಡಲಾಯಿತು.

ಮಡಿಕೇರಿ, ಮೇ 11– ಹಳ್ಳಿಗಟ್ಟು ಬೋಡ್ ನಮ್ಮೆಗೆ ಇಂದು ಮೇ–11ನೇ ಶನಿವಾರ ಮೂಕಳೇರ ಬಲ್ಯಮನೆ ಸಮೀಪದ ಊರಿನ ಅಂಬಲದಲ್ಲಿ ದೇವಕಟ್ಟ್ ಬೀಳುವ ಮೂಲಕ ಹಳ್ಳಿಗಟ್ಟು ಊರಿನಲ್ಲಿ ವಿವಿಧ ಕಟ್ಟುಪಾಡುಗಳಿಗೆ ಚಾಲನೆ ನೀಡಲಾಯಿತು.

ಮೇ 18ರ ಶನಿವಾರದಂದು ದೇವ ಕಟ್ಟನ್ನು ಸಡಿಲಿಸುವ ಮೂಲಕ ಎರಡು ದಿನಗಳ ಹಬ್ಬಕ್ಕೆ ಚಾಲನೆ ದೊರೆಯಲಿದೆ. ಅಲ್ಲಿಯ ತನಕ ಹಳ್ಳಿಗಟ್ಟು ಊರಿನಲ್ಲಿ ಹಸಿರು ಮರಗಿಡಗಳನ್ನು ಕುಡಿಯುವಂತಿಲ್ಲ, ಪ್ರಾಣಿ ವಧೆ ಮಾಡುವಂತಿಲ್ಲ, ಮಾಂಸಕ್ಕಾಗಿ ಬಳಸುವ ಪ್ರಾಣಿಗಳು ಮಾತ್ರವಲ್ಲ, ಯಾವುದೇ ರೀತಿಯ ಹಿಂಸೆ ಮಾಡುವಂತಿಲ್ಲ, ಹಸಿ ಮೊಟ್ಟೆಯನ್ನು ಒಡೆಯುವಂತಿಲ್ಲ, ಪ್ರಾಣಿ ಬೇಟೆ ನಿಷೇಧ, ಗುಂಡಿನ ಶಬ್ದ ಹಾಗೂ ಊರಿನೊಳಗೆ ವಾಲಗದ ಸದ್ದು ನಿಷೇಧ, ರೊಟ್ಟಿ–ದೋಸೆ ಮಾಡುವಂತಿಲ್ಲ, ಸಾಂಬಾರು ಮಾಡುವಾಗ ಅದಕ್ಕೆ ಒಗ್ಗರಣೆ ಹಾಕಬಾರದು ಹೀಗೆ ನಾನಾರೀತಿಯ ಕಟ್ಟುಪಾಡುಗಳನ್ನು ಊರಿನೊಳಗೆ ಪಾಲಿಸಬೇಕು ಎಂಬ ಕಟ್ಟುಪಾಡುಗಳನ್ನು ವಿಧಿಸಲಾಯಿತು. ಈ ಬಗ್ಗೆ ತಿಳಿಯದೆ ತಪ್ಪು ನಡೆದು ಹೋದರೆ ಅದಕ್ಕೆ ಪರಿಹಾರವಾಗಿ ಹಬ್ಬದ ದಿವಸ ತಪ್ಪೊಪ್ಪಿಕೊಂಡು ತಪ್ಪು ಹಣ ಹಾಕಬೇಕು, ತಿಳಿದು ತಿಳಿದು ತಪ್ಪು ಮಾಡುವವರು ದೇವರ ಶಿಕ್ಷೆಗೆ ಒಳಗಾಗುತ್ತಾರೆ ಎಂಬ ನಂಬಿಕೆ. ಶನಿವಾರ ಸಂಜೆ ಊರಿನ ಅಂಬಲದಲ್ಲಿ ಮೂಕಳೇರ ಕಟ್ಟಿ ದೇವಯ್ಯ ದೇವ ಕಟ್ ಹಾಕುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭ ಊರಿನ ದೇವಸ್ಥಾನಗಳ ಆಡಳಿತ ಮಂಡಳಿ ಅಧ್ಯಕ್ಷರಾದ ಚಮ್ಮಟೀರ ಪ್ರವೀಣ್ ಉತ್ತಪ್ಪ, ಗೌರವ ಕಾರ್ಯದರ್ಶಿ ಮೂಕಳೇರ ಬಿ.ರಮೇಶ್, ಸಲಹೆಗಾರರಾದ ಮೂಕಳೇರ ನಂದ ಪೂಣಚ್ಚ ಸೇರಿದಂತೆ ಆಡಳಿತ ಮಂಡಳಿ ಸದಸ್ಯರು ಹಾಗೂ ಊರು ತಕ್ಕರಾದ ಚಮ್ಮಟೀರ ಕುಟುಂಬದ ಸದಸ್ಯರು, ಮುಚ್ಚಿಂಯಯಂಡ, ಮೂಕಳೇರ, ಚೇಂದಿಮಾಡ, ಸಣ್ಣುವಂಡ, ಕೊಳೇರ ಸೇರಿದಂತೆ ವಿವಿಧ ಕುಟುಂಬಗಳ ಸದಸ್ಯರು ಉಪಸ್ಥಿತರಿದ್ದರು.

ಹಬ್ಬವನ್ನು ಮೇ–18 ಹಾಗೂ ಮೇ–19ರಂದು ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಯಿತು, ಇದಕ್ಕೆ ಪೂರಕವಾಗಿ ವಿವಿಧ ಚರ್ಚೆ ನಡೆಯಿತು.

ಮೀನಾ ತಾಯಿಗೆ ಶಾಸಕ ಡಾ. ಮಂತರ್‌ಗೌಡ ಸಾಂತ್ವನ



ಕೊಲೆಯಾದ ಬಾಲಕಿ ತಾಯಿಗೆ ಶಾಸಕ ಡಾ. ಮಂತರ್ ಗೌಡ ಸಾಂತ್ವನ ಹೇಳುತ್ತಿರುವುದು.

ಮೈಸೂರು: ಶುಕ್ರವಾರ ಸಂಜೆ ಸೂರ್ಲಬ್ಬಿಯಲ್ಲಿ ಹತ್ಯೆಗೀಡಾದ ಬಾಲಕಿ ಮೀನಾ ತಾಯಿಯನ್ನು ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಭೇಟಿ ಮಾಡಿದ ಮಡಿಕೇರಿ ಶಾಸಕ ಡಾ. ಮಂತರ್ ಗೌಡ ಸಾಂತ್ವನ ಹೇಳಿದರು.

ಆರೋಪಿ ಪ್ರಕಾಶ್ ಹಲ್ಲೆಯಿಂದ ಗಂಭೀರ ಗಾಯಗೊಂಡು ಮೀನಾ ತಾಯಿ ಜಾನಕಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವ ರಿಗೆ ಸಾಂತ್ವನ ಹೇಳಿದ ಶಾಸಕ ಮಂತರ್ ಗೌಡ, ಆರೋಪಿಗೆ ಕಠಿಣ ಕಾನೂನು ಕ್ರಮ ಆಗಲಿದೆ. ಇಂಥ ಪ್ರಕರಣ ಸಮಾಜದಲ್ಲಿ ಮರು ಕಳಿಸಬಾರದು. ಮೀನಾ ಕುಟುಂಬದ ಶೋಕದಲ್ಲಿ ತಾನೂ ಭಾಗಿ ಆಗಿರುವುದಾಗಿ ಹೇಳಿದರು.

ಜಾನಕಿ ಅವರಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ವೈದರಿಗೆ ಸೂಚನೆ ನೀಡಿದರು.

ಕಾರು ಡಿಕ್ಕಿ: ವ್ಯಕ್ತಿ ಸಾವು



ಮಡಿಕೇರಿ, ಮೇ 11– ಕಾರು ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ವ್ಯಕ್ತಿಯೋರ್ವರು ಚಿಕಿತ್ಸೆ ಫಲಕಾರಿಯಾಗದೆ ಶನಿವಾರ ಮೃತಪಟ್ಟ ಘಟನೆ ನಾಪೋಕ್ಲು ಬಳಿಯ ಕೊಟ್ಟಮುಡಿಯಲ್ಲಿ ನಡೆದಿದೆ. ಹೊದವಾಡ ಕೊಟ್ಟಮುಡಿ ಗ್ರಾಮದ ನಿವಾಸಿ ಎಂ.ಎಂ.ಅಬ್ದುಲ್ಲಾ(51) ಮೃತ ದುರ್ದೈವಿ.

ಅಬ್ದುಲ್ಲಾ ಅವರು ಶುಕ್ರವಾರ ಸಂಜೆ ನಾಪೋಕ್ಲು–ಮಡಿಕೇರಿ ತೆರಳುವ ಮುಖ್ಯ ರಸ್ತೆಯ ಕೊಟ್ಟಮುಡಿ ಗ್ರಾಮದ ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ತನ್ನ ಜೀಪಿನ ಹಿಂಬದಿಯಲ್ಲಿ ಸ್ನೇಹಿತರೊಂದಿಗೆ ಮಾತನಾಡುತ್ತಿದ್ದರು. ಈ ಸಂದರ್ಭ ನಾಪೋಕ್ಲುವಿನಿಂದ ಇದೇ ಮಾರ್ಗವಾಗಿ ಬಂದ ಡಸ್ಟರ್ ಕಾರು ಅಬ್ದುಲ್ಲಾ ಅವರಿಗೆ ಡಿಕ್ಕಿ ಹೊಡೆದಿದೆ.

ಅಪಘಾತದಿಂದ ಅಬ್ದುಲ್ಲಾ ಅವರ ಸೊಂಟದ ಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿದ್ದ ಹಿನ್ನೆಲೆಯಲ್ಲಿ ಅವರನ್ನು ಸುಳ್ಯದ ಕೆವಿಜಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಪ್ರಾಥಮಿಕ ಚಿಕಿತ್ಸೆ ನೀಡಿದ ಬಳಿಕ ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅಬ್ದುಲ್ಲಾ ಶನಿವಾರ ಮುಂಜಾನೆ ಮೃತಪಟ್ಟಿದ್ದಾರೆ.

ಮೃತ ಅಬ್ದುಲ್ಲಾ ಅವರ ಸಂಬಂಧಿ ಪಿ.ಎ. ಅಬ್ದುಲ್ ಅಜೀರುಭ್ ನಾಪೋಕ್ಲು ಠಾಣೆಗೆ ನೀಡಿದ ದೂರಿನ ಹಿನ್ನೆಲೆಯಲ್ಲಿ ಕಾರು ಚಾಲಕ ನಾಪೋಕ್ಲು ಇಂದಿರಾ ನಗರದ ನಿವಾಸಿ ಎಂ.ಎ.ರಾಶಿದ್ ಎಂಬಾತನ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು ನಾಪೋಕ್ಲು ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಮಹಾಕಾಳಿಯಮ್ಮ ನಿಧನ



ನಾಪೋಕ್ಲು, ಮೇ 11– ಇಲ್ಲಿನ ಇಂದಿರಾನಗರದ ನಿವಾಸಿಯಾದ ಮಹಾಕಾಳಿಯಮ್ಮ (85) ಶುಕ್ರವಾರ ರಾತ್ರಿ ನಿಧನರಾದರು.

ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ನಾಪೋಕ್ಲು ಹಿಂದೂ ರುದ್ರಭೂಮಿಯಲ್ಲಿ ನಡೆಯಿತು.


ಅಂಗಡಿ ಬೀಗ ಮುರಿದು 1.25 ಲಕ್ಷ ನಗದು ಕಳವು

ಮಡಿಕೇರಿ, ಮೇ 11– ನಗರದ ಬಸ್ ಡಿಪೋ ಪಕ್ಕದಲ್ಲಿರುವ ಶಾಂತಿನಿಕೇತನ ಬಡಾವಣೆಯ ಅಂಗಡಿ ಒಂದಕ್ಕೆ ನುಗ್ಗಿರುವ ಕಳ್ಳರು 1.25 ಲಕ್ಷರೂ. ನಗದನ್ನು ಕಳ್ಳತನ ಮಾಡಿರುವ ಘಟನೆ ಶುಕ್ರವಾರ ರಾತ್ರಿ ನಡೆದಿದೆ.

ರಾತ್ರಿ ವೇಳೆ ಮಂಗಳದೇವಿ ನಗರ ನಿವಾಸಿ ಲೋಬೋ ಎಂಬವರ ಅಂಗಡಿಯ ಬೀಗ ಮುರಿದು ಒಳ ನುಗ್ಗಿರುವ ಚೋರರು, ಮಕ್ಕಳ ಶಾಲಾ ಶುಲ್ಕ ಕಟ್ಟಲೆಂದು ಸಂಗ್ರಹಿಸಿಟ್ಟಿದ್ದ 1.25 ಲಕ್ಷ ರೂ. ನಗದು ಕಳ್ಳತನ ಮಾಡಿದ್ದಾರೆ.

ಶನಿವಾರ ಬೆಳಗ್ಗೆ ಘಟನೆ ಬೆಳಕಿಗೆ ಬಂದಿದ್ದು, ಮಾಲೀಕರು ಅಂಗಡಿಯನ್ನು ಪರಿಶೀಲಿಸಿದಾಗ ನಗದು ಕಳುವಾಗಿರುವುದು ಕಂಡು ಬಂದಿದೆ. ಮಾತ್ರವಲ್ಲದೇ ಇತರೇ ವಸ್ತುಗಳಿಗಾಗಿ ಹುಡುಕಾಟ ನಡೆಸಿದ್ದು, ಪಡಿತರ ಸಾಮಾಗ್ರಿಗಳನ್ನು ಚೆಲ್ಲಾಪಿಲ್ಲಿ ಮಾಡಲಾಗಿದೆ. ಈ ಕುರಿತು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿದ್ದಾರೆ. ಹಲವಾರು ಮನೆಗಳಿರುವ ಬಡಾವಣೆಯ ಅಂಗಡಿಯಲ್ಲಿಯೇ ಕಳ್ಳತನ ನಡೆದಿದ್ದು, ಪ್ರಕರಣದಿಂದ ಅಲ್ಲಿನ ನಿವಾಸಿಗಳು ಆತಂಕಗೊಂಡಿದ್ದಾರೆ. ಕಳವು ಪ್ರಕರಣದ ಆರೋಪಿಗಳ ಪತ್ತೆಗಾಗಿ ತನಿಖೆಯನ್ನು ಚುರುಕುಗೊಳಿಸಲಾಗಿದೆ.

ಸಾಂಕ್ರಾಮಿಕ ರೋಗ ಬಾರದಂತೆ ಇಂದಿಯಿಂದ ಶ್ರೀ ಮಾರಿಯಮ್ಮ ಬೇವಿನ ಸೊಪ್ಪಿನ ಕರಗೋತ್ಸವ



ಕರಗೋತ್ಸವಕ್ಕೆ ಸಿದ್ಧಗೊಂಡಿರುವ ಶಕ್ತಿದೇವಿಯ ಉತ್ಸವ ಮೂರ್ತಿ.

ಮಡಿಕೇರಿ, ಮೇ 11– ನಗರದ ನಾಲ್ಕು ಶಕ್ತಿ ದೇವತೆಗಳಲ್ಲೊಂದಾದ ಶ್ರೀ ಕಂಚಿ ಕಾಮಾಕ್ಷಿಯಮ್ಮ ದೇವಾಲಯದಲ್ಲಿ ಮೇ 12ರಂದು ಶ್ರೀ ಮಾರಿಯಮ್ಮ ಬೇವಿನ ಸೊಪ್ಪಿನ ಕರಗೋತ್ಸವ ಆರಂಭವಾಗಲಿದೆ. ಅನಾದಿ ಕಾಲದಿಂದಲೂ ಶಕ್ತಿ ದೇವಿಯ ಬೇವಿನ ಸೊಪ್ಪಿನ ಕರಗೋತ್ಸವ ನಡೆಸಿಕೊಂಡು ಬರುತ್ತಿದ್ದು, ಭೀಕರ ಸಾಂಕ್ರಾಮಿಕ ರೋಗಗಳು ನಾಡಿಗೆ ಬರಬಾರದೆಂಬ ನಂಬಿಕೆಯಿಂದ ನಾಡಿನ ಸುಭಿಕ್ಷೆಗಾಗಿ ಈ ಕರಗೋತ್ಸವವನ್ನು ಆಚರಿಸಲಾಗುತ್ತಿದೆ.

ಮೇ 12ರಂದು ಮಧ್ಯಾಹ್ನ 2 ಗಂಟೆಗೆ ದೇವಿಯ ಕರಗಗಳ ಶೃಂಗಾರಕ್ಕೆ ದೇವಾಲಯದಿಂದ ಪಂಪಿನ ಕೆರೆಗೆ ತೆರಳಲ್ಲಿದ್ದು, ಸಂಜೆ 6.30ಕ್ಕೆ ಪಂಪಿನ ಕೆರೆಯಲ್ಲಿ ಕರಗಗಳಿಗೆ ವಿಶೇಷ ಪೂಜೆಯ ನಂತರ ವಾದ್ಯಗೋಷ್ಠಿಯೊಂದಿಗೆ ದೇವಿಯ ಕರಗಗಳ ಮೆರವಣಿಗೆ ಆರಂಭವಾಗಲಿದೆ. ಮೇ 13ರಂದು ದೇವಾಲಯದಲ್ಲಿ ಕರಗಗಳಿಗೆ ವಿಶೇಷ ಪೂಜೆ, ಮೇ 14 ರಂದು ರಾತ್ರಿ 10 ಗಂಟೆಗೆ ಶ್ರೀ ಕಂಚಿ ಕಾಮಾಕ್ಷಿಯಮ್ಮ, ಶ್ರೀ ಮಾರಿಯಮ್ಮ ಸನ್ನಿಧಿಯಲ್ಲಿ ಸಾಂಪ್ರದಾಯಿಕ ದೇವಿಯ ಪೂಜೆಗಳು ಜರುಗಲಿದ್ದು, ನಂತರ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಲಿದೆ.

ಮೇ.15ರಂದು ಸಂಜೆ 7 ಗಂಟೆಗೆ ದೇವಿಯ ಕರಗಗಳಿಗೆ ದೀಪಗಳ ಆರಾಧನೆಯೊಂದಿಗೆ ಸಾಂಪ್ರದಾಯಿಕ ಕರಗಗಳ ವಿಸರ್ಜನೋತ್ಸವ ಜರುಗಲಿದೆ. ದೇವಾಲಯದಲ್ಲಿ 4 ದಿನಗಳ ಕಾಲ ನಡೆಯಲಿರುವ ಶ್ರೀ ಮಾರಿಯಮ್ಮ ಕರಗೋತ್ಸವಕ್ಕೆ ಭಕ್ತರು ಅಧಿಕ ಸಂಖ್ಯೆಯಲ್ಲಿ ಆಗಮಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕಾಗಿ ಆಡಳಿತ ಮಂಡಳಿ ಕೋರಿದೆ.

ಕಾರು ಡಿಕ್ಕಿ: ಆಟೋ ಚಾಲಕನಿಗೆ ಗಾಯ



ಪರಸ್ಪರ ಡಿಕ್ಕಿಯಿಂದ ಜಖಂಗೊಂಡಿರು ಕಾರು ಮತ್ತು ಆಟೋರಿಕ್ಷಾ.

ಮಡಿಕೇರಿ, ಮೇ 11– ಕಾರು ಮತ್ತು ಆಟೋರಿಕ್ಷಾ ನಡುವೆ ಸಂಭವಿಸಿದ ಡಿಕ್ಕಿಯಿಂದ ಆಟೋ ಚಾಲಕ ಗಂಭೀರ ಗಾಯಗೊಂಡಿರುವ ಘಟನೆ ನಾಪೋಕ್ಲು ಮಡಿಕೇರಿ ಮುಖ್ಯ ರಸ್ತೆಯ ಕೊಟ್ಟಮುಡಿ ಜಂಕ್ಷನ್ ನಡೆದಿದೆ.

ನಾಪೋಕ್ಲು ಕಡೆಯಿಂದ ಕೊಟ್ಟಮುಡಿ ಕಡೆಗೆ ತೆರಳುತ್ತಿದ್ದ ಮಾರುತಿ ಕಾರು ಹಾಗೂ ಕಾರುಗುಂದ ಕಡೆಯಿಂದ ವಿರಾಜಪೇಟೆ ಸಮೀಪದ ಬಿಟ್ಟಂಗಾಲಕ್ಕೆ ತೆರಳಲು ಇದೇ ಮಾರ್ಗವಾಗಿ ಬರುತ್ತಿದ್ದ ಆಟೋರಿಕ್ಷಾ ನಡುವೆ ಕೊಟ್ಟಮುಡಿ ಜಂಕ್ಷನ್ ಬಳಿ ಡಿಕ್ಕಿ ಸಂಭವಿಸಿದೆ. ಅಪಘಾತದಲ್ಲಿ ವಿರಾಜಪೇಟೆಯ ಆಟೋ ಚಾಲಕ ಎನ್.ಸಿ. ಕುಟ್ಟಪ್ಪ ಅವವರಿಗೆ ಗಂಭೀರ ಗಾಯಗಳಾಗಿದ್ದು ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಬಳಿಕ ವೈದ್ಯರ ಶಿಫಾರಸಿನಂತೆ ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಅಪಘಾತದ ರಭಸಕ್ಕೆ ಆಟೋರಿಕ್ಷಾ ಸಂಪೂರ್ಣ ಜಖಂಗೊಂಡಿದ್ದು, ಕಾರಿನ ಮುಂಭಾಗಕ್ಕೂ ಹಾನಿ ಉಂಟಾಗಿದೆ. ಆಟೋ ಚಾಲಕ ಎನ್.ಸಿ.ಕುಟ್ಟಪ್ಪ ಅವರು ನಾಪೋಕ್ಲು ಠಾಣೆಗೆ ನೀಡಿದ ದೂರಿನನ್ವಯ ಕಾರು ಚಾಲಕ ಕೊಟ್ಟಮುಡಿಯ ಸಾದಿಕ್ ವಿರುದ್ಧ ನಾಪೋಕ್ಲು ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಚಾಮರಾಜನಗರದಲ್ಲಿ ಗುಡುಗು, ಸಿಡಿಲಿನೊಂದಿಗೆ ಭಾರಿ ಮಳೆ

ಹಲವೆಡೆ ಧರೆಗುರುಳಿದ ಮರಗಳು, ಕೆಲಕಾಲ ವಿದ್ಯುತ್ ಸ್ಥಗಿತ





ಚಾಮರಾಜನಗರ ತಾಲೂಕಿನಲ್ಲಿ ಬಿರುಗಾಳಿ, ಗುಡುಗು, ಸಿಡಿಲುನೊಂದಿಗೆ ಭಾರಿ ಮಳೆಯಾಗಿದ್ದು, ಕೆಲವೆಡೆ ಮರಗಳು ಉರುಳಿ ಬಿದ್ದಿವೆ.

ಚಾಮರಾಜನಗರ, ಮೇ 11– ರಣ ಬಿಸಿಲಿನಿಂದ ಬಸವಳಿದಿದ್ದ ಗಡಿ ಜಿಲ್ಲೆಯ ಜನರು ಶನಿವಾರ ಮಧ್ಯಾಹ್ನ ಸುರಿದ ಭಾರಿ ಮಳೆಯಿಂದ ಹರ್ಷಗೊಂಡಿದ್ದಾರೆ.

ಎರಡು ದಿನ ಸಾಧಾರಣ ಮಳೆಯಾಗಿ, ಬಿಡುವು ನೀಡಿದ್ದ ವರುಣ ಶನಿವಾರ ಮಧ್ಯಾಹ್ನ 12.30ರ ಸುಮಾರಿನಲ್ಲಿ ದಿಢೀರ್ ಎಂಟ್ರಿ ಕೊಟ್ಟು ಇಳೆಗೆ ತಂಪೆರೆದಿದ್ದಾನೆ.

ಚಾಮರಾಜನಗರ ಜಿಲ್ಲಾ ಕೇಂದ್ರ ಹಾಗೂ ತಾಲೂಕಿನಾದ್ಯಂತ ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಬಿರುಗಾಳಿ, ಗುಡುಗು, ಸಿಡಿಲು ಆರ್ಭಟದೊಂದಿಗೆ ಜೋರು ಮಳೆಯಾಗಿದ್ದು, ಜನರು ಸಂತಸಗೊಂಡಿದ್ದಾರೆ.

ಚಾಮರಾಜನಗರ, ಹರದನಹಳ್ಳಿ, ಬ್ಯಾಡಮೂಡ್ಲು, ಹೆಬ್ಬಸೂರು, ಚಂದಕವಾಡಿ, ಮರಿಯಾಲ, ಕೆಲ್ಲಂಬಳ್ಳಿ ಸುತ್ತಮುತ್ತ ಉತ್ತಮ ಮಳೆಯಾಗಿದೆ. ದಿಢೀರನೆ ಬಂದ ಮಳೆಯಿಂದ ರಕ್ಷಣೆ ಪಡೆಯಲು ಜನರು ಅಂಗಡಿ, ಮುಂಗಟ್ಟುಗಳ ಮೊರೆ ಹೋದರು. ಅಲ್ಲದೇ ಮಳೆಯಿಂದ ಕೂಲಿ ಕಾರ್ಮಿಕರ ಕೆಲಸ ಕಾರ್ಯಗಳಿಗೂ ಅಡ್ಡಿಯುಂಟಾಯಿತು.

ಕಳೆದ ಹಲವು ದಿನಗಳಿಂದಲೂ ಮಳೆ ಇಲ್ಲದೇ ಪರಿತಪ್ಪಿಸುತ್ತಿದ್ದ ಜನರ ಮೊಗದಲ್ಲಿ ಮಂದಹಾಸ ಮೂಡಿತು. ವಿವಿಧ ಗ್ರಾಮಗಳಿಂದ ನಗರಕ್ಕೆ ಆಗಮಿಸಿದ್ದ ಜನರು ಮಳೆಯಿಂದಾಗಿ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಯಿತು.

ಬಿರುಗಾಳಿಯ ರಭಸಕ್ಕೆ ನಗರದ ಚಾಮರಾಜೇಶ್ವರ ಉದ್ಯಾನವನದ ಭುವನೇಶ್ವರಿ ವಿಗ್ರಹದ ಬಳಿ ಭಾರಿ ಮರವೊಂದು ಧರೆಗುರುಳಿದೆ. ಅದೃಷ್ಟವಶಾತ್ ಆ ವೇಳೆ, ಉದ್ಯಾನವನದಲ್ಲಿ ಯಾರೂ ಇಲ್ಲದಿದ್ದರಿಂದ ಯಾವುದೇ ಪ್ರಾಣಹಾನಿ ಆಗಿಲ್ಲ.

ನಿರಂತರವಾಗಿ ಗಂಟೆಗೂ ಹೆಚ್ಚುಕಾಲ ಸುರಿದ ಮಳೆಯಿಂದಾಗಿ ನಗರದ ಡಿವಿಯೇಷನ್ ರಸ್ತೆ, ಬಿ. ರಾಚಯ್ಯ ಜೋಡಿ ರಸ್ತೆ, ದೊಡ್ಡಂಗಡಿ ಬೀದಿ, ಭುವನೇಶ್ವರಿ ವೃತ್ತಗಳ ರಸ್ತೆಗಳು ನೀರಿನಿಂದ ಆವೃತ್ತವಾಗಿದ್ದವು.

ಚಾಮರಾಜನಗರ ತಾಲೂಕಿನ ಹೆಬ್ಬಸೂರು, ಬ್ಯಾಡಮೂಡ್ಲು ಗ್ರಾಮಗಳಲ್ಲಿ ಬಿರುಗಾಳಿ ಸಹಿತ ಮಳೆಗೆ ಎಕರೆ ಗಟ್ಟಲೆ ಬಾಳೆ ಫಸಲು ನೆಲಕಚ್ಚಿದೆ. ಬಾಳೆ ಬೆಳೆದ ರೈತರು ಸಂಕಷ್ಟಕ್ಕೆ ಸಿಲುಕಿದ್ದು, ಸೂಕ್ತ ಪರಿಹಾರ ನೀಡುವಂತೆ ಮನವಿ ಮಾಡಿದರು.

ಚಾಮರಾಜನಗರ ತಾಲೂಕು ಮಾತ್ರವಲ್ಲದೇ ಜಿಲ್ಲೆಯ ಗುಂಡ್ಲುಪೇಟೆ ಯಳಂದೂರು, ಹನೂರು, ಕೊಳ್ಳೇಗಾಲ ತಾಲೂಕಿನ ವ್ಯಾಪ್ತಿಯಲ್ಲೂ ಶನಿವಾರ ಮಧ್ಯಾಹ್ನ ಉತ್ತಮ ಮಳೆಯಾಗಿದ್ದು, ತಂಪೆರೆದಿದೆ.

ವೈಜ್ಞಾನಿಕ ಬೆಳೆ ಪರಿಹಾರಕ್ಕೆ ಆಗ್ರಹಿಸಿ ರೈತರಿಂದ ರಸ್ತೆ ತಡೆ



ವೈಜ್ಞಾನಿಕ ಬೆಳೆ ಪರಿಹಾರಕ್ಕೆ ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದಿಂದ ನಗರದಲ್ಲಿ ರಸ್ತೆ ತಡೆ ನಡೆಸಲಾಯಿತು.

ಚಾಮರಾಜನಗರ, ಮೇ 11– ಬಿರುಗಾಳಿ ಮಳೆಗೆ ಬಾಳೆ ಫಸಲು ನಾಶಗೊಂಡು ಸಂಕಷ್ಟದಲ್ಲಿ ಸಿಲುಕಿರುವ ಬಾಳೆ ಬೆಳೆಗಾರರಿಗೆ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸುವಂತೆ ಆಗ್ರಹಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ನಗರದ ಸೋಮವಾರಪೇಟೆ ಬಳಿಯ ರಾಷ್ಟ್ರೀಯ ಹೆದ್ದಾರಿ 209 ರ ಬೈಪಾಸ್ ರಸ್ತೆಯ ಬಳಿ ಜಮಾಯಿಸಿದ ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೆಲ ಕಾಲ ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ರಾಜ್ಯದಲ್ಲಿ ತೀವ್ರ ಬರಗಾಲದಿಂದ ನೊಂದಿರುವ ರೈತರಿಗೆ ವೈಜ್ಞಾನಿಕವಾಗಿ ಬೆಳೆ ನಷ್ಟ ಕೊಡಬೇಕು ಎಂದು ಒತ್ತಾಯಿಸಲಾಗಿದೆ. ಆದರೆ, ಷರತ್ತುಗಳನ್ನು ವಿಧಿಸಿ ರೈತರಿಗೆ ಪರಿಹಾರ ಕೊಡುವಲ್ಲಿ ಸರ್ಕಾರ ಮೋಸ ಮಾಡುತ್ತಿದೆ. ಅಲ್ಲದೇ ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿನ 1.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆದಿರುವ ಬಾಳೆ ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ಕೂಡಲೇ ಬಾಳೆ ಬೆಳೆಗಾರರಿಗೆ ವಿಶೇಷ ಪ್ಯಾಕೇಜ್ ಘೋಷಣೆ ಮಾಡಬೇಕು. ಅಕ್ರಮ–ಸಕ್ರಮ ಯೋಜನೆ ಜಾರಿಗೆ ತರಬೇಕು. ಹಾಲು ಉತ್ಪಾದಕರಿಗೆ 10 ರೂ. ಹೆಚ್ಚುವರಿ ಪ್ರೋತ್ಸಾಹಧನ ಕೊಡಬೇಕು ಎಂದರು.

ಸರ್ಕಾರದ ಕಾನೂನುಗಳಲ್ಲಿ ರೈತಪರವಾದ ನಿಲುವುಗಳನ್ನು ತೆಗೆದುಕೊಳ್ಳಬೇಕು. ಬ್ಯಾಂಕ್‌ಗಳಲ್ಲಿ ರೈತರಿಗೆ ಹೊಸ ಸಾಲ ಕೊಡುತ್ತಿಲ್ಲ. ಸರ್ಕಾರ ಮಧ್ಯ ಪ್ರವೇಶ ಮಾಡಿ ಬೆಳೆ ನಷ್ಟ ಪರಿಹಾರವನ್ನು ವೈಜ್ಞಾನಿಕವಾಗಿ ಕೊಡಬೇಕು. ಇಲ್ಲದಿದ್ದರೆ ಜಿಲ್ಲೆಯಲ್ಲಿ ಉಗ್ರ ಪ್ರತಿಭಟನೆ ಮಾಡುವುದಾಗಿ ಎಚ್ಚರಿಸಿದರು.

ಮುಂದಿನ ದಿನಗಳಲ್ಲಿ ಚುನಾವಣೆ ನೀತಿ ಸಂಹಿತೆಯನ್ನು ಸಡಿಲಿಸಿ ರೈತರ ಕಷ್ಟಗಳಿಗೆ ಅಧಿಕಾರಿಗಳು ಸ್ಪಂದಿಸದಿದ್ದರೆ ಗ್ರಾಮೀಣ ಭಾಗಗಳಲ್ಲಿ ಅಧಿಕಾರಿಗಳು ಹಾಗೂ ಚುನಾಯಿತಿ ಪ್ರತಿನಿಧಿಗಳಿಗೆ ತಕ್ಕಪಾಠ ಕಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಪ್ರತಿಭಟನೆಯಲ್ಲಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಲೆಯೂರು ಹರ್ಷ, ಜಿಲ್ಲಾಧ್ಯಕ್ಷ ಹಾಲಿನ ನಾಗರಾಜ್, ಪದಾಧಿಕಾರಿಗಳಾದ ರವಿ ಹರಳಿಕಟ್ಟೆ, ಕುಮಾರ್ ಉಡಿಗಾಲ, ಮಂಜುನಾಥ್, ಗುರುಮಲ್ಲಪ್ಪ, ಮಹದೇವಸ್ವಾಮಿ, ಚೇರ್ಮನ್ ಗುರು, ಮಾದೇಶ್, ಜಗ, ರಾಜು, ಸೂರ್ಯ, ಬಸವರಾಜಪ್ಪ, ಮಹೇಂದ್ರ, ಸತೀಶ್, ಪ್ರಭುಸ್ವಾಮಿ, ಸಿದ್ದಲಿಂಗಪ್ಪ, ಸಿದ್ದಪ್ಪ, ಮಹೇಶ, ಮುದ್ದಳ್ಳಿ ಚಿಕ್ಕಸ್ವಾಮಿ, ಅಂಬಳೆ ಮಂಜುನಾಥ್, ಕೋಣನೂರು ವಿಶ್ವನಾಥ್, ದೇವನೂರು ನಾಗೇಂದ್ರ, ಗುರುವಿನಪುರ ಚಂದ್ರು, ಪ್ರಸಾದ್, ವಿನಯ್, ಸ್ವಾಮಿ, ಆನಂದ, ಸುರೇಶ್, ಸಂಜು ಇತರರು ಭಾಗವಹಿಸಿದ್ದರು.

ಶ್ರೀ ಶಂಕರಾಚಾರ್ಯರಿಂದ ಸನಾತನ ಧರ್ಮ ವಿಶ್ವವಿಖ್ಯಾತಿ ಪಡೆಯಿತು

ಸಾಂಸ್ಕೃತಿಕ ಚಿಂತಕ ಸುರೇಶ್ ಎನ್.ಋಗ್ವೇದಿ



ಜೈ ಹಿಂದ್ ಪ್ರತಿಷ್ಠಾನ, ಋಗ್ವೇದಿ ಯೂತ್ ಕ್ಲಬ್, ಶಂಕರ ತತ್ವ ಪ್ರಚಾರ ಅಭಿಯಾನ, ಶ್ರೀ ಶಾರದಾ ಭಜನಾ ಮಂಡಳಿ ಹಮ್ಮಿಕೊಂಡಿದ್ದ ಶಂಕರೋತ್ಸವ ಆದಿಗುರು ಶ್ರೀ ಶಂಕರಾಚಾರ್ಯ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಕ್ತರು.

ಚಾಮರಾಜನಗರ, ಮೇ 11– ಆದಿ ಜಗದ್ಗುರು ಶ್ರೀ ಶಂಕರಾಚಾರ್ಯರು ಭಾರತದ ಸನಾತನ ಧರ್ಮವನ್ನು ವಿಶ್ವವಿಖ್ಯಾತಿಗೊಳಿಸಿ ವೇದಗಳು, ಪುರಾಣಗಳು, ಮಹಾಕಾವ್ಯಗಳು, ಉಪನಿಷತ್ತುಗಳು, ಸ್ಮೃತಿ ಪುರಾಣಗಳನ್ನು ಸರ್ವ ಜನರಿಗೂ ಅರ್ಥವಾಗುವ ಹಾಗೆ ವಿವರಿಸಿ ಪರಿಪೂರ್ಣವಾದ ಧರ್ಮವನ್ನು ವಿಶ್ವಕ್ಕೆ ಪ್ರಜ್ವಲಿಸುವಂತೆ ನೀಡಿದ ಮಹಾನ್ ಗುರುಗಳು ಎಂದು ಸಾಂಸ್ಕೃತಿಕ ಚಿಂತಕ, ಶ್ರೀ ಶಂಕರ ಅಭಿಯಾನದ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಅವರು ಜೈ ಹಿಂದ್ ಪ್ರತಿಷ್ಠಾನ, ಋಗ್ವೇದಿ ಯೂತ್ ಕ್ಲಬ್, ಶಂಕರ ತತ್ವ ಪ್ರಚಾರ ಅಭಿಯಾನ, ಶ್ರೀ ಶಾರದಾ ಭಜನಾ ಮಂಡಳಿ ಹಮ್ಮಿಕೊಂಡಿದ್ದ ಶಂಕರೋತ್ಸವ ಆದಿಗುರು ಶ್ರೀ ಶಂಕರಾಚಾರ್ಯ ಜಯಂತಿ ಪ್ರವಚನ ಕಾರ್ಯಕ್ರಮದಲ್ಲಿ ಮಾತನಾಡುತ್ತಾ, 1300 ವರ್ಷಗಳ ಹಿಂದೆ ಭಾರತೀಯ ಸನಾತನ ಧರ್ಮ ಅತ್ಯಂತ ಸಂಕಷ್ಟ ಸ್ಥಿತಿಯಲ್ಲಿದ್ದಾಗ ಜನಿಸಿದ ಶ್ರೀ ಶಂಕರರು ತಮ್ಮ 32 ವರ್ಷಗಳಲ್ಲೇ ಅದ್ವಿತೀಯ ಸಾಧನೆಯನ್ನು ಮಾಡಿ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಮಠಗಳನ್ನು ಸ್ಥಾಪನೆ ಮಾಡಿ ಚತುರ್ವೇದಗಳನ್ನು ಪುನಃ ಸ್ಥಾಪಿಸಿ ಭಾರತೀಯ ಸನಾತನ ಧರ್ಮ ಶಾಶ್ವತವಾಗಿ ಉಳಿಯುವಂತೆ ಹಾಗೂ ಅದರ ಅರ್ಥವನ್ನು ಪ್ರತಿಯೊಬ್ಬರಿಗೂ ವಿವರಿಸಿ, ಪರಿಶುದ್ಧವನ್ನಾಗಿ ಮಾಡಿ ಅದ್ವೈತ ತತ್ವವನ್ನು ತಿಳಿಸಿದ್ದಾರೆ. ಅದ್ವೈತ ತತ್ವವು ವಿಶ್ವ ಮಾನ್ಯವಾಗಿದ್ದು, ಪ್ರತಿ ಕ್ಷೇತ್ರದಲ್ಲೂ ಅದ್ವೈತ ತತ್ವದ ಚಿಂತನೆಗಳು ಅರಳಿವೆ. ಮನೆಮನೆಗಳಲ್ಲೂ ಶಂಕರಾಚಾರ್ಯರ ಅದ್ವೈತ ಚಿಂತನೆಗಳನ್ನು ತಿಳಿಸುವ ಕಾರ್ಯವನ್ನು ಶ್ರೀ ಶಂಕರ ತತ್ವ ಪ್ರಸಾರ ಅಭಿಯಾನ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ಮಕ್ಕಳು ಮಹಿಳೆಯರು ಹಾಗೂ ವಿಶೇಷವಾಗಿ ಯುವಕರು ಅದ್ವೈತ ಚಿಂತನೆಯ ಸಾರವನ್ನು ತಿಳಿದು ಜೀವನವನ್ನು ಪರಿಪೂರ್ಣಗೊಳಿಸಿಕೊಂಡು ಶ್ರೇಷ್ಠರಾಗಬೇಕಾಗಿದೆ. ಶೃಂಗೇರಿ, ಪುರಿ, ದ್ವಾರಕ ಮತ್ತು ಕೇದಾರನಾಥ ಮಠಗಳು ಶಂಕರರ ತತ್ವಗಳನ್ನು ಎಲ್ಲೆಡೆ ನಿರಂತರವಾಗಿ ಶ್ರೇಷ್ಠ ಮನಸ್ಸಿನಿಂದ ಜೀವನ ಸಾರ್ಥಕತೆಗೊಳಿಸಿಕೊಳ್ಳಲು ತತ್ವಗಳ ಸಾರವನ್ನು ಅರಿತು ಅದರಂತೆ ಜೀವನ ಕ್ರಮವನ್ನು ರೂಡಿಸಿಕೊಳ್ಳುವ ಚಿಂತನೆ ಅಮೂಲ್ಯವಾದದು. ರಾಜ್ಯದ ಎಲ್ಲೆಡೆ ಶ್ರೀಶಂಕರ ಯುವಜನ ಅಭಿಯಾನವನ್ನು ಆರಂಭಿಸಿ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಲಾಗುವುದು ಎಂದರು.

ಶಂಕರೋತ್ಸವ ಕಾರ್ಯಕ್ರಮವನ್ನು ಜೈ ಹಿಂದ್ ಪ್ರತಿಷ್ಠಾನದ ಮಾರ್ಗದರ್ಶಕರಾದ ಗುಂಡ್ಲುಪೇಟೆ ರಮೇಶ್ ಉದ್ಘಾಟಿಸಿ, ಆಧ್ಯಾತ್ಮ ಚಿಂತನೆಗಳ ಮೂಲಕ ಮಾನವ ತನ್ನ ಎಲ್ಲಾ ಸಂಕಷ್ಟಗಳನ್ನು ದೂರ ಮಾಡಿಕೊಳ್ಳಲು ಇರುವ ಮಾರ್ಗ ಭಗವಂತನ ಸ್ಮರಣೆ. ಶ್ರೀ ಶಂಕರರು ಅದ್ವೈತ ಚಿಂತನೆಯ ಮೂಲಕ ಎಲ್ಲಾ ನೀತಿ ಮಾರ್ಗಗಳನ್ನು ತಿಳಿಸಿದ್ದಾರೆ. ಶಂಕರೋತ್ಸವದ ಮೂಲಕ ಜನರಿಗೆ ತಿಳಿಸುವ ಕಾರ್ಯ ಮಾಡುತ್ತಿರುವುದು ಸಂತೋಷ ಎಂದರು.

ನಿವೃತ್ತ ಮುಖ್ಯ ಶಿಕ್ಷಕಿ ಕೆ.ವಿ. ಶ್ರೀಮತಿ ಹಾಗೂ ಕೆ.ವಿ. ಅನಿತಾ ಅವರು ಶ್ರೀ ಶಂಕರರ ಗೀತ ಗಾಯನ ನಡೆಸಿದರು.

ಶ್ರೀ ಶಂಕರ ಅಷ್ಟೋತ್ತರ ಪಾರಾಯಣ ಭಜನೆ ಪೂಜೆ ಹಾಗೂ ಪ್ರವಚನ ಕಾರ್ಯಕ್ರಮ ಜರಗಿತು.

ಶ್ರಾವ್ಯ ಋಗ್ವೇದಿ ಹಾಗೂ ಧನುಷ್ ರಾವ್ ಸ್ವರಚಿತ ಶ್ರೀ ಶಂಕರಾಚಾರ್ಯರ ಭಾವಚಿತ್ರ ಗಮನ ಸೆಳೆಯಿತು.

ಕಾರ್ಯಕ್ರಮದಲ್ಲಿ ಶಾರದಾ ಭಜನಾ ಮಂಡಳಿಯ ಆಶಾ, ಕುಸುಮ ಋಗ್ವೇದಿ, ಋಗ್ವೇದಿ ಯೂತ್ ಕ್ಲಬ್ ಕಾರ್ತಿಕ್ ಸುಪ್ರಿಯಾ, ಸುಹಾಸ್, ಶ್ರಾವ್ಯ, ದಿಲೀಪ್, ಧನುಷ್ ರಾವ್ ಇದ್ದರು.

ಎಚ್.ಎಂ. ದಕ್ಷರಿ ನಿಧನ



ಚಾಮರಾಜನಗರ, ಮೇ 11– ತಾಲೂಕಿನ ವೆಂಕಟಯ್ಯನ ಛತ್ರ ಹೊಸೂರಿನ ವಿದ್ಯುತ್ ಗುತ್ತಿಗೆದಾರರು ಹಾಗೂ ಪಾರ್ವತಿ ಎಲೆಕ್ಟ್ರಿಕಲ್ಸ್ ಮಾಲೀಕರಾದ ಎಚ್.ಎಂ. ದಕ್ಷರಿ(75) ಶನಿವಾರ ಬೆಳಗಿನ ಜಾವ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೃತರು ಪತ್ನಿ ಯೋಗೇಶ್ವರಿ, ಪುತ್ರ ಉದ್ಯಮಿ ಎಚ್.ಡಿ.ಪ್ರತಾಪ್, ಸೊಸೆ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷೆ ನಾಗಶ್ರೀ ಪ್ರತಾಪ್, ಪುತ್ರಿ ಕುಮಾರಿ, ಅಳಿಯ ಆರ್‌ಟಿಓ ಅಧಿಕಾರಿ ಯೋಗೇಶ್ ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಇಂದು ಸಂಜೆ ಸ್ವಗ್ರಾಮ ವಿ.ಸಿ. ಹೊಸೂರಿನ ಅವರ ತೋಟದಲ್ಲಿ ನಡೆಯಿತು ಎಂದು ಕುಟುಂಬಸ್ಥರು ತಿಳಿಸಿದರು.

ಒಂದನೇ ಪುಟದಿಂದ

ಸಂಭ್ರಮ ಇಲ್ಲವೇ ಸರಳ ಆಚರಣೆ

ತನ್ನಿಂದಲೇ ಎಂದು ಬಿಂಬಿಸಿಕೊಳ್ಳಲು ಮುಖ್ಯಮಂತ್ರಿ ಅವರು ಈ ಮಾಹಿತಿ ಹೊರಗಿಟ್ಟಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿವೆ. ತಮ್ಮ ಅನಿಸಿಕೆಯಂತೆ ಎಲ್ಲವೂ ಸರಿ ಹೋದರೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಗುಲ್ಬರ್ಗದಲ್ಲಿ ನಾಲ್ಕು ಬೃಹತ್ ಸಮಾವೇಶಗಳನ್ನು ನಡೆಸುವ ಉದ್ದೇಶ ಇದೆ. ತಾವು ಮೊದಲ ವರ್ಷದಲ್ಲಿ ಮಾಡಿರುವ ಸಾಧನೆಗಳ ಕಿರುಹೊತ್ತಿಗೆ ಜೊತೆಗೆ ಅವುಗಳ ಅನುಷ್ಠಾನ, ಎಲ್ಲದಕ್ಕೂ ಮಿಗಿಲಾಗಿ ಗ್ಯಾರಂಟಿ ಮೂಲಕ ಬಡವರನ್ನು ಮೇಲ್ದರ್ಜೆಗೆ ಏರಿಸಿರುವ ಅಂಕಿ–ಅಂಶಗಳನ್ನು ಬಹಿರಂಗ ಪಡಿಸುವುದು ಸರ್ಕಾರದ ಉದ್ದೇಶವಾಗಿದೆ. ವಿಭಾಗೀಯ ಮಟ್ಟದ ಸಮಾವೇಶದ ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವರು ಆಯಾ ಜಿಲ್ಲೆಗಳಲ್ಲಿ ಸಾಧನಾ–ಸಂಭ್ರಮಗಳನ್ನು ಜಿಲ್ಲಾಡಳಿತದ ವತಿಯಿಂದಲೇ ಆಚರಿಸಲು ಯೋಜಿಸಲಾಗಿದೆ.

ಹೋರಾಟದ ಬದುಕು ಯುವಕರಿಗೆ ಆದರ್ಶ

ಸ್ವಾಭಿಮಾನ ಇಲ್ಲವೆಂದರೆ ಗುಲಾಮಗಿರಿ ಅನುಭವಿಸಿದಂತಾಗುತ್ತದೆ. ಸ್ವಾಭಿಮಾನಿಯಾಗಿದ್ದ ಶ್ರೀನಿವಾಸ ಪ್ರಸಾದ್ ರಾಜಕೀಯವಾಗಿ ಕೆಲವು ತೀರ್ಮಾನ ಕೈಗೊಳ್ಳುತ್ತಿದ್ದರು ಎಂದು ತಿಳಿಸಿದರು.

ನಾನು ಹಾಗೂ ಶ್ರೀನಿವಾಸ ಪ್ರಸಾದ್ ಹೆಚ್ಚು ಕಡಿಮೆ ಒಂದೇ ವಯಸ್ಸಿನವರು. ಆದರೆ ನನಗಿಂತ ಮೊದಲೆ ರಾಜಕೀಯಕ್ಕೆ ಬಂದವರು. ಮೊದಲು ನಾವಿಬ್ಬರೂ ಜನತಾ ಪಾರ್ಟಿಯಲ್ಲಿದ್ದೆವು. ಆಗ ಒಳ್ಳೆಯ ಒಡನಾಟವಿತ್ತು ಎಂದು ಶ್ರೀನಿವಾಸ್ ಪ್ರಸಾದ್ ಜೊತೆಗಿನ ರಾಜಕೀಯ ಸ್ನೇಹವನ್ನು ಮೆಲುಕು ಹಾಕಿದ ಸಿದ್ದರಾಮಯ್ಯ, 1977 ರಲ್ಲಿ ಲೋಕಸಭೆ ಹಾಗೂ 1978 ರಲ್ಲಿ ವಿಧಾನಸಭೆಗೆ ಸ್ಪರ್ಧೆ ಮಾಡಿ ಪರಾಜಿತಗೊಂಡಿದ್ದರು. ಮೊದಲಿನಿಂದಲೂ ಕಾಂಗ್ರೆಸ್‌ಗೆ ವಿರುದ್ಧವಾಗಿದ್ದರು. ಆದರೆ 1980ರಲ್ಲಿ ಲೋಕಸಭಾ ಚುನಾವಣೆ ವೇಳೆ ಕಾಂಗ್ರೆಸ್ ಸೇರಿದ್ದರು ಎಂದು ವಿವರಿಸಿದರು.

ಶ್ರೀನಿವಾಸ ಪ್ರಸಾದ್ ಬೇರೆ ಬೇರೆ ಪಕ್ಷದಲ್ಲಿದ್ದರೂ ಎಂದೂ ಅಂಬೇಡ್ಕರ್ ವಿಚಾರಧಾರೆಗಳಿಂದ ದೂರವಾಗಲಿಲ್ಲ. ಜೀವನದುದ್ದಕ್ಕೂ ಅಂಬೇಡ್ಕರ್ ವಿಚಾರಗಳನ್ನು ಅನುಸರಿಸುತ್ತಾ ಬಂದರು. ಸಂವಿಧಾನ ಉಳಿಯಬೇಕು, ಅದನ್ನು ಸಂರಕ್ಷಣೆ ಮಾಡಬೇಕು ಎಂದು ಹೇಳುತ್ತಿದ್ದರು ಎಂದರು.

ನಾನು ಹಾಗೂ ಶ್ರೀನಿವಾಸ ಪ್ರಸಾದ್ ಬೇರೆ ಬೇರೆ ಪಕ್ಷದಲ್ಲಿದ್ದರೂ ನಮ್ಮಿಬ್ಬರ ಸ್ನೇಹ ಸಂಬಂಧ, ಒಡನಾಟ ಚೆನ್ನಾಗಿತ್ತು. ರಾಜಕೀಯ ಭಿನ್ನಾಭಿಪ್ರಾಯ ಏನೇ ಇದ್ದರೂ, ಅದಾವುದೂ ಸ್ನೇಹಕ್ಕೆ ಎಂದೂ ಧಕ್ಕೆಯಾಗಿರಲಿಲ್ಲ ಎಂದು ಹೇಳಿದರು.

ಸಂವಿಧಾನದ ಬಗ್ಗೆ ಗೌರವ ಭಾವನೆ ಹೊಂದಿದ್ದರು. ಅವಕಾಶ ವಂಚಿತರಿಗೆ ಸಮಾನ ಅವಕಾಶ ದೊರಕಿಸುವ ನಿಟ್ಟಿನಲ್ಲಿ ಹೋರಾಟ ಮಾಡುತ್ತಿದ್ದರು. ತಮ್ಮ ಜೀವನದ ಉದ್ದಕ್ಕೂ ಇದೇ ಹಾದಿಯಲ್ಲಿ ಸಾಗಿದ್ದರು ಎಂದು ಹೇಳಿದರು.

ಬುದ್ಧ, ಬಸವ, ಅಂಬೇಡ್ಕರ್, ಗಾಂಧೀಜಿ ವಿಚಾರಧಾರೆಗಳನ್ನು ಯಾರು ಅನುಸರಿಸುತ್ತಾರೋ ಅವರು ಸ್ವಾಭಿಮಾನಿಗಳಾಗಿರುತ್ತಾರೆ. ಜೊತೆಗೆ ಮನುಷ್ಯತ್ವದ ಗುಣ ಹೊಂದಿರುತ್ತಾರೆ. ಇದಕ್ಕೆ ಶ್ರೀನಿವಾಸ ಪ್ರಸಾದ್ ಅವರೇ ಸ್ಪಷ್ಟ ಉದಾಹರಣೆ ಎಂದರು. ಇತ್ತೀಚಿಗೆ ನಾನು ಅವರನ್ನು ಭೇಟಿ ಮಾಡಿದ್ದೆ. ಆದರೆ ಅದು ರಾಜಕೀಯ ಭೇಟಿ ಆಗಿರಲಿಲ್ಲ. ಕೆಲವು ವರ್ಷಗಳ ನಂತರ ಭೇಟಿ ಮಾಡಿದ್ದರೂ ಆತ್ಮೀಯವಾಗಿ ಬರಮಾಡಿಕೊಂಡರು. ಸುಮಾರು ಅರ್ಧ ಗಂಟೆಗಳ ಕಾಲ ಶ್ರೀನಿವಾಸ ಪ್ರಸಾದ್ ಜೊತೆ ಮಾತನಾಡಿದೆ. ಆ ವೇಳೆ ರಾಜಕೀಯ ವಿಚಾರದ ಬಗ್ಗೆ ಚರ್ಚೆ ಆಗಲಿಲ್ಲ. ಆದರೂ ಸಾಧ್ಯವಾದರೆ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವಂತೆ ನಿಮ್ಮ ಬೆಂಬಲಿಗರಿಗೆ ಕರೆ ನೀಡಿ ಎಂದು ಮನವಿ ಮಾಡಿದ್ದೆ ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಎಜುಕೇಷನಲ್ ಅಂಡ್ ಕಲ್ಚರಲ್ ಟ್ರಸ್ಟ್, ಸಮಾನತೆ– ಸ್ವಾಭಿಮಾನ– ಸ್ವಾವಲಂಬನೆ ಪ್ರತಿಷ್ಠಾನ ಹಾಗೂ ಸಮಾನತೆ ಪ್ರಕಾಶನ ಸಂಯುಕ್ತವಾಗಿ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಸಿದ್ದರಾಮಯ್ಯ ಅವರು ಶ್ರೀನಿವಾಸ ಪ್ರಸಾದ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಇದಕ್ಕೂ ಮೊದಲು ಸಿದ್ದರಾಮಯ್ಯ, ಯಡಿಯೂರಪ್ಪ ಸೇರಿದಂತೆ ಇತರರು ಶ್ರೀನಿವಾಸ ಪ್ರಸಾದ್ ಅವರ ಸಮಾಧಿ ಸ್ಥಳದಲ್ಲಿ ಪುಷ್ಪಗುಚ್ಛವಿಟ್ಟು ಶ್ರದ್ಧಾಂಜಲಿ ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಬೆಂಗಳೂರಿನ ಮಹಾಬೋಧಿ ಸೊಸೈಟಿಯ ಕಲ್ಯಾಣ ಸಿರಿ ಬಂತೇಜಿ, ಶಾಸಕರಾದ ಟಿ.ಎಸ್.ಶ್ರೀವತ್ಸ, ಎ.ಆರ್.ಕೃಷ್ಣಮೂರ್ತಿ, ಕೆ.ಹರೀಶ್‌ಗೌಡ, ನರೇಂದ್ರ ಸ್ವಾಮಿ, ಡಾ.ತಿಮ್ಮಯ್ಯ, ದರ್ಶನ್ ಧ್ರುವನಾರಾಯಣ್, ಮಾಜಿ ಶಾಸಕ ಡಾ.ಯತೀಂದ್ರ, ಶ್ರೀನಿವಾಸ ಪ್ರಸಾದ್ ಪತ್ನಿ ಭಾಗ್ಯಲಕ್ಷ್ಮಿ, ಪುತ್ರಿಯರಾದ ಪ್ರತಿಮಾ ಪ್ರಸಾದ್, ಪೂರ್ಣಿಮಾ ಪ್ರಸಾದ್, ಪೂನಂ ಪ್ರಸಾದ್, ಅಳಿಯಂದಿರಾದ ದೇವರಾಜು, ಬಿ.ಹರ್ಷವರ್ಧನ್, ಡಾ.ಮೋಹನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪತಿ ನೆನೆದು ಕಣ್ಣೀರಿಟ್ಟ ಶ್ರೀಮತಿ ಭಾಗ್ಯಲಕ್ಷ್ಮಿ

ಶ್ರೀನಿವಾಸ ಪ್ರಸಾದ್ ಅವರ ದಿಟ್ಟ ರಾಜಕೀಯ ಜೀವನದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಇತರೆ ಗಣ್ಯರು ಪ್ರಶಂಸೆಯ ಮಾತುಗಳನ್ನಾಡುವಾಗ ಶ್ರೀನಿವಾಸ ಪ್ರಸಾದ್ ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ ಬಿಕ್ಕಿ ಬಿಕ್ಕಿ ಅತ್ತರು. ಈ ವೇಳೆ ಅವರ ಪಕ್ಕದಲ್ಲೆ ಕುಳಿತ್ತಿದ್ದ ಸಂಸದ ಪ್ರತಾಪ್ ಸಿಂಹ ಭಾಗ್ಯಲಕ್ಷ್ಮಿ ಅವರನ್ನು ಸಮಾಧಾನಪಡಿಸಿದರು. ಅದರಲ್ಲೂ ಮರೆಯಾದ ಮಾಣಿಕ್ಯವೇ ಸ್ವಾಭಿಮಾನದ ಸಂಕೇತವೇ ಹಾಡು ಕೇಳಿ ಭಾಗ್ಯಲಕ್ಷ್ಮಿ ಅವರು ತೀವ್ರ ದುಃಖಿತರಾದರು. ಕಾರ್ಯಕ್ರಮದ ಆರಂಭದಿಂದ ಕೊನೆ ತನಕ ಭಾಗ್ಯಲಕ್ಷ್ಮಿ ಅವರು ಭಾವುಕರಾಗಿಯೇ ಇದ್ದರು.

ಸಿದ್ದರಾಮಯ್ಯ, ಯಡಿಯೂರಪ್ಪ ಮುಖಾಮುಖಿ



ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಇಂದು ಒಂದೇ ವೇದಿಕೆಯಲ್ಲಿ ಮುಖಾಮುಖಿಯಾದರು.

ಇತ್ತೀಚೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ಹಾಗೂ ಯಡಿಯೂರಪ್ಪ ಆರೋಪ–ಪ್ರತ್ಯಾರೋಪ, ಏಟು– ತಿರುಗೇಟು ಜೋರಾಗಿತ್ತು. ಆದರೆ ಇಂದು ಇಬ್ಬರು ನಾಯಕರು ಒಂದೇ ವೇದಿಕೆಯಲ್ಲಿ ಮುಖಾಮುಖಿಯಾದರು. ಅದರಲ್ಲೂ ಅಕ್ಕ ಪಕ್ಕದಲ್ಲೇ ಕುಳಿತಿದ್ದರು.

ಆರಂಭದಲ್ಲಿ ಸಿದ್ದರಾಮಯ್ಯ ಹಾಗೂ ಯಡಿಯೂರಪ್ಪ ಕೇವಲ ಕೆಲವೇ ಕೆಲವು ಕ್ಷಣ ಮಾತನಾಡಿದರು.

ತರುವಾಯ ಕಾರ್ಯಕ್ರಮದ ಆರಂಭದಿಂದ ಕೊನೆ ತನಕ ಒಬ್ಬರಿಗೊಬ್ಬರು ಮುಖ ಕೂಡ ನೋಡದೆ ಮೌನ ವಹಿಸಿದ್ದರು. ರಾಜಕೀಯವಾಗಿ ಸಿದ್ದರಾಮಯ್ಯ ಹಾಗೂ ಸಂಸದ ಪ್ರತಾಪ್ ಸಿಂಹ ಹಾವು ಮುಂಗೂಸಿಯಂತಿದ್ದು, ಆದರೆ ಇಂದು ಶ್ರೀನಿವಾಸ ಪ್ರಸಾದ್‌ರ ಶ್ರದ್ಧಾಂಜಲಿ ಸಭೆಯಲ್ಲಿ ಪ್ರತಾಪ್ ಸಿಂಹ ಅವರು ಸಿದ್ದರಾಮಯ್ಯ ಅವರ ಕಾಲಿಗೆ ನಮಸ್ಕರಿಸಿದರು.

ಪ್ರಧಾನಿ ಮೋದಿಗೆ ಸೋಲಿನ ಭೀತಿ ಕಾಡುತ್ತಿದೆ

●ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ ●ಹಾಗಾಗಿಯೇ ಹೋದಲ್ಲೆಲ್ಲಾ ಭಾವನಾತ್ಮಕ ವಿಚಾರ ಪ್ರಸ್ತಾಪಿಸುತ್ತಾರೆ!



ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದ ಬಳಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರೊಂದಿಗೆ ಮಾತನಾಡಿದರು.

ಮೈಸೂರು, ಮೇ 11(ಎಂಟಿವೈ)– ದೇಶದಲ್ಲಿ ಕಳೆದ 10 ವರ್ಷದಿಂದ ಆಡಳಿತ ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಜನಪರ, ಅದರಲ್ಲೂ ಬಡವರ ಪರ ಯಾವುದೇ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸದೇ ಇರುವುದರಿಂದ ಜನಾಕ್ರೋಶಕ್ಕೆ ಗುರಿಯಾಗಿ, ಈಗ ಜನರನ್ನು ದಿಕ್ಕು ತಪ್ಪಿಸಲು ಭಾವನಾತ್ಮಕ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದ್ದಾರೆ.

ಮೈಸೂರಿನ ರಾಮಕೃಷ್ಣನಗರದ ತಮ್ಮ ನಿವಾಸದ ಬಳಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೇಶದಾದ್ಯಂತ ವಿರೋಧ ವ್ಯಕ್ತವಾಗುತ್ತಿರುವುದರಿಂದ ಪ್ರಧಾನಿ ನರೇಂದ್ರ ಮೋದಿ ಹತಾಶೆಗೊಂಡಿದ್ದಾರೆ. ಆ ಕಾರಣದಿಂದಲೇ ವಿರೋಧ ಪಕ್ಷಗಳು ನನ್ನ ಸಮಾಧಿ ಮಾಡಲು ಪ್ರಯತ್ನಿಸುತ್ತಿವೆ ಎಂದು ಮೋದಿ ಹೇಳಿದ್ದಾರೆ. ಈ ಹೇಳಿಕೆಯನ್ನು ಗಮನಿಸಿದರೆ, ಪ್ರಧಾನಿ ಮೋದಿ ಅವರಿಗೆ ಸೋಲಿನ ಭೀತಿ ಕಾಡುತ್ತಿರುವಂತೆ ಕಾಣುತ್ತಿದೆ. ರಾಜಕೀಯ ಕ್ಷೇತ್ರದಲ್ಲಿ ಯಾರೂ, ಯಾರನ್ನೂ ಸಮಾಧಿ ಮಾಡುವುದಿಲ್ಲ. ಚುನಾವಣೆ ಸಂದರ್ಭದಲ್ಲಿ ವಿರೋಧ ಪಕ್ಷಗಳ ಅಭ್ಯರ್ಥಿಯನ್ನು ಸೋಲಿಸುವುದಕ್ಕೆ ಎಲ್ಲಾ ಆಡಳಿತ ಪಕ್ಷಗಳು ಪ್ರಯತ್ನಿಸುತ್ತವೆ. ಆದರೆ, ದೇಶದ ಅಭಿವೃದ್ಧಿಗಾಗಿ ಪ್ರಧಾನಿ ಮೋದಿ ಅವರನ್ನು ಸೋಲಿಸಲು ವಿರೋಧ ಪಕ್ಷಗಳು ಮುಂದಾಗಿವೆ. ಕಳೆದ 10 ವರ್ಷದಿಂದ ದೇಶದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿಲ್ಲ. ದೇಶದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಇದನ್ನು ಸುಧಾರಿಸಬೇಕಾದರೆ ಮೋದಿ ಸರ್ಕಾರವನ್ನು ಕಿತ್ತೊಗೆಯಬೇಕಾಗಿದೆ. ಅದಕ್ಕಾಗಿ ವಿರೋಧ ಪಕ್ಷಗಳು ಪ್ರಯತ್ನಿಸುತ್ತಿವೆ. ಇದನ್ನೇ ಸಮಾಧಿ ಮಾಡಲು ಮುಂದಾಗಿದ್ದಾರೆ ಎನ್ನುವುದು ಸರಿಯಲ್ಲ. ಭಾವನಾತ್ಮಕವಾಗಿ ಮಾತನಾಡುವ ಮೂಲಕ ದೇಶದ ಜನರನ್ನು ಓಲೈಸಿಕೊಳ್ಳಬಹುದೆಂಬ ಲೆಕ್ಕಾಚಾರದಲ್ಲಿ ಅವರು ಹೇಳಿಕೆ ನೀಡಿದ್ದಾರೆ ಎಂದು ಕಿಡಿಕಾರಿದರು.

ಪ್ರಧಾನಿ ಮೋದಿ ಮಹಾನ್ ಸುಳ್ಳುಗಾರ ಎಂದು ದೇಶದ ಜನರಿಗೆ ಮನವರಿಕೆಯಾಗಿದೆ. ಎರಡು ಅವಧಿಗೆ ಪ್ರಧಾನಿಯಾಗಿ ಅಧಿಕಾರ ನಡೆಸಿರುವ ಮೋದಿ, ಈ ಹಿಂದೆ ನೀಡಿದ್ದ ಭರವಸೆಗಳಲ್ಲಿ ಒಂದನ್ನೂ ಈಡೇರಿಸಿಲ್ಲ. ಇದರಿಂದ ದೇಶದ ಜನರ ಮುಂದೆ ಮೋದಿ ಬಣ್ಣ ಬಯಲಾಗಿದೆ. ಲೋಕಸಭಾ ಚುನಾವಣೆಯಲ್ಲಾಗುವ ಹಿನ್ನಡೆಯಿಂದ ಪಾರಾಗಲು ಭಾವನಾತ್ಮಕ ಅಸ್ತ್ರ ಪ್ರಯೋಗಿಸುತ್ತಿದ್ದಾರೆ ಎಂದರು.

ಮೇಲಕ್ಕೇರಿದವರು ಕೆಳಗೆ ಇಳಿಯಲೇಬೇಕು: ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಸೋಲುತ್ತೇವೆ ಎಂದು ಪ್ರಧಾನಿ ಮೋದಿ ಅವರಿಗೆ ಗೊತ್ತಾಗಿದೆ. ಆದ್ದರಿಂದ ಅವರು ಹತಾಶರಾಗಿದ್ದಾರೆ. ಅವರು ಸುಳ್ಳು ಹೇಳುವುದು, ಭಾವನಾತ್ಮಕವಾಗಿ ಶೋಷಣೆ ಮಾಡುವುದು ಜನರಿಗೆ ಗೊತ್ತಾಗಿದೆ. ಜನರಿಗೆ ಗೊತ್ತಾದ ಮೇಲೂ ಮತ್ತೆ ಅದೇ ತಪ್ಪನ್ನು ಮಾಡುವುದಿಲ್ಲ. ಯಾರೇ ಆಗಲೀ ಮೇಲಕ್ಕೇರಿದವರು ಕೆಳಕ್ಕೆ ಇಳಿಯಲೇಬೇಕು. ಆ ಪರಿಸ್ಥಿತಿ ಮೋದಿ ಅವರಿಗೆ ಬಂದಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಿಎಸ್‌ವೈಗೆ ನೈತಿಕ ಹಕ್ಕಿಲ್ಲ: ರಾಜ್ಯದಲ್ಲಿ ಬರಗಾಲವಿದ್ದು, ರೈತರ ಸಾಲ ಮನ್ನಾ ಮಾಡುವಂತೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಈ ಹಿಂದೆ ಅವರೇ ಮುಖ್ಯಮಂತ್ರಿಯಾಗಿದ್ದ ವೇಳೆ ವಿಧಾನಸಭೆಯಲ್ಲಿಯೇ 'ರೈತರ ಸಾಲ ಮನ್ನಾ ಮಾಡಲು ನಮ್ಮ ಬಳಿ ನೋಟು ಮುದ್ರಿಸುವ ಪ್ರಿಂಟಿಂಗ್ ಮಿಷನ್ ಇಲ್ಲ' ಎಂದು ಹೇಳಿದ್ದರು. ಹಾಗಾಗಿ ಸಾಲ ಮನ್ನಾ ಮಾಡುವಂತೆ ಒತ್ತಾಯಿಸುವ ನೈತಿಕತೆ ಅವರಿಗೆ ಇಲ್ಲ ಎಂದು ಪ್ರತಿಪಾದಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮುಡಾ ಅಧ್ಯಕ್ಷ ಕೆ.ಮರೀಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡರಾದ ಜೆ.ಗೋಪಿ, ಕೆ.ಎಸ್.ಶಿವರಾಮ್, ಜೆ.ಜೆ.ಆನಂದ, ನಝರ್‌ಬಾದ್ ನಟರಾಜ್, ತಾ.ಪಂ ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆಯಿಂದ ಮೈಸೂರು ಜಿಲ್ಲೆಯಲ್ಲಿ ಕಂದಾಯ ಸೇವೆಗಳ ವಿಶೇಷ ಅಭಿಯಾನ



ಸಾಂದರ್ಭಿಕ ಚಿತ್ರ

ಮೈಸೂರು, ಮೇ 11(ಎಸ್‌ಬಿಡಿ)– ಮೈಸೂರು ಜಿಲ್ಲೆಯಲ್ಲಿ ಕಂದಾಯ ಇಲಾಖೆ ವತಿಯಿಂದ ಮೇ 13ರಿಂದ 15 ದಿನಗಳ ಕಾಲ 'ಕಂದಾಯ ಸೇವೆಗಳ ವಿಶೇಷ ಅಭಿಯಾನ' ಹಮ್ಮಿಕೊಳ್ಳಲಾಗಿದೆ.

ಬಾಕಿ ಪ್ರಕರಣಗಳ ಶೀಘ್ರ ವಿಲೇವಾರಿ ಹಾಗೂ ವಿವಿಧ ಸೇವೆಗಳನ್ನು ತ್ವರಿತವಾಗಿ ತಲುಪಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಆಯೋಜಿಸಿದ್ದು, ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಗ್ರಾಮಗಳಲ್ಲೂ ಆಧಾರ್ ಸೀಡಿಂಗ್, ಎನ್‌ಪಿಸಿಐ, ಫ್ರೂಟ್ಸ್ ಅಪ್ಡೇಷನ್, ಪರಿಹಾರ ಬಾಕಿ ಪಾವತಿ, ಪೌತಿ ಖಾತೆಗೆ ಅರ್ಜಿ ಸೇರಿದಂತೆ ಹಲವು ಸೇವೆಗಳನ್ನು ಸ್ಥಳದಲ್ಲೇ ಕಲ್ಪಿಸಲಿದ್ದಾರೆ.

ಇದೇ ವೇಳೆ ಲ್ಯಾಂಡ್ ಬೀಟ್ ಅಪ್ಡೇಷನ್, ಬಗರ್ ಹುಕುಂ, ಬರ ಪರಿಹಾರ, ಮಳೆ ಹಾನಿ, ಕಂದಾಯ ಗ್ರಾಮಗಳ ರಚನೆ, ಪ್ರಕೃತಿ ವಿಕೋಪ ಇನ್ನಿತರ ಪ್ರಕರಣಗಳ ಸಂಬಂಧ ಕ್ಷೇತ್ರ ವೀಕ್ಷಣೆ ಮಾಡಿ, ತ್ವರಿತ ಅಗತ್ಯ ಕ್ರಮ ಕೈಗೊಳ್ಳಲಿದ್ದಾರೆ.

ಮೊದಲ ದಿನ: ವಿಶೇಷ ಅಭಿಯಾನದ ಮೊದಲ ದಿನವಾದ ಮೇ 13ರಂದು ಕೆ.ಆರ್.ನಗರ ತಾಲೂಕಿನ ತಿಪ್ಪೂರು, ಕಗ್ಗೆರೆ, ನಾರಾಯಣಪುರ, ಹೊಸಹಳ್ಳಿ, ಕೆಸ್ತೂರು ಕೊಪ್ಪಲು, ಬ್ಯಾಡರಹಳ್ಳಿ, ಮಾವತ್ತೂರು, ಹೊಸಅಗ್ರಹಾರ, ಕಲ್ಯಾಣಪುರ, ಸನ್ಯಾಸಿಪುರ, ಗಳಿಗೆಕೆರೆ, ಪಿರಿಯಾಪಟ್ಟಣ ತಾಲೂಕಿನ ನವಿಲೂರು, ಕಿರಂಗೂರು, ಚಿಟ್ಟೇನಹಳ್ಳಿ, ಅಬ್ಬೂರು, ಪಂಚವಳ್ಳಿ, ಸತ್ಯಗಾಲ, ಮಲ್ಲಿನಾಥಪುರ, ಹಬಟೂರು, ಅತ್ತಿಗೋಡು, ಕಿತ್ತೂರು, ಕೊತ್ತವಳ್ಳಿ, ಬಿಲ್ಲಹಳ್ಳಿ, ಗೊರಹಳ್ಳಿ, ತಮ್ಮಡಹಳ್ಳಿ, ಬಾರ್ಸೆ, ಬೆಟ್ಟದತುಂಗ, ಭುವನಹಳ್ಳಿ, ಹರದೂರು, ಬೆಟ್ಟದಪುರ, ಅಂಬಲಾರೆ, ಕಣಗಾಲು, ಕೊಪ್ಪ, ಹಾರನಹಳ್ಳಿ, ಚಿಕ್ಕನೇರಳೆ, ದಿಂಡಗಾಡು, ಪಿ.ಬಸವನಹಳ್ಳಿ, ಚಾಮರಾಯಕೋಟೆ, ರಾಜನಬಿಳಗುಲಿ, ಆರ್.ತುಂಗ, ಕಂದೇಗಾಲ, ಹಿಟ್ನೆ ಹೆಬ್ಬಾಗಿಲು, ಕಗ್ಗುಂಡಿ, ಹಂಡಿತವಳ್ಳಿ, ಹರಳಹಳ್ಳಿ, ಸುಂಡವಾಳು, ರಾವಂದೂರು.

ತಿ.ನರಸೀಪುರ ತಾಲೂಕಿನ ಕೂಡ್ಲೂರು, ತುಂಬಲ, ಹುಣಸೂರು, ಹೊಸಹಳ್ಳಿ, ಇಂಡವಾಳು, ಕುಪ್ಯ, ಸುಜ್ಜಲೂರು, ಮಾಡ್ರಹಳ್ಳಿ, ಹಿರಿಯೂರು, ಬನ್ನಹಳ್ಳಿ, ಬೇವನಹಳ್ಳಿ, ಉಕ್ಕಲಗೆರೆ, ನೆರೆಗ್ಯಾತನಹಳ್ಳಿ, ಚಿದರವಳ್ಳಿ, ಮುಸವಿನಕೊಪ್ಪಲು, ಸೋಸಲೆ, ಮಾದಾಪುರ, ವಿಜಯಪುರ, ಕಾವೇರಿಪುರ, ಮಾಲಂಗಿ, ಕಲಿಯೂರು, ಟಿ.ಬೆಟ್ಟಹಳ್ಳಿ, ಅತ್ತಹಳ್ಳಿ, ಮೇಣಸೀಕ್ಯಾತನಹಳ್ಳಿ, ಬಸವನಹಳ್ಳಿ, ಬನ್ನೂರು, ಚಾಮನಹಳ್ಳಿ, ಬೀಡನಹಳ್ಳಿ, ಯಾಚೇನಹಳ್ಳಿ. ಸರಗೂರು ತಾಲೂಕಿನ ಸರಗೂರು, ಇಟ್ನ, ಮುಳ್ಳೂರು, ಮೊಳೆಯೂರು, ಎಂ.ಸಿ.ತಳಲು, ಅಳಲಹಳ್ಳಿ, ನರಸೀಪುರ, ಹುಲ್ಲೇಮಾಳದಲ್ಲಿ ಅಭಿಯಾನ ನಡೆಯಲಿದೆ. ಸದ್ಯ ಉಳಿದ ತಾಲೂಕುಗಳ ವೇಳಾಪಟ್ಟಿ ಲಭ್ಯವಾಗಿಲ್ಲ. ಈಗಾಗಲೇ ಈ ಬಗ್ಗೆ ಎಲ್ಲೆಡೆ ಮಾಹಿತಿ ನೀಡಲಾಗಿದ್ದು, ಆದಾಗ್ಯೂ ಗ್ರಾಮ ಆಡಳಿತ ಅಧಿಕಾರಿಯನ್ನು ಸಂಪರ್ಕಿಸಿ, ತಮ್ಮ ಗ್ರಾಮದಲ್ಲಿ ಅಭಿಯಾನ ನಡೆಯುವ ದಿನಾಂಕವನ್ನು ತಿಳಿದುಕೊಳ್ಳಬಹುದು.

ಪ್ರೊ.ಎಂ.ಮಾದಯ್ಯನವರಿಗೆ ಭಾವಪೂರ್ಣ ಶ್ರದ್ಧಾಂಜಲಿ



ಮೈಸೂರಿನ ಶ್ರೀ ನಟರಾಜ ಪ್ರತಿಷ್ಠಾನದ ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳ ವತಿಯಿಂದ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞರಾಗಿದ್ದ ಪ್ರೊ.ಎಂ.ಮಾದಯ್ಯ ಅವರಿಗೆ ಶನಿವಾರ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಮೈಸೂರು, ಮೇ 11(ಜಿಎ)–ಮೈಸೂರಿನ ಶ್ರೀ ನಟರಾಜ ಪ್ರತಿಷ್ಠಾನದ ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳ ವತಿಯಿಂದ ನಟರಾಜ ಸಭಾ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಹಾಗೂ ಖ್ಯಾತ ಅರ್ಥಶಾಸ್ತ್ರಜ್ಞರಾಗಿದ್ದ ಪ್ರೊ.ಎಂ.ಮಾದಯ್ಯ ಅವರಿಗೆ ಶನಿವಾರ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಈ ವೇಳೆ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಮಾತನಾಡಿ, ಮಾದಯ್ಯ ಅವರು ಕುಲಪತಿಗಳಾಗಿ ಮೈಸೂರು ವಿವಿಯ ಅನೇಕ ಕನಸನ್ನು ಈಡೇರಿಸಿದ್ದಾರೆ. ಅರ್ಥಶಾಸ್ತ್ರ ವಿಭಾಗದಲ್ಲಿ ಆಧುನಿಕ ತಂತ್ರಜ್ಞಾನ ಇಲ್ಲದ ಸಂದರ್ಭದಲ್ಲಿ ಅನೇಕ ಯೋಜನೆಗಳನ್ನು ರೂಪಿಸಿದರು. ಕುಲಪತಿಗಳಿಗೆ ಇರಬೇಕಾದ ಗುರಿ ಅವರಲ್ಲಿತ್ತು. ಹಾಸನ ಮತ್ತು ಮಂಡ್ಯದ ಪಿಜಿ ಸೆಂಟರ್‌ಗಳನ್ನು ತೆರೆದು ಮಂಡ್ಯ ಭಾಗದ ಜನರ ಶೈಕ್ಷಣಿಕ ಏಳಿಗೆಗೆ ಶ್ರಮಿಸಿದ್ದರು. ಶಿಕ್ಷಣ ವಿಭಾಗಕ್ಕೆ ಸೇವೆ ಸಲ್ಲಿಸುತ್ತ ಮಾದಯ್ಯ ಅವರು ವ್ಯಕ್ತಿಯಾಗದೇ ಶಕ್ತಿಯಾಗಿದ್ದರು ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಚಿದಾನಂದ ಮಹಾಸ್ವಾಮಿ, ಮೈಸೂರು ವಿವಿ ವಿಶ್ರಾಂತ ಕುಲಪತಿ ಕೆ.ಎಸ್.ರಂಗಪ್ಪ, ಕುವೆಂಪು ವಿವಿ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ, ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಸಿ.ಕೆ.ಸಿದ್ಧಾಶ್ರಮ, ಪ್ರೊ.ಸಿ.ನಾಗಣ್ಣ, ಪ್ರೊ.ಗಂಗಾನಾಯಕ್, ಪ್ರೊ.ಕೆ.ವೈ ಯಶೋಧರ ಮತ್ತಿತರರು ಉಪಸ್ಥಿತರಿದ್ದರು.

ಮೇ 14 ರಂದು 'ಬಾಲಂಗೋಚಿ' ಚಿಣ್ಣರ ಬೇಸಿಗೆ ಶಿಬಿರ ಸಮಾರೋಪ

ಮೈಸೂರು, ಮೇ 11– ಅದಮ್ಯ ರಂಗಶಾಲೆಯ ವತಿಯಿಂದ ನಡೆಯುತ್ತಿರುವ 'ಬಾಲಂಗೋಚಿ' ಚಿಣ್ಣರ ಬೇಸಿಗೆ ಶಿಬಿರದ ಸಮಾರೋಪ ಮತ್ತು ಮಕ್ಕಳ ನಾಟಕ, ಜಾನಪದ ನೃತ್ಯ ಪ್ರದರ್ಶನ ಸಮಾರಂಭವು ಮೇ 14 ರಂದು ಮಂಗಳವಾರ ಸಂಜೆ 5–30 ಗಂಟೆಗೆ ಮೈಸೂರಿನ ಜಯಲಕ್ಷ್ಮಿ ಪುರಂನ ವಿವೇಕಾನಂದ ಪದವಿಪೂರ್ವ ಕಾಲೇಜಿನ ಆವರಣದಲ್ಲಿರುವ ಕುವೆಂಪು ರಂಗಮಂದಿರದಲ್ಲಿ ನಡೆಯಲಿದೆ ಎಂದು ರಂಗಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ ಜೆ ಶಶಿಧರ್ ಪ್ರಸಾದ್ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಮಾರಂಭವನ್ನು ಮಹಾರಾಜ ಕಾಲೇಜಿನ ಕನ್ನಡ ಪ್ರಾಧ್ಯಾಪಕಿ ಡಾ. ಡಿ ವಿಜಯಲಕ್ಷ್ಮಿ ಉದ್ಘಾಟನೆ ಮಾಡುವರು. ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ ಸಮಾರೋಪ ಭಾಷಣ ಮಾಡುವರು.

ಮುಖ್ಯ ಅತಿಥಿಗಳಾಗಿ ರಾಮಕೃಷ್ಣನಗರದ ಕೆನರಾ ಬ್ಯಾಂಕ್ ಶಾಖೆಯ ಹಿರಿಯ ವ್ಯವಸ್ಥಾಪಕ ಎಸ್. ರಾಜ, ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ. ಈ.ಸಿ. ನಿಂಗರಾಜ್ ಗೌಡ ಪಾಲ್ಗೊಳ್ಳುವರು. ಇದೇ ಸಂದರ್ಭದಲ್ಲಿ ಶಿಬಿರದ ಮಕ್ಕಳಿಂದ ಖ್ಯಾತ ಸಾಹಿತಿ ವೈದೇಹಿ ರಚನೆಯ 'ಕತ್ತಲೆ ನಗರಿ' ಮತ್ತು ಚಂದ್ರು ಮಂಡ್ಯ ರಚನೆಯ 'ಕಾಡಿನ ನಕ್ಷತ್ರಗಳು' ನಾಟಕಗಳ ಹಾಗೂ ಜಾನಪದ ನೃತ್ಯದ ಪ್ರದರ್ಶನ ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 8660103141 ಸಂಪರ್ಕಿಸಬಹುದು.

ಸಾಮೂಹಿಕ ಉಪನಯನ

ಮೈಸೂರು, ಮೇ 11– ಮೈಸೂರಿನ ಶ್ರೀ ವೈಷ್ಣವ ಸಾಮೂಹಿಕ ಉಪನಯನ ಸಮಿತಿ ವತಿಯಿಂದ ಶ್ರೀ ವೈಷ್ಣವ ವಟುಗಳಿಗೆ ಜೂ. 20 ರಂದು ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರದಲ್ಲಿ ಸಾಮೂಹಿಕ ಉಪನಯನ ನಡೆಸಲು ನಿರ್ಧರಿಸಲಾಗಿದೆ. ಮೇ 31 ನೋಂದಾಯಿಸಿಕೊಳ್ಳಲು ಕೊನೆ ದಿನವಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9448872458, 9448330197 ಸಂಪರ್ಕಿಸಬಹುದು.



ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ, ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಮೈಸೂರಿನ ಟೌನ್ ಹಾಲ್ ಮುಂಭಾಗ ಶನಿವಾರ ಸಾರ್ವಜನಿಕರ ಸಹಿ ಸಂಗ್ರಹ ಮಾಡಲಾಯಿತು. ಈ ವೇಳೆ ವೇದಿಕೆಯ ಅಧ್ಯಕ್ಷ ಜಯಪ್ರಕಾಶ್ (ಜೆಪಿ), ತೇಜಸ್ ಲೋಕೇಶ್‌ಗೌಡ, ಸ್ವಾಮಿಗೌಡ, ಹೊನ್ನೆಗೌಡ, ಮಹೇಶ್ ಒಂಟಿಕೊಪ್ಪಲ್, ಪುಷ್ಪ, ಮಂಜುಳಾ, ಮಹದೇವಸ್ವಾಮಿ, ಹನುಮಂತೇಗೌಡ, ವಿಷ್ಣು, ಭಾಗ್ಯಮ್ಮ, ಸಿಂಧುವಳ್ಳಿ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 11– ರೈಲ್ವೆ ಪೆನ್ಷನರ್ಸ್ ವೆಲ್‌ಫೇರ್ ಅಸೋಸಿಯೇಷನ್ ವತಿಯಿಂದ ರೈಲ್ವೆ ನಿವೃತ್ತ ವೇತನದಾರರ ಮಕ್ಕಳು, ಮೊಮ್ಮಕ್ಕಳು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ. 80ಕ್ಕೂ ಹೆಚ್ಚು ಪಡೆದಿದ್ದಲ್ಲಿ ಅವರಿಗೆ ಪ್ರೋತ್ಸಾಹ ಧನ ನೀಡಲು ನಿರ್ಧರಿಸಿದೆ. ಮೇ 15 ರಿಂದ ಅರ್ಜಿಯನ್ನು ಪಡೆಯಬಹುದು. ಅರ್ಜಿಯನ್ನು ಸೋಮ, ಬುಧ ಮತ್ತು ಶುಕ್ರವಾರ ಬೆಳಗ್ಗೆ 10.30 ರಿಂದ ಮಧ್ಯಾಹ್ನ 1 ರವರೆಗೆ ಜೂ. 8 ರವರೆಗೆ ಸ್ವೀಕರಿಸಲಾಗುವುದು.

ಜೆಎಸ್‌ಎಸ್ ಅನಾಥಾಲಯಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 11– ಚಾಮರಾಜನಗರದ ಸಿದ್ಧಾರ್ಥ ಬಡಾವಣೆಯಲ್ಲಿರುವ ಜೆಎಸ್‌ಎಸ್ ಅನಾಥಾಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ 5 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶವಿರುತ್ತದೆ. ಅರ್ಜಿಯನ್ನು ನೇರವಾಗಿ ಅಥವಾ ದೂರವಾಣಿಯಲ್ಲಿ ಸಂಪರ್ಕಿಸಿ ವಾಟ್ಸಾಪ್ ಮೂಲಕ ಪಡೆದುಕೊಳ್ಳಬಹುದು. ಮಾಹಿತಿಗೆ ಮೊ. 9535252881 ಸಂಪರ್ಕಿಸಬಹುದು.

ವಕೀಲ ದೇವರಾಜೇಗೌಡ ಬಂಧನ

ವಿರುದ್ಧ ದಾಖಲಾಗಿದ್ದ ಮಹಿಳೆ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಮಾರು 3 ಗಂಟೆ ಕಾಲ ವಿಚಾರಣೆ ನಡೆಸಿ, ಅಧಿಕೃತವಾಗಿ ಬಂಧಿಸಿ ನ್ಯಾಯಾಧೀಶರ ನಿವಾಸದಲ್ಲಿ ಹಾಜರುಪಡಿಸಿದರು. ಅವರನ್ನು ನ್ಯಾಯಾಧೀಶರು 14 ದಿನ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದಾರೆ.

ವಕೀಲ ದೇವರಾಜೇಗೌಡ ವಿರುದ್ಧ ಏಪ್ರಿಲ್ 1ರಂದು ಹೊಳೆನರಸೀಪುರ ಠಾಣೆಯಲ್ಲಿ 36 ವರ್ಷದ ಮಹಿಳೆಯೊಬ್ಬರು ನೀಡಿದ್ದ ದೂರಿನ ಮೇರೆಗೆ ಲೈಂಗಿಕ ದೌರ್ಜನ್ಯ ಆರೋಪದಡಿ ಎಫ್‌ಐಆರ್ ದಾಖಲಾಗಿತ್ತು. ಅವರ ವಿರುದ್ಧ ಗಂಭೀರ ಪ್ರಕರಣ ದಾಖಲಾಗಿ ತಿಂಗಳು ಕಳೆದಿದ್ದರೂ, ಪೊಲೀಸರು ಬಂಧಿಸಿರಲಿಲ್ಲ. ಆದರೆ ಪ್ರಜ್ವಲ್ ರೇವಣ್ಣ ಪ್ರಕರಣದಲ್ಲಿ ಅವರು ಸುದ್ದಿಗೋಷ್ಠಿ ನಡೆಸಿ, ಎಸ್‌ಐಟಿ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಆರೋಪ ಮಾಡಿ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು ಎಂದು ಆಗ್ರಹಿಸಿದ ನಂತರ ದೇವರಾಜೇಗೌಡರನ್ನು ಬಂಧಿಸಿರುವುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಪ್ರಜ್ವಲ್ ರೇವಣ್ಣ ಅವರು ಹಲವಾರು ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಬಗ್ಗೆ ಕಳೆದ ವರ್ಷ ಬಿಜೆಪಿ ನಾಯಕರಿಗೆ ಎಚ್ಚರಿಕೆ ನೀಡಿದ್ದ ದೇವರಾಜೇಗೌಡರು, ಹಾಸನದಿಂದ ಜೆಡಿಎಸ್ ಸಂಸದರಿಗೆ ಎನ್‌ಡಿಎ ಟಿಕೆಟ್ ನೀಡದಂತೆ ಮನವಿ ಮಾಡಿದ್ದರು. ಪ್ರಜ್ವಲ್ ರೇವಣ್ಣರ ಸೆಕ್ಸ್ ವಿಡಿಯೋಗಳು ತಮ್ಮ ಬಳಿ ಇರುವುದಾಗಿಯೂ, ಅದನ್ನು ಹಾಸನದಲ್ಲಿ ಹರಿಬಿಡುವುದಾಗಿಯೂ ಕೆಲ ತಿಂಗಳ ಹಿಂದೆ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದರು. ಆದರೆ ಲೋಕಸಭಾ ಚುನಾವಣೆಗೆ ಕೆಲವೇ ದಿನಗಳ ಮುನ್ನ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯದ ಪೆನ್‌ಡ್ರೈವ್‌ಗಳು ಹಾಸನದಲ್ಲಿ ಹರಿದಾಡಿದ್ದು, ಇದನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಹಂಚಿಕೆ ಮಾಡಿದ್ದಾರೆ ಎಂದು ಆರೋಪಿಸಿದ್ದರು. ಅಲ್ಲದೇ ತಾವು ಎಲ್ಲಾ ವಿಚಾರಗಳನ್ನೂ ಎಸ್‌ಐಟಿಗೆ ತಿಳಿಸಿದಾಗ ಅಲ್ಲಿನ ಮಹಿಳಾ ಎಸ್ಪಿಯೊಬ್ಬರು ಡಿ.ಕೆ. ಶಿವಕುಮಾರ್ ಹೆಸರನ್ನು ಹೇಳಿಕೆಯಿಂದ ತೆಗೆಯುವಂತೆ ಒತ್ತಾಯಿಸಿದ್ದರು ಎಂದು ದೇವರಾಜೇಗೌಡ ಆರೋಪಿಸಿದ್ದರು.

ದೂರಿನ ಸಾರಾಂಶ: ಹಾಸನ ಜಿಲ್ಲೆಯ 36 ವರ್ಷದ ಮಹಿಳೆಯೊಬ್ಬರು ತಮ್ಮ ಆಸ್ತಿ ಮಾರಾಟಕ್ಕೆ ಸಹಾಯ ಮಾಡುವ ನೆಪದಲ್ಲಿ ದೇವರಾಜೇಗೌಡ ತನಗೆ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿ ಹೊಳೆನರಸೀಪುರ ಪೊಲೀಸರಿಗೆ ಏ.1ರಂದು ದೂರು ಸಲ್ಲಿಸಿದ್ದರು. ಹೆದರಿಸಿ, ಬೆದರಿಸಿ ತನ್ನ ಮೇಲೆ ದೌರ್ಜನ್ಯ ನಡೆಸಲಾಗಿದೆ. ವೀಡಿಯೋ ಕಾಲ್ ಮಾಡಿ ತನ್ನ ಖಾಸಗಿ ಅಂಗಾಂಗ ತೋರಿಸಿ ಪ್ರಚೋದನೆಗೆ ಯತ್ನಿಸಿದ್ದಾರೆ ಎಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ. ಈ ಪ್ರಕರಣದಲ್ಲಿ ಇದೀಗ ದೇವರಾಜೇಗೌಡರನ್ನು ಬಂಧಿಸಲಾಗಿದೆ.

ರಾಜ್ಯದಲ್ಲಿ ಜೆಡಿಎಸ್‌ನೊಂದಿಗಿನ ಬಿಜೆಪಿ ಮೈತ್ರಿ ಅಬಾಧಿತ: ಬಿಎಸ್‌ವೈ

●ಪರಿಷತ್ ಚುನಾವಣೆಯಲ್ಲಿ ಬಿಜೆಪಿಗೆ 4, ಜೆಡಿಎಸ್‌ಗೆ 2 ಸ್ಥಾನ ●ಈ ಸಂಬಂಧ ವರಿಷ್ಠರ ನಿರ್ಧಾರ ●ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪ್ರಕರಣ ಸಿಬಿಐ ತನಿಖೆ ಸೂಕ್ತ



ಮೈಸೂರು,ಮೇ 11(ಎಂಟಿವೈ)– ರಾಜ್ಯದಲ್ಲಿ ಜೆಡಿಎಸ್‌ನೊಂದಿಗೆ ಬಿಜೆಪಿ ಮೈತ್ರಿ ಮುಂದುವರೆಯಲಿದ್ದು, ವಿಧಾನ ಪರಿಷತ್ ಚುನಾವಣೆಯಲ್ಲೂ ಜೆಡಿಎಸ್ ನೊಂದಿಗೆ ಸೀಟು ಹಂಚಿಕೆ ಮಾಡಿಕೊಳ್ಳುವುದಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸ್ಪಷ್ಟಪಡಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹಾಸನ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಹಗರಣದಿಂದ ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಗೆ ಭಂಗವಾಗುವುದಿಲ್ಲ. ಮುಂಬರುವ ವಿಧಾನಪರಿಷತ್ ಚುನಾವಣೆಯಲ್ಲೂ ಮೈತ್ರಿ ಮುಂದುವರೆಯುತ್ತದೆ. ಈಗಾಗಲೇ ಮೈತ್ರಿ ಮುಂದುವರೆಸುವ ಸಂಬಂಧ ಬಿಜೆಪಿ ಹೈಕಮಾಂಡ್ ನಿರ್ಧರಿಸಿದೆ. ವಿಧಾನಪರಿಷತ್ ಚುನಾವಣೆಯಲ್ಲಿ ಜೆಡಿಎಸ್‌ಗೆ 2 ಸ್ಥಾನ ಬಿಟ್ಟುಕೊಟ್ಟು, ಬಿಜೆಪಿ 4 ಸ್ಥಾನಗಳಲ್ಲಿ ಸ್ಪರ್ಧಿಸಲಿದೆ. ಯಾವ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಡಬೇಕು. ಅಭ್ಯರ್ಥಿಗಳು ಯಾರು ಎಂದು ದೆಹಲಿಯಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಪ್ರಕಟಿಸಲಿದ್ದಾರೆ ಎಂದು ತಿಳಿಸಿದರು.

ಮೋದಿ ಮತ್ತೆ ಪ್ರಧಾನಿಯಾಗಲಿದ್ದಾರೆ: ದೇಶದ ಪ್ರಧಾನಿಯಾಗಿ ಮೂರನೇ ಬಾರಿಗೆ ನರೇಂದ್ರ ಮೋದಿ ಆಯ್ಕೆಯಾಗುವುದು ಖಚಿತ. ಸೂರ್ಯ–ಚಂದ್ರ ಇರುವುದು ಎಷ್ಟು ಸತ್ಯವೋ, ಮೋದಿ ಮತ್ತೆ ಪ್ರಧಾನಿಯಾಗುವುದು ಅಷ್ಟೇ ಖಚಿತ. ಈ ಲೋಕಸಭಾ ಚುನಾವಣೆಯಲ್ಲಿ 400ಕ್ಕೂ ಹೆಚ್ಚು ಸ್ಥಾನ ಪಡೆಯುವುದರೊಂದಿಗೆ ಮತ್ತೊಮ್ಮೆ ಮೋದಿ ಆಡಳಿತದ ಚುಕ್ಕಾಣಿ ಹಿಡಿಯಲಿದ್ದಾರೆ. ದೇಶವನ್ನು ಅಭಿವೃದ್ಧಿಯತ್ತ ಮತ್ತಷ್ಟು ವೇಗವಾಗಿ ಕೊಂಡೊಯ್ಯುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಈಗಾಗಲೇ ಮೋದಿ ಚಿಂತನೆ ನಡೆಸಿದ್ದಾರೆ ಎಂದರು.

ರಾಜ್ಯದಲ್ಲಿ ಬಿಜೆಪಿ 24ರಿಂದ 25 ಸ್ಥಾನದಲ್ಲಿ ಗೆಲುವು ಸಾಧಿಸುತ್ತದೆ. ಫಲಿತಾಂಶದ ಕುರಿತು ಕಾಂಗ್ರೆಸ್ ನಾಯಕರು ಏನೇ ಹೇಳಿದರೂ ನಾವು ತಲೆ ಕೆಡಿಸಿಕೊಳ್ಳುವುದಿಲ್ಲ. ಕಾಂಗ್ರೆಸ್‌ನಲ್ಲಿ ಪ್ರಧಾನಿಯಾಗುವ ಯೋಗ್ಯತೆ ಯಾರಿಗೂ ಇಲ್ಲ. ವಿಧಾನಸಭಾ ಚುನಾವಣೆ ಬೇರೆ ವಿಷಯದಲ್ಲಿ ನಡೆಯುತ್ತದೆ. ಆದರೆ, ದೇಶದ ವಿಚಾರ ಬಂದಾಗ ಮೋದಿ ಪ್ರಧಾನಿಯಾಗಬೇಕು ಎಂಬುದು ಎಲ್ಲರ ಅಭಿಪ್ರಾಯವಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಬಿಜೆಪಿಗೆ ಜನ ಬೆಂಬಲ ನೀಡಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.


ಸಾಲ ಮನ್ನಾ ಮಾಡಬೇಕು: ರಾಜ್ಯದಲ್ಲಿ ಭೀಕರ ಬರಗಾಲ ಬಂದಿದೆ. ಕೆರೆಕಟ್ಟೆ ಬತ್ತಿ ಹೋಗಿವೆ. ಬರಗಾಲ ಜನನ್ನು ಕಿತ್ತು ತಿನ್ನುತ್ತಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ರೈತರ ಸಾಲ ಮನ್ನಾ ಮಾಡಬೇಕು. ಆ ಮೂಲಕ ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಬೇಕು ಎಂದು ಒತ್ತಾಯಿಸಿದರು.

ಸಿಬಿಐ ತನಿಖೆ ಅಗತ್ಯ: ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಪೆನ್‌ಡ್ರೈವ್ ಪ್ರಕರಣದಲ್ಲಿ ಪಾರದರ್ಶಕ ತನಿಖೆ ಆಗಬೇಕಾದರೆ ಪ್ರಕರಣವನ್ನು ಸಿಬಿಐಗೆ ವಹಿಸಬೇಕು. ಈಗಾಗಲೇ ಬಹುತೇಕ ಜನ ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಸತ್ಯಾಸತ್ಯತೆ ಬಯಲು ಮಾಡಬೇಕಾಗಿದೆ ಈ ಹಿನ್ನೆಲೆಯಲ್ಲಿ ಸಿಬಿಐ ತನಿಖೆ ಸೂಕ್ತವಾಗಿದೆ. ಚುನಾವಣೆಯಲ್ಲಿ ಪ್ರಜ್ವಲ್ ರೇವಣ್ಣ ಗೆದ್ದರೆ ನಿಮ್ಮ ನಿಲುವೇನು ಎಂದು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಬಿಎಸ್‌ವೈ ಫಲಿತಾಂಶ ಬಂದ ಮೇಲೆ ನಿರ್ಧರಿಸೋಣ ಎಂದರು.

ಶಿವಮೊಗ್ಗದಲ್ಲಿ 2.50 ಲಕ್ಷ ಲೀಡ್‌ನಲ್ಲಿ ಗೆಲುವು: ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ಬಿ.ವೈ ರಾಘವೇಂದ್ರ 2.50 ಲಕ್ಷ ಲೀಡ್‌ನಲ್ಲಿ ಗೆಲುವು ಸಾಧಿಸಲಿದ್ದಾರೆ. ಕಳೆದ ಬಾರಿ 2.30 ಲಕ್ಷ ಲೀಡ್ ಪಡೆದಿದ್ದರು. ಈ ಬಾರಿ ಗೆಲುವಿನ ಅಂತರದಲ್ಲಿ ಹೆಚ್ಚಳವಾಗುತ್ತದೆ. ಶಿವಮೊಗ್ಗದಲ್ಲಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಕುರಿತು ಪ್ರತಿಕ್ರಿಯೆ ನೀಡಲು ನಿರಾಕರಿಸಿದರು.

■ ಪೂಜಮಠದ್, ಮೈಸೂರು

ಲೋಕಗುರು ಭಗವತ್ಪಾದ ಶ್ರೀ ಶಂಕರಾಚಾರ್ಯರು



ಜನಸಾಮಾನ್ಯರಿಗೆ ಸುಲಭಗ್ರಾಹ್ಯವಾಗುವಂತೆ ವಿವೇಕ ಚೂಡಾಮಣಿ, ಉಪದೇಶಸಾಹಸ್ರೀ ಮುಂತಾದ ಪ್ರಕರಣ ಗ್ರಂಥಗಳ ಜೊತೆಯಲ್ಲಿ ವೇದಾಂತ ತತ್ವ ಸುಲಭವಾಗಿ ಅರ್ಥವಾಗುವಂತೆ ಸುಂದರವಾದ ಸ್ತೋತ್ರ ಸಾಹಿತ್ಯ ರಚನೆ ಮಾಡಿದರು. ಶ್ರೀ ಕೃಷ್ಣ ಅರ್ಜುನನಿಗೆ ಉಪದೇಶಿಸಿದ ಕರ್ಮಸಿದ್ಧಾಂತವನ್ನು ಎತ್ತಿ ಹಿಡಿದು ದುಡಿದು ತಿನ್ನು, ಅದನ್ನು ಈಶ್ವರ ಸೇವೆಯೆಂದು ಭಾವಿಸಿ ಅನುಭವಿಸು, ಕರ್ಮ ಮಾಡುತ್ತಲೇ ಇರು, ಫಲಾಭಿಲಾಷೆಯಿಲ್ಲದೆ ಜನಸೇವೆ-ಚಿತ್ತಶುದ್ಧಿಗಾಗಿ ಕರ್ಮವನ್ನು ಮಾಡಿ ನೀತಿ ಮಾರ್ಗದಿಂದ ಹಣವನ್ನು ಸಂಪಾದಿಸು, ಭಕ್ತಿಮಾರ್ಗವನ್ನು ಅವಲಂಬಿಸು ಎಂದು ಬೋಧಿಸಿದರು.

ಶೃತಿ ಸ್ಮೃತಿ ಪುರಾಣಾನಾಮಾಲಯಮ್
ಕರುಣಾಲಯಮ್
ನಮಾಮಿ ಭಗವತ್ಪಾದ
ಶಂಕರಮ್ ಲೋಕ ಶಂಕರಂ
ಆರಾದ್ ಜ್ಞಾನದಭಿಸ್ತಿಭಿಹಿ
ಪ್ರತಿಹತಶ್ಚನ್ನಾಯುತೆ ಭಾಸ್ಕರಹ
ತಸ್ಮೈ ಶಂಕರ ಭಾನವೇ ತನುಮನೋ
ವಾಭಿರ್ನಮಸ್ಕುರ್ಮಹೆ

ಶ್ರುತಿ ಸ್ಮೃತಿ ಪುರಾಣಗಳ ಆಶ್ರಯಧಾತರಾಗಿ ಲೋಕಕ್ಕೆ ಕಲ್ಯಾಣ ಉಂಟು ಮಾಡಿ ಬುದ್ಧಿವಂತಿಕೆಯಲ್ಲಿ ಸೂರ್ಯದೇವನಿಗೆ ಸಮನಾದ ಶ್ರೀ ಶಂಕರ ಭಗವತ್ಪಾದರಿಗೆ ಭಕ್ತಿ ಪೂರ್ವಕವಾಗಿ ನಮಿಸುತ್ತೇನೆ.

ಸೃಷ್ಟಿಯ ಆದಿಯಿಂದಲೂ ಸೂರ್ಯ ಚಂದ್ರರು ಹೇಗೆ ಎಲ್ಲಾ ಕಾಲದಲ್ಲೂ ಪ್ರಸ್ತುತರೋ ಹಾಗೆ ತತ್ವಜ್ಞಾನ ಪ್ರಸರಣ ಮಾಡಿದ ಆಚಾರ್ಯರು ನೀಡಿದ ಜ್ಞಾನ-ಭಕ್ತಿಗಳ ಪ್ರಕಾಶವೂ ಸರ್ವಕಾಲಕ್ಕೂ ಪ್ರಸ್ತುತ. ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯ ತ್ರಯರಲ್ಲಿ ಶ್ರೀ ಶಂಕರಾಚಾರ್ಯರು ಮೊದಲಿಗರು.

ಸರ್ವಮಂತ್ರಜ್ಞ, ಸರ್ವಯಂತ್ರಜ್ಞ, ಸರ್ವಜ್ಞರಾದ ಜಗದ್ಗುರು ಶಂಕರಾಚಾರ್ಯರು, ಶ್ರೀ ಗೋವಿಂದ ಭಗವತ್ಪಾದರ ಶಿಷ್ಯರಾಗಿ ಸನ್ಯಾಸಶ್ರಮ ಸ್ವೀಕಾರ ಮಾಡಿ ವೇದಭೂಮಿ ಭರತವರ್ಷದಲ್ಲಿ ಸಂಚರಿಸಿ 4 ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿ ಆ ಮೂಲಕ ಆಧ್ಯಾತ್ಮಿಕ ಶಕ್ತಿ ಪ್ರವಹಿಸುವಂತೆ ಮಾಡಿ ಅದ್ವೈತ ತತ್ವವನ್ನು ಬೋಧಿಸಿದ ಭಾರತದ ಧರ್ಮರಕ್ಷಕ ದಾರ್ಶನಿಕರು.

ವೈದಿಕ ಜ್ಞಾನವನ್ನು ಬೋಧಿಸಿ ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸಿ ಆತ್ಮ, ಪರಮಾತ್ಮ, ವೈರಾಗ್ಯ ಮತ್ತು ಮೋಕ್ಷ ಪರಿಕಲ್ಪನೆಯನ್ನು ವಿವರಿಸಿದ ಆದಿ ಶಂಕರರು ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೆ ಯುಗೇ ಎಂಬ ಭಗವದ್ವಾಣಿಯಂತೆ ಹಿಂದೂ ಧರ್ಮದ ರಕ್ಷಣೆಗಾಗಿ ಶುದ್ಧ ವೈಶಾಖ ಮಾಸದ ಶುಕ್ಲ ಪಕ್ಷದ ಆರುದ್ರ ನಕ್ಷತ್ರ ಪಂಚಮಿ ತಿಥಿಯಲ್ಲಿ ಶ್ರೀ ಶಿವಶಂಕರರಾಗಿ ಕೇರಳದ ಎರ್ನಾಕುಲಂ ಸಮೀಪದ ಕಾಲಡಿ ಗ್ರಾಮದಲ್ಲಿ ನಂಬೂದರಿ ಬ್ರಾಹ್ಮಣ ಪಂಗಡಕ್ಕೆ ಸೇರಿದ ಶಿವಗುರು ಮತ್ತು ಆರ್ಯಾಂಬಾ ದಂಪತಿಗೆ ಈಶ್ವರನ ವರ ಪ್ರಸಾದದಿಂದ ಭರತಭೂಮಿಯಲ್ಲಿ ಸಿದ್ಧಪುರುಷರಾಗಿ ಜನಿಸಿದ ಈ ಪುಣ್ಯದಿನವನ್ನು ಜಗತ್ತಿನಾದ್ಯಂತ ಶ್ರೀ ಶಂಕರಾಚಾರ್ಯ ಜಯಂತಿಯಾಗಿ ಆರಾಧನೆ ಮಾಡಲಾಗುತ್ತದೆ. ಆರಾಧನೆಯಂದು ಶ್ರೀ ಶಂಕರ ಸ್ಥಾಪಿತ ಚತುರಾಮ್ನಾಯ ಪೀಠಗಳಲ್ಲಿ ಹಾಗೂ ವಿವಿಧ ಮಠಗಳಲ್ಲಿ ಆದಿ ಶಂಕರಾಚಾರ್ಯರ ಪ್ರಾರ್ಥನೆ ಮತ್ತು ಉಪದೇಶವನ್ನು ಪಠಿಸಿ ಆರಾಧನೆ ಮಾಡಲಾಗುತ್ತದೆ.

ಅಷ್ಟವರ್ಷೇ ಚತುರ್ವೇದೀ
ದ್ವಾದಶೇ ಸರ್ವಶಾಸ ವಿತ್
ಷೋಡಶೇ ಕೃತವಾನ್
ಭಾಷ್ಯಮ್ ದ್ವಾತ್ರಿಂಶೇ ಮುನಿರಭ್ಯಗಾತ್

ಶ್ರೀ ಶಂಕರ ಭಗದ್ಪೂಜ್ಯರವರ ಜೀವನ ಸಾಧನೆಯನ್ನು ಸಾರುವ ಮೇಲಿನ ಶ್ಲೋಕವು, ಶ್ರೀ ಶಂಕರರು 8 ವರ್ಷದವರಿರುವಾಗ 4 ವೇದ, 12ನೇ ವರ್ಷದಲ್ಲಿ ಸರ್ವ ಶಾಸ್ತ್ರಗಳನ್ನು ಅಭ್ಯಸಿಸಿ ಸಕಲ ವೇದ ಪರಾಂಗತರಾಗಿ 16ನೆಯ ವಯಸ್ಸಿನಲ್ಲಿ ಭಾಷ್ಯವನ್ನು ರಚಿಸಿ 32ನೆಯ ವಯಸ್ಸಿನಲ್ಲಿ ತಿರೋಧಾನವನ್ನೈದಿದರೆಂದು ಸ್ಪಷ್ಟವಾಗಿ ಅರ್ಥೈಸುತ್ತದೆ. ಶ್ರೀ ಶಂಕರರ ಸಾಧನೆ ಪವಾಡಗಳು ಎಣಿಕೆಗೆ ನಿಲುಕದ್ದು.

ಶಂಕರಾಚಾರ್ಯರು ಓಂಕಾರೇಶ್ವರದಲ್ಲಿ ಗೌಡಪಾದರ ಶಿಷ್ಯರಾದ ಗೋವಿಂದ ಭಗವತ್ಪಾದರಿಂದ ಎಂಟನೇ ವಯಸ್ಸಿಗೆ ಸನ್ಯಾಸಾಶ್ರಮವನ್ನು ಸ್ವೀಕರಿಸುತ್ತಾರೆ. ಈ ಸಂದರ್ಭದಲ್ಲಿ ಗುರುಗಳು ಬಾಲ ಸನ್ಯಾಸಿ ಶಂಕರರಿಗೆ ಮರ್ತ್ಯ ಶರೀರದಿಂದ, ಭವ ಸಾಗರದಿಂದ ಹೇಗೆ ಬಿಡುಗಡೆ ಹೊಂದುವೆ ಎಂದು ಪ್ರಶ್ನಿಸುತ್ತಾರೆ. ಅದಕ್ಕೆ ಶಂಕರರು ಜೀವನ್ಮರಣ ಶರೀರಕ್ಕೆ ಹೊರತು ಆತ್ಮಕ್ಕೆ ಅಲ್ಲ ಎಂದು ಉತ್ತರಿಸುತ್ತಾರೆ. ಅತೀ ಚಿಕ್ಕ ವಯಸ್ಸಿನಲ್ಲಿ ಇಂತಹ ಪಾರಮಾರ್ಥಿಕ ಉತ್ತರವನ್ನು ನೀಡುವಷ್ಟು ಜ್ಞಾನಿಗಳಾಗಿದ್ದ ಶಂಕರಾಚಾರ್ಯರು 'ಜಗತ್ ಮಿಥ್ಯಾ ಬ್ರಹ್ಮೈವ ಸತ್ಯಂ' ಎನ್ನುವ ಸಂದೇಶವನ್ನು ಸಾರುತ್ತಾರೆ. ಆತ್ಮ ಮತ್ತು ಬ್ರಹ್ಮ ಬೇರೆಯಲ್ಲ. ಎಲ್ಲರೂ ಶಿವನ ಸ್ವರೂಪರೇ ಎಂದರು. ಸಂಪೂರ್ಣ ವೇದಾಧ್ಯಯನ, ಶಾಸ್ತ್ರಾಧ್ಯಯನಗಳನ್ನು ಪೂರೈಸಿ ಪರಿವ್ರಾಜಕರಾಗಿ ಭರತಖಂಡದುದದ್ದಕ್ಕೂ ಸಂಚರಿಸಿ ಸನಾತನ ಧರ್ಮವನ್ನು ಪುನಃ ಸ್ಥಾಪಿಸಿದರು. ಜ್ಞಾನವನ್ನು ಸಂಪಾದಿಸದ ಹೊರತು ಅವಿದ್ಯೆ ನಾಶವಾಗುವುದಿಲ್ಲ ಎಂದು ಬೋಧಿಸಿದರು.

ಶ್ರೀ ಶಂಕರರು ಷಣ್ಮತಾಸ್ಥಾಪಾನಾಚಾರ್ಯರಾಗಿ: ಜಗತ್ತಿನಾದ್ಯಂತ ವಿವಿಧ ದೇವರನ್ನು ಪೂಜಿಸುವ ವಿವಿಧ ಪಂಥಗಳಾದ ಶೈವ, ಶಾಸ , ವೈಷ್ಣವ, ಶಕ್ತಿ ಪಂಥಗಳನ್ನು ಗಮನಿಸಿದ ಶ್ರೀ ಶಂಕರರು ಪಂಥಗಳನ್ನು ಒಂದುಗೂಡಿಸಬೇಕೆಂಬ ನಿರ್ಧಾರ ಮಾಡಿ ಅದರಂತೆ ಶಿವ, ಶಕ್ತಿ, ಕುಮಾರ, ಗಣೇಶ, ವಿಷ್ಣು ಸೂರ್ಯ 6 ದೇವರ ಪೂಜೆಗೆ ಅವಕಾಶಮಾಡಿ ಕೊಟ್ಟು ಷಣ್ಮತಾಸ್ಥಾಪಾನಾಚಾರ್ಯರಾಗಿ ಪಂಥಗಳನ್ನು ಒಂದುಗೂಡಿಸುತ್ತಾರೆ. ನಂತರದಲ್ಲಿ ಮೊಟ್ಟ ಮೊದಲು ಶ್ರೀ ಚಕ್ರಯಂತ್ರವನ್ನು ಮಧುರೈ ಮೀನಾಕ್ಷಿ ದೇವಾಲಯದಲ್ಲಿ ಸ್ಥಾಪಿಸಿ ನಂತರ ಭಾರತದ ಹಲವಾರು ಶಕ್ತಿಪೀಠಗಳಲ್ಲಿ ಶ್ರೀ ಚಕ್ರ ಯಂತ್ರವನ್ನು ಪ್ರತಿಷ್ಠಾಪಿಸುತ್ತಾರೆ.

ಶ್ರೀ ಶಂಕರ ಸ್ಥಾಪಿತ ಚತುರಾಮ್ನಾಯ ಪೀಠಗಳು: ಕಾಶ್ಮೀರದ ಶಾರದ ಮಂದಿರದ ಸರ್ವಜ್ಞ ಪೀಠವನ್ನು ಸ್ವೀಕರಿಸಿದ ಮೊಟ್ಟ ಮೊದಲ ದಕ್ಷಿಣ ಭಾರತದ ಯತಿವರೇಣ್ಯ ಶ್ರೀ ಶಂಕರಾಚಾರ್ಯರು ಕಾಲ್ನಡಿಗೆಯಲ್ಲಿ ಅಖಂಡ ಭಾರತವನ್ನು ಸಂಚರಿಸಿ ಮಾನವ ಹಿತಕ್ಕಾಗಿ ವೇದೋಪದಿಷ್ಟವಾದ ಕರ್ಮ, ಉಪಾಸನೆ, ಆತ್ಮ ಜ್ಞಾನವನ್ನು ಬೋಧಿಸಿ ಅದರ ಪ್ರಸರಣಕ್ಕಾಗಿ 4 ಮಠಗಳನ್ನು ಸ್ಥಾಪಿಸಿ ತಮ್ಮ ಶಿಷ್ಯಶ್ರೇಷ್ಠರನ್ನು ಮಠದ ಪೀಠಾಧಿಪತಿಗಳನ್ನಾಗಿ ನೇಮಿಸಿದರು.

ಅದರಂತೆ ಶ್ರೀ ಶಂಕರ ಸ್ಥಾಪಿತ ಪೂರ್ವದ ಪುರಿ ಗೋವರ್ಧನ ಪೀಠದಲ್ಲಿ ಋಗ್ವೇದದ ಮಹಾವಾಕ್ಯ ತಜ್ಞಾನಂ ಬ್ರಹ್ಮ ಮೂಲ ಮಂತ್ರವನ್ನಾಗಿಸಿ ಶ್ರೀ ಹಸ್ತಮಲಕಾಚಾರ್ಯರನ್ನು, ಪಶ್ಚಿಮದ ದ್ವಾರಕ ಕಾಳಿಕಮಠದಲ್ಲಿ ಸಾಮವೇದದ ತತ್ವಮಸಿ ಮೂಲಮಂತ್ರವನ್ನಾಗಿಸಿ ಶ್ರೀ ಪದ್ಮಾಚಾರ್ಯರನ್ನು, ಉತ್ತರದ ಬದರಿ ಪೀಠದಲ್ಲಿ ಅಥರ್ವವೇದದ ಆಯಾಮಾತ್ಮ ಬ್ರಹ್ಮ ಮೂಲಮಂತ್ರವನ್ನಾಗಿಸಿ ಶ್ರೀ ತೋಟಕಾಚಾರ್ಯರನ್ನು ಪ್ರಥಮಾಚಾರ್ಯರನ್ನಾಗಿ ನೇಮಕ ಮಾಡಲಾಗುತ್ತದೆ. ಹೀಗೆ ಭರತವರ್ಷದ ಏಕತ್ವ ಹಾಗೂ ಸಮಾನತ್ವವನ್ನು ತೋರ್ಪಡಿಸುವ ಉದ್ದೇಶದಿಂದ ಶ್ರೀ ಶಂಕರರು ಚತುರಾನ್ಮಯ ಪೀಠಗಳನ್ನು ಸ್ಥಾಪಿಸಿದರು. ಇಂದಿಗೂ ಆಮ್ನಾಯ ಪೀಠಗಳು ವೇದ ವೇದಾಂತಗಳ ಸಂದೇಶ ಹಾಗೂ ಧರ್ಮ ಪ್ರಸಾರವನ್ನು ಅವಿಚ್ಛಿನ್ನವಾಗಿ ಮಾಡುತ್ತಿವೆ.

ಶ್ರೀ ಶಂಕರ ಅದ್ವೈತ ಮತ್ತು ಬೋಧನೆ: ಶ್ರೀ ಶಂಕರರು ಹೊಸದಾಗಿ ಯಾವ ಮತವನ್ನೂ ಸ್ಥಾಪಿಸದೆ ಪ್ರಾಚೀನ ವೈದಿಕ ಸಿದ್ಧಾಂತವನ್ನು ಪ್ರತಿಪಾದಿಸಿ ಜೈಮಿನೀ, ಬಾದರಿ, ಔಡುಲೋಮಿ, ಕಾಶಕೃತ್ಸ್ನ, ಭರ್ತೃಹರಿ, ಭರ್ತೃಪ್ರಪಂಚ ಮೊದಲಾದ ತತ್ವವೇತ್ತರು ಕಂಡುಹಿಡಿದ ಸಿದ್ಧಾಂತದ ಮಹತ್ವ ಸಾರಿದರು.

ಅದ್ವೈತ ಸಿದ್ಧಾಂತ – ಅದ್ವೈತ ಎಂದರೆ ಏಕತ್ವ , ಎರಡನೆಯದು ಇಲ್ಲದಿರುವುದು. ಜೀವ(ಆತ್ಮ) ಮತ್ತು ಬ್ರಹ್ಮ(ಪರಮಾತ್ಮ) ಬೇರೆಯಲ್ಲ ಅವೆರಡು ಒಂದೇ ಎಂದು ಬೋಧಿಸಿ ಅದ್ವೈತ ಒಂದು ಮತ ಅನ್ನುವುದರ ಬದಲಿಗೆ ಅದು ಒಂದು ದರ್ಶನ ಎಂದು ತಿಳಿಸಿದರು. ಯತ್ರ ವಿಶ್ವಂ ಭವತ್ಯೇಕ ನೀಡಮ್ – ಇಡೀ ವಿಶ್ವವೇ ಒಂದು ಗೂಡು, ಒಂದು ಕುಟುಂಬ, ಎಂಬ ಉಪನಿಷದ್ವಾಕ್ಯವನ್ನು ಅದ್ವೈತದ ತತ್ವದಲ್ಲಿ ಪ್ರತಿಪಾದಿಸಿದರು.

ಅಂತಿಮ ಸತ್ಯ ಪರಮಾತ್ಮ – ನಿರ್ಗುಣ, ನಿರಾಕಾರ, ಸ್ವಪ್ರಕಾಶನಾದ ಪರಮಾತ್ಮ ಎಂಬುದೇ (ಬ್ರಹ್ಮ) ಅಂತಿಮ ಸತ್ಯವಾಗಿದೆ. ಮಾಯಾವಾದ ಸಿದ್ಧಾಂತ – ಜಗತ್ತು ಮಾಯೆಯಾಗಿದ್ದು ನಾಶಹೊಂದುವಂತಹದ್ದು. ಲೌಕಿಕವಾದ ಜಗತ್ತು ಶಾಶ್ವತವಲ್ಲ ಬದಲಾಗಿ ಆಧ್ಯಾತ್ಮಿಕತೆಯ ವಿಚಾರಗಳನ್ನು ಒಳಗೊಂಡ ಜಗತ್ತು ಶಾಶ್ವತವಾದದ್ದು ಎಂದು ಮಾಯಾವಾದ ಸಿದ್ಧಾಂತದಲ್ಲಿ ತಿಳಿಸುತ್ತಾರೆ.

ಅಹಂ ಬ್ರಹ್ಮಾಸ್ಮಿ – ಆತ್ಮನು ಪರಮಾತ್ಮನು ಒಂದೇ ದೇಹದಲ್ಲಿ ನೆಲೆಸಿದಾಗ ಒಳ್ಳೆ ವಿಚಾರಗಳು, ಚಿಂತನೆಗಳು ನೆಲೆಗೊಂಡು ಆಧ್ಯಾತ್ಮಿಕತೆಯತ್ತ ತನ್ನನು ತಾನು ಅರ್ಪಿಸುಕೊಂಡು ತನ್ನಲೇ ಕೇಂದ್ರಿಕೃತವಾದ ಪರಮಾತ್ಮನನ್ನು ಕಾಣುವತ್ತ ಜೀವನ ಸಾಗಿದಾಗ ಜ್ಞಾನಮಾರ್ಗದ ಮೂಲಕ ಮೋಕ್ಷ ಕಂಡುಕೊಳ್ಳಬಹುದೆಂಬ ವಿಚಾರವನ್ನು ತಿಳಿದು ಆತನು ಅಹಂ ಬ್ರಹ್ಮಾಸ್ಮಿಯಾಗುತ್ತಾನೆ. ಒಟ್ಟಾರೆಯಾಗಿ ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ –ಬ್ರಹ್ಮವು ಸತ್ಯ, ಜಗತ್ತು ಮಿಥ್ಯಾ ಜೀವವು ಬ್ರಹ್ಮಕ್ಕಿಂತ ಬೇರೆಯಲ್ಲ ಎಂಬುದು ಶ್ರೀ ಶಂಕರ ಸಿದ್ಧಾಂತಗಳ ಸಾರವಾಗಿದೆ.

ಜನಸಾಮಾನ್ಯರಿಗೆ ಸುಲಭಗ್ರಾಹ್ಯವಾಗುವಂತೆ ವಿವೇಕ ಚೂಡಾಮಣಿ, ಉಪದೇಶಸಾಹಸ್ರೀ ಮುಂತಾದ ಪ್ರಕರಣ ಗ್ರಂಥಗಳ ಜೊತೆಯಲ್ಲಿ ವೇದಾಂತ ತತ್ವ ಸುಲಭವಾಗಿ ಅರ್ಥವಾಗುವಂತೆ ಸುಂದರವಾದ ಸ್ತೋತ್ರ ಸಾಹಿತ್ಯ ರಚನೆ ಮಾಡಿದರು. ಶ್ರೀ ಕೃಷ್ಣ ಅರ್ಜುನನಿಗೆ ಉಪದೇಶಿಸಿದ ಕರ್ಮಸಿದ್ಧಾಂತವನ್ನು ಎತ್ತಿ ಹಿಡಿದು ದುಡಿದು ತಿನ್ನು, ಅದನ್ನು ಈಶ್ವರಸೇವೆಯೆಂದು ಭಾವಿಸಿ ಅನುಭವಿಸು, ಕರ್ಮ ಮಾಡುತ್ತಲೇ ಇರು, ಫಲಾಭಿಲಾಷೆಯಿಲ್ಲದೆ ಜನಸೇವೆ – ಚಿತ್ತಶುದ್ಧಿಗಾಗಿ ಕರ್ಮವನ್ನು ಮಾಡಿ ನೀತಿ ಮಾರ್ಗದಿಂದ ಹಣವನ್ನು ಸಂಪಾದಿಸು, ಭಕ್ತಿಮಾರ್ಗವನ್ನು ಅವಲಂಬಿಸು ಎಂದು ಬೋಧಿಸಿದರು.

ಶ್ರೀ ಶಂಕರರ ಕುರಿತ ಬರಹಗಳು: ಆದಿಗುರು ಶ್ರೀ ಶಂಕರರ ತೀಕ್ಷ್ಣ ಆಲೋಚನೆ ಹರಿತವಾದ ಜ್ಞಾನ ಅವರನ್ನು ಆದ್ಯಾತ್ಮಿಕ ವಿಚಾರಗಳ ಕುರಿತ ಜ್ಞಾನ ಕೋಶವನ್ನು ರಚಿಸಲು ಪ್ರೇರಣೆಯಾಯಿತು. ಸರ್ವ ವೇದಪಾರಂಗತರಾದ ಶಂಕರರು ಗುರುಗಳ ಆಣತಿಯಂತೆ 555 ಬ್ರಹ್ಮಸೂತ್ರ, 10–ಉಪನಿಷತ್ತು, 72–ಸ್ತೋತ್ರ ಹಾಗೂ ಭಗವದ್ಗೀತೆ ಪ್ರಸ್ಥಾನ ತ್ರಯಗಳಿಗೆ ಭಾಷ್ಯವನ್ನು ರಚಿಸಿದರು. ಭಜಗೋವಿಂದಂ, ಆತ್ಮಬೋಧ, ಶಿವಾನಂದಲಹರಿ, ಆನಂದಲಹರಿ, ಸೌಂದರ್ಯ ಲಹರಿ, ಕನಕಧಾರ ಸ್ತೋತ್ರಂ, ಮನೀಶಾ ಪಂಚಕಂ, ಕಾಶಿಸ್ತೋತ್ರ ಹೀಗೆ ಶ್ರೀ ಶಂಕರರು ರಚಿಸಿದ ಗದ್ಯ, ಪದ್ಯ, ಕಾವ್ಯ, ಕೃತಿಗಳು ಹಲವಾರು.

ಶ್ರೀ ಶಂಕರರಿಂದ ರಚಿತಗೊಂಡತಹ ಗದ್ಯ ಪದ್ಯ ರೂಪದಲ್ಲಿನ ಕೃತಿ ಕಾವ್ಯಗಳನ್ನು 3 ವಿಭಾಗಗಳಲ್ಲಿ ವಿಂಗಡಿಸಲಾಗಿದೆ.

1. **ಭಾಷ್ಯ ಗ್ರಂಥಗಳು – 23**
2. **ಪ್ರಕರಣ ಮತ್ತು ಉಪದೇಶ ಗ್ರಂಥಗಳು – 54**
3. **ಸ್ತೋತ್ರ ಮತ್ತು ಸ್ತುತಿ ಗ್ರಂಥಗಳು – 76**

ಜಯಂತಿ ತೇ ಸುಕೃತಿನೋ ರಸಸಿದ್ಧಾಃ ಕವೀಶ್ವರಾಃ ನಾಸ್ತಿ ಯೇಷಾಂ ಯಶಃ ಕಾಯೇ ಜರಾಮರಣಜಂ ಭಯಮ್–

ರಸಸಿದ್ಧರೂ, ಪುಣ್ಯಶಾಲಿಗಳೂ ಆದ ಕವಿಗಳ ಯಶಸ್ಸೆಂಬ ಶರೀರಕ್ಕೆ ಮುಪ್ಪು ಮತ್ತು ಮರಣದ ಭಯವಿರುವುದಿಲ್ಲ – ಎಂಬ ಮಾತಿನಂತೆ ಅನೇಕ ಕವಿಗಳು, ಬರಹಗಾರರೂ ಶ್ರೀ ಆದಿಶಂಕರರ ಕುರಿತು ಕೃತಿ, ಗ್ರಂಥ ಹಾಗೂ ಕಾವ್ಯಗಳ ರಚನೆ ಮಾಡಿದ್ದಾರೆ. ಅವರುಗಳಲ್ಲಿ ಒಬ್ಬರಾದ ಹಾಡಿನಬಾಳಿನ ನಿವೃತ್ತ ಪ್ರಾಧ್ಯಾಪಕ ಗಜಾನನ ಈಶ್ವರ ಹೆಗಡೆಯವರು ಲೋಕಶಂಕರ ವೆಂಬ ಕೃತಿ ರಚನೆ ಮಾಡಿದ್ದು ಕೃತಿಯು ಶಂಕರರ ಜೀವನ ಚರಿತ್ರೆಯನ್ನು ಪರಾ, ಪಶ್ಯಂತೀ, ಮಧ್ಯಮಾ ಮತ್ತು ವೈಖರೀ ಎಂಬ ನೆಲೆಯಲ್ಲಿ 4 ಕಾಂಡಗಳಲ್ಲಿ ಸುಂದರವಾದ ಪದ್ಯಕಾವ್ಯದಲ್ಲಿ ಮೂಡಿಬಂದಿದೆ.

ಹೀಗೆ ಸತ್ಯ ಶೋಧನೆ , ಮುಕ್ತಿ ಮತ್ತು ಮೋಕ್ಷಕ್ಕೆ ಭಕ್ತಿ ಹಾಗೂ ಜ್ಞಾನ ಮಾರ್ಗವನ್ನು ಪ್ರತಿಪಾದಿಸಿ ಭಕ್ತಿ ಆಂದೋಲನದಲ್ಲಿ ಮತ್ತು ಸಮಾಜ ಹಾಗೂ ಧಾರ್ಮಿಕ ಸುಧಾರಣೆಗಳಲ್ಲಿ ತಮ್ಮದೇ ಆದ ಪಾತ್ರ ನಿರ್ವಹಿಸಿ ಧಾರ್ಮಿಕ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿ ಕೇದಾರದಲ್ಲಿ ವೈಶಾಖ ಶುದ್ಧ ದ್ವಾದಶಿಯಂದು ಭಗವಂತನಲ್ಲಿ ಐಕ್ಯಗೊಂಡ ಯೋಗಿರಾಜ ಯುಗಾವತಾರಿ ಮಹಾಚೈತನ್ಯ ಸ್ವರೂಪಿ ಶ್ರೀ ಶಂಕರ ಭಗವತ್ಪಾದರು ತ್ರಿಲೋಕವನ್ನು ಆವರಿಸಿ ವಿಶ್ವವ್ಯಾಪಿಯಾಗುತ್ತಾರೆ.

ಅಪಾರ ಕರುಣಾಸಿಂಧುಂ ಅಜ್ಞಾನ ಅದ್ವಾಂತ ಭಾಸ್ಕರಂ ಸ್ವಾಮಿ ಶ್ರೀ ಶಂಕರಾಚಾರ್ಯಂ ಸರ್ವಲೋಕೈಕ ಸದ್ಗುರುಂ.


ಮಕ್ಕಳ ಚಿತ್ರಕಥೆ

ಬದಲಾವಣೆ ಹೇಗೆ ಸಾಧ್ಯವಾಯಿತು...?


■ ಹೆಚ್.ಜಿ.ಎನ್.ಪ್ರಸಾದ್




ಎಂಟು ವರ್ಷದ ಮಗನೊಂದಿಗೆ ತಾಯಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದಳು.




ಅಮ್ಮ, ಮಗ ಇಬ್ಬರೂ ಪುಸ್ತಕ ಓದುತ್ತಿದ್ದರು.




ಬಳಿಯಲ್ಲಿದ್ದ ಓರ್ವ ವಯಸ್ಸಾದ ವ್ಯಕ್ತಿ, ತಾಯಿ-ಮಗನ ಓದುವ ಹವ್ಯಾಸ ಕಂಡು ಆನಂದದಿಂದ ನೋಡುತ್ತಿದ್ದ.




ಕಡೆಗೆ ಕುತೂಹಲ ತಡೆಯಲಾಗದೆ ಆ ವಯಸ್ಸಾದ ವ್ಯಕ್ತಿ ತಾಯಿಯನ್ನು ಕೇಳಿದ, "ಅಮ್ಮಾ...ಇವತ್ತಿನ ಮಕ್ಕಳು ಮೊಬೈಲ್ ಮತ್ತು ಟ್ಯಾಬ್‌ನಲ್ಲಿ ಆಟವಾಡುತ್ತಾರೆ. ನಿನ್ನೆ ಮೊನ್ನೆ ಹುಟ್ಟಿದ ಮಗು ಮೊಬೈಲ್‌ಗೆ ಮರುಳಾಗಿದೆ."



ಆ ವಯಸ್ಸಾದ ವ್ಯಕ್ತಿ ತನ್ನ ಮಾತನ್ನು ಮುಂದುವರೆಸುತ್ತಾ "ನಿಮ್ಮ ಪುಟ್ಟ ಮಗ ಪುಸ್ತಕ ಓದುತ್ತಿದ್ದಾನೆ... ನಿಮ್ಮ ಯಾವ ಮಾತಿನಿಂದ ಮಗುವಿನಲ್ಲಿ ಬದಲಾವಣೆ ಸಾಧ್ಯವಾಯಿತು...?" ಎಂದು ಪ್ರಶ್ನಿಸಿದ.



ಅದಕ್ಕೆ ಮಹಿಳೆಯು ಸಾವಧಾನದಿಂದ ಉತ್ತರಿಸಿದಳು, "ಮಕ್ಕಳು ನಮ್ಮ ಮಾತನ್ನು ಕೇಳುವುದಿಲ್ಲಾ.... ನಮ್ಮನ್ನು ಅನುಸರಿಸುತ್ತಾರೆ.....!".



ವಾರಭವಿಷ್ಯ

12.05.2024 ರಿಂದ 18.05.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಮೇಷ, ವೃಷಭ, ಚಂದ್ರ-ಮಿಥುನ, ಕಟಕ, ಸಿಂಹ, ಕನ್ಯಾ, ಕುಜ-ಮೀನ, ಬುಧ-ಮೇಷ, ಗುರು-ವೃಷಭ, ಶುಕ್ರ-ಮೇಷ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
೯ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ಅನುಭವಿಗಳ ಮಾತು ಅಮೃತಪಾನವಿದ್ದಂತೆ. ಗುರು-ಹಿರಿಯರ ಮಾತು ಮನ್ನಿಸಿ. ವ್ಯಾಪಾರ ವ್ಯವಹಾರಗಳು ಚೆನ್ನಾಗಿ ನಡೆಯಲು ಗುರುಕೃಪೆ ಇದೆ. ಆರ್ಥಿಕ ಪರಿಸ್ಥಿತಿಯಲ್ಲಿ ಗಣನೀಯ ವೃದ್ಧಿ ಆಗುವುದು. ನಿವೇಶನ, ಗೃಹ ಖರೀದಿಯ ಪ್ರಯತ್ನಗಳು ಮುಂದುವರೆಯಲಿ. ಐಟಿ-ಬಿಟಿ ನೌಕರರಿಗೆ ಉತ್ತಮ ಆಫರ್‌ಗಳು ದೊರೆಯಲಿದೆ. ದುಡುಕು ಮಾತು ಸಂಬಂಧ ಹಾಳು ಮಾಡುವುದು.

ಶ್ರೀ ಗಣಪತಿ ಆರಾಧನೆ. ಶುಭ ಸಂಖ್ಯೆ-3

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)
ವಾರಪೂರ್ತಿ ಚಂದ್ರ ಗೋಚರ ಚೆನ್ನಾಗಿದೆ. ನೂತನ ವಸ್ತ್ರಾಭರಣ ಖರೀದಿಸುವಿರಿ. ಹೊಸ ಗೆಳೆಯರ ಪರಿಚಯದಿಂದ ನಿಮ್ಮ ಭವಿಷ್ಯ ಉಜ್ವಲವಾಗುವ ಸಂದರ್ಭವಿದೆ. ಉನ್ನತ ಶಿಕ್ಷಣಾರ್ಥಿಗಳಿಗೆ ಉತ್ತಮ ಫಲಿತಾಂಶ ದೊರೆಯಲಿದೆ. ರಾಜಕಾರಣಿಗಳು ಹಿನ್ನಡೆಯನ್ನು ಎದುರಿಸಬೇಕಾದೀತು. ನಿಮ್ಮ ಮಾತೃಶ್ರೀಯವರ ಆರೋಗ್ಯದ ಕಡೆ ನಿಗಾ ವಹಿಸಿ. ವಾರದ ಕಡೆಗೆ ಮನೆ ದೇವರ ದರ್ಶನ.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-4.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಈ ವಾರದಲ್ಲಿ ಹೊಸ ಕೆಲಸಗಳನ್ನು ಆರಂಭಿಸಬಹುದಾಗಿದೆ. ಉಚ್ಚ ರಾಶಿ ಹಾಗೂ ನಿಮ್ಮ ಜನ್ಮ ರಾಶಿಯಲ್ಲಿ ಸಂಚರಿಸುವ ಚಂದ್ರನಿಂದ ನಿಮ್ಮ ಸೃಜನಶೀಲತೆ ಉತ್ತಮ ಫಲವನ್ನು ನೀಡಲಿದೆ. ವೈವಾಹಿಕ ಜೀವನದಲ್ಲಿ ಸಂತೋಷ ಇರುತ್ತದೆ. ನಿಮ್ಮ ಸಂಗಾತಿಯೊಂದಿಗಿನ ಭಾವನಾತ್ಮಕ ಬಂಧವು ಬಲವಾಗಿರುತ್ತದೆ. ಆರೋಗ್ಯ ಮೊದಲಿಗಿಂತ ಉತ್ತಮವಾಗಿರುತ್ತದೆ. ಕುಟುಂಬ ಸದಸ್ಯರ ಆರೋಗ್ಯದ ಕಡೆ ಗಮನ ನೀಡಿ.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ಈ ಸಪ್ತಾಹದಲ್ಲಿ ನಿಮ್ಮ ಹಳೆಯ ಹೂಡಿಕೆಗಳಿಂದ ಉತ್ತಮ ಲಾಭವನ್ನು ಪಡೆಯುತ್ತೀರಿ. ಖರ್ಚುಗಳನ್ನು ನಿಯಂತ್ರಿಸಿ, ಹಣವನ್ನು ಉಳಿಸಲು ಪ್ರಯತ್ನಿಸಿ. ಐಟಿ, ಬಿಟಿರವರಿಗೆ ಬಿಡುವಿಲ್ಲದ ಕೆಲಸದ ಹೊರೆ ಹಾಗೂ ಹೆಚ್ಚುವರಿ ಜವಾಬ್ದಾರಿಯನ್ನು ಪಡೆಯುತ್ತೀರಿ. ಕಚೇರಿ ಒತ್ತಡವನ್ನು ಮನೆಗೆ ತರಬೇಡಿ. ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಮಯವನ್ನು ಕಳೆಯಿರಿ. ಈ ವಾರ ಪ್ರಮುಖ ಸಾಧನೆ ಮಾಡುವ ಅವಕಾಶವಿದೆ.

ಶ್ರೀ ಶಾರದಾಸ್ತುತಿ. ಶುಭ ಸಂಖ್ಯೆ-9.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ಕೌಟುಂಬಿಕ ಜೀವನದಲ್ಲಿ ಸುಖ-ಶಾಂತಿ ಇರುತ್ತದೆ. ವೃತ್ತಿಪರ ಜೀವನದ ಯಾವುದೇ ನಿರ್ಧಾರವನ್ನು ಬಹಳ ಎಚ್ಚರಿಕೆಯಿಂದ ತೆಗೆದುಕೊಳ್ಳಿ. ಅಗತ್ಯವಿದ್ದರೆ ಮನೆಯಲ್ಲಿ ಹಿರಿಯರ ಸಲಹೆ ಕೇಳಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಅಪಾರ ಯಶಸ್ಸು ಗಳಿಸುವ ಅವಕಾಶವಿದೆ. ಪ್ರೀತಿ-ಪ್ರೇಮ ಸಂಬಂಧಗಳಲ್ಲಿ ಮಾಧುರ್ಯ ಹೆಚ್ಚಾಗಲಿದೆ. ದೂರ ಪ್ರಯಾಣಗಳನ್ನು ತ್ಯಜಿಸಿ.

ಶ್ರೀ ಸೂರ್ಯನಾರಾಯಣ ಸ್ತುತಿ. ಶುಭ ಸಂಖ್ಯೆ-1.

ಕನ್ಯಾ (ಟೊ.ಪ.ಪಿ.ಪು.ಘ.ಣ.ಠ.ಪೆ.ಪೊ)
ವಾರದ ಪೂರ್ವಾರ್ಧದಲ್ಲಿ ಮನೆಯಲ್ಲಿ ಮಂಗಳಕರ ವಾತಾವರಣ ಇರುತ್ತದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುವ ವಿದ್ಯಾರ್ಥಿಗಳು ಉತ್ತಮ ಯಶಸ್ಸನ್ನು ಪಡೆಯುವರು. ಕಚೇರಿ ಕೆಲಸಗಳ ನಿರ್ವಹಣೆ ಅಚ್ಚುಕಟ್ಟಾಗಿ ನಿರ್ವಹಿಸುವಿರಿ. ನಿಮ್ಮ ಬಾಸ್ ನಿಮ್ಮ ಕೆಲಸವನ್ನು ಮೆಚ್ಚುವರು. ವಾರದ ಉತ್ತರಾರ್ಧದಲ್ಲಿ ಹೊಸ ಗೆಳೆಯರ ಸಂಬಂಧವಾಗುವುದು. ಪತ್ನಿ-ಪತಿಯರು ವಿರಸವಾಗದಂತೆ ವರ್ತಿಸಿ.

ಶ್ರೀಮನ್ನಾರಾಯಣ ಸ್ತುತಿ. ಶುಭ ಸಂಖ್ಯೆ-7

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಆರ್ಥಿಕ ಲಾಭವನ್ನು ಹೊಂದುವಿರಾದರೂ, ವ್ಯಥಾ ಅಲೆದಾಟಗಳಿಂದ ದೇಹ ಬಳಲುವುದು. ಗ್ರಹಗಳ ಮಾರ್ಗಸೂಚಿ ನಿಮಗೆ ಅನುಕೂಲಕರವಾಗಿಲ್ಲ. ಚಾಡಿ ಮಾತಿನಿಂದ ಚಾವಡಿ ಹಾಳಾಯಿತು ಎಂಬಂತೆ ನೆರೆಹೊರೆಯವರಿಂದ ನಿಮ್ಮ ನೆಮ್ಮದಿ ಕೆಡುವುದು. ವಾರ ಮಧ್ಯಾನಂತರ ವ್ಯಾಪಾರ ವ್ಯವಹಾರಗಳು ತಕ್ಕ ಮಟ್ಟಿಗೆ ಲಾಭವನ್ನು ತಂದುಕೊಡಲಿದೆ. ಸಾಂಸಾರಿಕ ತಾಪತ್ರಯಗಳು ಉಪಶಮನವಾಗುತ್ತದೆ.

ಶ್ರೀ ಅಪರಾಜಿತ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-1.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ
ವಾರದ ಆದಿಗೆ ವೈಯಕ್ತಿಕ ಆಶಾಭಾವನೆಗಳು ಕೈಗೂಡಲು ಉಚ್ಚ ಚಂದ್ರನ ದೃಷ್ಟಿಯಿಂದ ಜೀವನದಲ್ಲಿ ಎದುರಾಗುವ ಅಡ್ಡಿ ಆತಂಕಗಳನ್ನು ಸಮರ್ಥವಾಗಿ ಎದುರಿಸುವಿರಿ. ಉದ್ಯೋಗ ಕ್ಷೇತ್ರದಲ್ಲಿ ಅನಿರೀಕ್ಷಿತ ರೂಪದಲ್ಲಿ ಲಾಭದಾಯಕ ಆರ್ಡರ್‌ಗಳು ದೊರಕುವ ಸಾಧ್ಯತೆ ಇದೆ. ಯುವಕ-ಯುವತಿಯರಿಗೆ ಕಂಕಣಬಲ ಕೂಡಿ ಬರುವ ಯೋಗವಿದೆ. ಹಲವರು ವಿದೇಶಕ್ಕೆ ಪ್ರಯಾಣ ಬೆಳೆಸುವರು.

ಶ್ರೀ ಲಕ್ಷ್ಮೀನೃಸಿಂಹ ಪೂಜೆ. ಶುಭ ಸಂಖ್ಯೆ-8.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಈ ಸಪ್ತಾಹದಲ್ಲಿ ಹೆಚ್ಚಿನ ಗ್ರಹಗಳು ನಿಮ್ಮ ಪರವಿಲ್ಲ. ಕೆಲ ಸಮಯ ತಗ್ಗಿ-ಬಗ್ಗಿ ನಡೆಯುವುದೇ ಜಾಣತನ. ಅಧೀರರಾಗುವ ಅಗತ್ಯವಿಲ್ಲ. ಕತ್ತಲೆ ಕಳೆದು ಬೆಳಕು ಬರಲೇಬೇಕು. ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಬಂಡವಾಳ ಹೂಡದೇ ಜಾಗರೂಕತೆಯಿಂದ ಮಾಡಿಕೊಂಡು ಹೋಗಿ. ಸಾರಾಸಗಟಾಗಿ ಯಾರನ್ನೂ ನಂಬದಿರಿ. ಸರ್ಕಾರಿ ನೌಕರರಿಗೆ ಬೇಡದ ಸ್ಥಳಕ್ಕೆ ವರ್ಗವಾಗುವ ಸಾಧ್ಯತೆ ಇದೆ.

ಶ್ರೀ ರಾಘವೇಂದ್ರಸ್ವಾಮಿ ಉಪಾಸನೆ. ಶುಭ ಸಂಖ್ಯೆ-3

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)
ವಾರದಾರಂಭಕ್ಕೆ ಹಲವು ವಿಧದಿಂದ ದ್ರವ್ಯಲಾಭ. ನಿಮ್ಮ ಸ್ಥಾನಮಾನಗಳಲ್ಲಿ ಉನ್ನತಿ ದೀರ್ಘಕಾಲದಿಂದ ಬಾಕಿ ಇದ್ದ ಕೆಲಸ ಕಾರ್ಯಗಳು ಮುಕ್ತಾಯವಾಗಿ ಸಮಾಧಾನ ತರಲಿದೆ. ಭೂ ಮೂಲಕ ಧನ ಲಾಭ. ಹೊಸ ವಾಹನ ಹೊಂದುವ ಯೋಚನೆ ಸಾಕಾರವಾಗುವುದು. ವಾರಾಂತ್ಯಕ್ಕೆ ಸೋಮಾರಿತನ. ಬಂಧು ದ್ವೇಷ, ಅಪವಾದಕ್ಕೆ ಗುರಿಯಾಗುವಿರಿ.

ಶ್ರೀ ಶಿವ ಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ-7.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ವಾರದ ಆದಿಗೆ ಯತ್ನ ಕಾರ್ಯಗಳಲ್ಲಿ ವಿಘ್ನತೆಗಳು ಉಂಟಾಗಿ ಮಾನಸಿಕ ಖಿನ್ನತೆಯನ್ನು ಅನುಭವಿಸುವಿರಿ. ಮನೆಯಲ್ಲಿ ಹಾಗೂ ನೆರೆಹೊರೆಯಲ್ಲಿ ನಿಷ್ಠೂರದ ಮಾತು ಬೇಡ. ವಾರ ಮಧ್ಯೆ ಹಲವು ಮೂಲಗಳಿಂದ ಉತ್ತಮ ಆದಾಯ ಪ್ರಾಪ್ತವಾಗಲಿದೆ. ದುಷ್ಟ ಪ್ರಭು ಸ್ನೇಹ ನಿಮಗೆ ಸಂಚಕಾರ ತರುವುದು. ಸುಖ ಹೀನತೆ ಹಾಗೂ ಅಗೌರವ ಪ್ರಸಂಗಗಳು ನಡೆದೀತು. ಆರೋಗ್ಯವೂ ಅಷ್ಟಕ್ಕಷ್ಟೆ.

ಶ್ರೀಲಿಂಗಾಷ್ಟಕ ಪಠಿಸಿ. ಶುಭ ಸಂಖ್ಯೆ-2

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಶುಭ ಚಂದ್ರನ ಕಾರಣ ವಾರದ ಆದಿಗೆ ಮಾನ ಸಂಪನ್ನತೆ, ಮನೋ ವಾಂಛಿತ ಕೆಲಸಗಳು ಸುಸೂತ್ರವಾಗಿ ನಡೆಯುವುದು. ವಿದ್ಯಾ ಪ್ರಸಂಗಗಳಲ್ಲಿ ಉನ್ನತ ಶ್ರೇಣಿ ದೊರೆಯುವುದು. ಸಾಡೇ ಸಾತಿ ಶನಿ ಪ್ರಭಾವವೂ ಇರುವ ಕಾರಣ ಸಣ್ಣ ಪುಟ್ಟ ಅಪಘಾತಗಳು ಉಂಟಾದೀತು. ದುಷ್ಟ ಜನರ ಸಂಪರ್ಕದಿಂದ ಸಂಕಷ್ಟಗಳು ಎದುರಾಗುವುದು. ಅತಿವೇಗದ ವಾಹನ ಡ್ರೈವಿಂಗ್ ಒಳ್ಳೆಯದಲ್ಲ.

ಶ್ರೀ ಶನಿಚಾಲೀಸ ಪಠಿಸಿ. ಶುಭ ಸಂಖ್ಯೆ-6

ದಲಿತರ ಹಕ್ಕು, ಸ್ವಾಭಿಮಾನದ ದನಿ ವಿ.ಶ್ರೀನಿವಾಸಪ್ರಸಾದ್

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ

ತಿ.ನರಸೀಪುರ, ಮೇ 11– ದಲಿತರ ಹಕ್ಕು ಮತ್ತು ಸ್ವಾಭಿಮಾನಕ್ಕೆ ಧಕ್ಕೆಯಾದರೆ ಸಿಡಿದೇಳುತ್ತಿದ್ದ ಏಕೈಕ ರಾಜಕಾರಣಿ ವಿ.ಶ್ರೀನಿವಾಸ್ ಪ್ರಸಾದ್ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶನಿವಾರ ನಡೆದ ಸ್ವಾಭಿಮಾನಿ ಚಕ್ರವರ್ತಿ ದಿ.ವಿ.ಶ್ರೀನಿವಾಸ ಪ್ರಸಾದ್ ಪುಣ್ಯಾನುಮೋದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬಸವಲಿಂಗಪ್ಪ ಅವರ ನಂತರ ಶ್ರೀನಿವಾಸ್ ಪ್ರಸಾದ್ ಅವರು ದಲಿತರ ಹಕ್ಕು, ಸ್ವಾಭಿಮಾನಕ್ಕೆ ದನಿಯಾದವರು. ದಲಿತರ ರಾಜಕಾರಣಕ್ಕೆ ಶ್ರೀನಿವಾಸ್ ಪ್ರಸಾದ್ ಅವರು ದಾರಿದೀಪ. ದಲಿತರು ಇಂದು ಒಳಗಾಗಿರುವ ರಾಜಕೀಯ ಭಿನ್ನ ದಾರಿಗೆ ಉತ್ತರವಾಗಿ ವಿ.ಶ್ರೀನಿವಾಸ್ ಪ್ರಸಾದ್ ರಾಜಕಾರಣವಿದೆ ಎಂದರು.

ರಾಜಕಾರಣಿಯಾಗಿ ದಲಿತ ಸಮುದಾಯದ ಪರ ನಿಲ್ಲುವುದು. ಚುನಾವಣಾ ರಾಜಕಾರಣದಲ್ಲಿ ಸುಲಭವಾದ ವಿಚಾರವಲ್ಲ. ಮೇಲ್ವರ್ಗಗಳ ವಿರುದ್ಧ ಹೋರಾಡುತ್ತಲೇ ದಮನಿತರಿಗಾಗಿ ದುಡಿದ ಧೀಮಂತ ರಾಜಕಾರಣಿ ವಿ.ಶ್ರೀನಿವಾಸ್ ಪ್ರಸಾದ್ ಅವರು ನಮ್ಮನ್ನು ಅಗಲಿರುವುದು ದಲಿತ ಸಮುದಾಯಕ್ಕೆ ತುಂಬಲಾರದ ನಷ್ಟ ಎಂದರು.


ತಿ.ನರಸೀಪುರದಲ್ಲಿ ನಡೆದ ಪುಣ್ಯಾನುಮೋದನಾ ಕಾರ್ಯಕ್ರಮದಲ್ಲಿ ಶ್ರೀನಿವಾಸ್ ಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಸ್ವಾಭಿಮಾನಕ್ಕೆ ಧಕ್ಕೆ ಉಂಟಾದರೆ ಶ್ರೀನಿವಾಸ್ ಪ್ರಸಾದ್ ಅವರು ಪಕ್ಷವನ್ನೇ ಬಿಟ್ಟು ಹೊರ ಬರುತ್ತಿದ್ದರು. ಅವರು ಯಾವ ಪಕ್ಷಕ್ಕೆ ಬಂದರೂ ಆ ಪಕ್ಷದ ಶಾಸಕರು ಆಯ್ಕೆಯಾಗುತ್ತಿದ್ದರು ಅಂದರೆ ಅವರು ವ್ಯಕ್ತಿಯಾಗಿರಲಿಲ್ಲ ಒಂದು ದೊಡ್ಡ ಶಕ್ತಿಯಾಗಿದ್ದರು. ಯಾವುದೇ ಕಪ್ಪು ಚುಕ್ಕೆ ಇಲ್ಲದೆ ರಾಜಕಾರಣ ಮಾಡಿದ್ದಾರೆ ಎಂದು ಬಣ್ಣಿಸಿದರು

ಭೋದಿರತ್ನ ಬಂತೇಜಿ ಮಾತನಾಡಿ, ಶ್ರೀನಿವಾಸ್ ಪ್ರಸಾದ್ ಅವರು ತಮ್ಮ 50 ವರ್ಷಗಳ ಸುದೀರ್ಘ ರಾಜಕಾರಣದಲ್ಲಿ 6 ಬಾರಿ ಸಂಸದರಾಗಿ ಕೇಂದ್ರ ಹಾಗೂ ರಾಜ್ಯದಲ್ಲಿ ಸಚಿವರಾಗಿ ರಾಜ್ಯಕ್ಕೆ ಹಲವು ಕೊಡುಗೆಗಳನ್ನು ನೀಡಿ ಶೋಷಿತ ಹಾಗೂ ದಲಿತರ ಧ್ವನಿಯಾಗಿದ್ದರು. ಅವರ ಸ್ವಾಭಿಮಾನಕ್ಕೆ ಧಕ್ಕೆ ಆದಾಗಲೆಲ್ಲ ಪಕ್ಷ ಬಿಟ್ಟು ಬೇರೆ ಪಕ್ಷ ಅಥವಾ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಹೆಚ್ಚು ಮತಗಳಿಂದ ಗೆಲ್ಲುತ್ತಿದ್ದರು. ಶುದ್ಧ ಹಸ್ತರಾಗಿದ್ದ ಅವರು ಯಾವುದೇ ಕಪ್ಪು ಚುಕ್ಕೆ ಇಲ್ಲದೆ ಆಡಳಿತ ನಡೆಸಿದಂತಹ ಮಹಾನ್ ವ್ಯಕ್ತಿ ಎಂದರು.

ಕಾರ್ಯಕ್ರಮದ ನಂತರ ಸಾರ್ವಜನಿಕರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಪುರಸಭಾ ಸದಸ್ಯ ತುಂಬಲ ಪ್ರಕಾಶ್, ಡಾ.ರೇವಣ್ಣ, ಜಿಲ್ಲಾ ಪದವೀಧರ ಘಟಕದ ಅಧ್ಯಕ್ಷ ಎಂ.ರಮೇಶ್, ಎಸ್‌ಸಿ–ಎಸ್‌ಟಿ ಹಿತ ರಕ್ಷಣಾ ಸಮಿತಿ ಸದಸ್ಯ ಮಹದೇವಸ್ವಾಮಿ, ತಾಪಂ ಮಾಜಿ ಸದಸ್ಯರಾದ ಎಂ.ಎಸ್ ಬಸವರಾಜು, ರಾಮಲಿಂಗಯ್ಯ, ನಿಲಸೋಗೆ ಬಸವರಾಜು, ತೋಟದಪ್ಪ ಬಸವರಾಜು, ಕುರುಬೂರು ವೀರೇಶ್, ಕು.ಶಿ.ಬ್ಯಂಗೇಶ್, ಅಲಗೂಡು ಶಿವಕುಮಾರ್, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಮೂಗೂರು ಸಿದ್ದರಾಜು, ಸೋಸಲೆ ಶಶಿಕಾಂತ್, ಪಿಎಸಿಎಸ್ ಅಧ್ಯಕ್ಷ ಪರಶಿವಮೂರ್ತಿ, ನಿಂಗರಾಜು, ಶಿವಕುಮಾರ್, ಮೂಗೂರು ಕುಮಾರಸ್ವಾಮಿ, ತಾಪಂ ಮಾಜಿ ಉಪಾಧ್ಯಕ್ಷ ಮರಯ್ಯ, ಕುಕ್ಕೂರು ರಾಜು, ಚೌಹಳ್ಳಿ ಸಿದ್ದರಾಜು, ಲಕ್ಷ್ಮಣ, ಬನ್ನಳ್ಳಿಹುಂಡಿ ಪುಟ್ಟಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನಸ್ವಾಮಿ, ಪಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ನಂಜುಂಡಯ್ಯ ಮತ್ತಿತರರಿದ್ದರು.

> ಶ್ರೀನಿವಾಸ ಪ್ರಸಾದ್ ಅವರು ಯುವ ಪೀಳಿಗೆಗೆ ಪ್ರೇರಣಾ ಶಕ್ತಿಯಾಗಿದ್ದರು. ಬುದ್ಧ, ಬಸವ, ಅಂಬೇಡ್ಕರ್ ವಾದಿಯಾಗಿದ್ದ ಅವರು ಶುದ್ಧ ಹಸ್ತ ಹೊಂದಿದ್ದ ವ್ಯಕ್ತಿ. ಶ್ರೀನಿವಾಸ್ ಪ್ರಸಾದ್ ಅವರು ಯಾವುದೇ ನಿಲುವು ತೆಗೆದುಕೊಳ್ಳುವಾಗ ವಸ್ತು ನಿಷ್ಠವಾಗಿ ತೆಗೆದುಕೊಳ್ಳುತ್ತಿದ್ದರೆ ಹೊರತು ಜಾತಿ ನಿಷ್ಠವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಪ್ರಸಾದ್ ಅವರು ಇಂದು ನಮ್ಮ ಜೊತೆಯಲ್ಲಿ ಇಲ್ಲದಿರಬಹುದು. ಆದರೆ ಅವರ ವ್ಯಕ್ತಿತ್ವ ಸದಾ ನಮ್ಮೊಂದಿಗೆ ಇರುತ್ತದೆ.
> – ಎಸ್.ಎನ್.ಸಿದ್ದಾರ್ಥ
> ಜಿಪಂ ಮಾಜಿ ಅಧ್ಯಕ್ಷ.

ಮೈಸೂರು ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ / ಚಿತ್ರ	
ಪದ್ಮ ಚಿತ್ರಮಂದಿರ	(ದೂ: 2521923)
ವಾಲ್ಟರ್ ವೀರಯ್ಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಸ್ಟಾರ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಅಂಜನೀಪುತ್ರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಅರಮನೆ 4 (ಕ)	4 ಪ್ರದರ್ಶನಗಳು
ಸಂಗಂ	
ಗ್ರೇ ಗೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ಅಂಜನೀಪುತ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅರಮನೈ 4 (ತ)	4 ಪ್ರದರ್ಶನಗಳು
ಪ್ರಭಾ	
ನೈಟ್‌ಕರ್ಫ್ಯೂ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1: ದಿ ಬಾಯ್ ಅಂಡ್ ದಿ ಹೆರಾನ್ (ಜ): ಬೆ.11.20ಕ್ಕೆ, ಸಂ.4.20ಕ್ಕೆ, ಗ್ರೇ ಗೇಮ್ಸ್ (ಕ): ಮ.1.50ಕ್ಕೆ, ಆವೇಶಂ (ಮ): ರಾ.7ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2: ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.40ಕ್ಕೆ, ಸ್ಟಾರ್ (ತ): ಮ.1ಕ್ಕೆ, ಸಂ.4.05ಕ್ಕೆ, ರಾಮನ ಅವತಾರ (ಕ): ರಾ.7.05ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10.05ಕ್ಕೆ.
- ಸ್ಕ್ರೀನ್ 3: ಅಲೈಕ್ಯಾ (ಕ): ಬೆ.10.55ಕ್ಕೆ, ಪವರ್ (ಕ): ಮ.1.15ಕ್ಕೆ, ಶ್ರೀಕಾಂತ್ (ಹಿಂ): ಸಂ.4.30ಕ್ಕೆ, ರಾ.7.10ಕ್ಕೆ, ಕೃಷ್ಣಮ್ಮ (ತೆ): ರಾ.9.55ಕ್ಕೆ.
- ಸ್ಕ್ರೀನ್ 4: ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.35ಕ್ಕೆ, ಮ.1.25ಕ್ಕೆ, ಸಂ.4.15ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

- ಸ್ಕ್ರೀನ್ 1: ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.25ಕ್ಕೆ, ರಾ.10ಕ್ಕೆ, ಯುವ (ಕ): ಮ.1ಕ್ಕೆ, ಸಂ.4.15ಕ್ಕೆ, O2 (ಕ): ರಾ.7.30ಕ್ಕೆ.
- ಸ್ಕ್ರೀನ್ 2: ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.45ಕ್ಕೆ, ಸಂ.5.55ಕ್ಕೆ, ಮೈದಾನ್ (ಹಿಂ): ಮ.2.10ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.9.20ಕ್ಕೆ.
- ಸ್ಕ್ರೀನ್ 3: ಯುವ (ಕ): ಬೆ.10.10ಕ್ಕೆ, O2 (ಕ): ಮ.1.25ಕ್ಕೆ, ಪಾರಿಜಾತ ಪರ್ವಂ (ತೆ): ಮ.3.55ಕ್ಕೆ, ಆವೇಶಂ (ಮ): ಸಂ.6.50ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ರಾ.10.10ಕ್ಕೆ.
- ಸ್ಕ್ರೀನ್ 4: ಮೈದಾನ್ (ಹಿಂ): ಬೆ.11.25ಕ್ಕೆ, ರಾ.9.50ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ಮ.3.10ಕ್ಕೆ, ಯುವ (ಕ): ಸಂ.6.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

- ಸ್ಕ್ರೀನ್ 1: ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
- ಸ್ಕ್ರೀನ್ 2: ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
- ಸ್ಕ್ರೀನ್ 3: ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
- ಸ್ಕ್ರೀನ್ 4: ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಆರೋಹಣ ಸೆಂಟ್ರಲ್ ಸ್ಕೂಲ್ ಶೇ.100 ಸಾಧನೆ


ಬಿ.ಕೆ.ಸಹನಾ(591)


ಎಂ.ಬಬಿತಾ(587)


ನವ್ಯಶ್ರೀ(565)

ಬನ್ನೂರು, ಮೇ 11– ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಸೋಮನಾಥಪುರದ ಕುಳ್ಳನಕೊಪ್ಪಲಿ ಗೇಟ್ ಬಳಿಯ ಆರೋಹಣ ಸೆಂಟ್ರಲ್ ಸ್ಕೂಲ್‌ಗೆ ಶೇ.100 ಫಲಿತಾಂಶ ಬಂದಿದೆ. ಪರೀಕ್ಷೆಗೆ ಹಾಜರಾಗಿದ್ದ ಎಲ್ಲಾ 15 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದು, ಮೂವರು ಉನ್ನತ ಮತ್ತು 12 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಶಾಲಾ ವಿದ್ಯಾರ್ಥಿಗಳನ್ನು ಮತ್ತು ಶಿಕ್ಷಕರನ್ನು ಶಾಲೆ ಕಾರ್ಯದರ್ಶಿ ಎನ್.ಎಂ. ರಾಮಚಂದ್ರ ಅಭಿನಂದಿಸಿದ್ದಾರೆ.

ಸಹಾಯವಾಣಿ ಸಂಪರ್ಕಿಸಿ

ತಿ.ನರಸೀಪುರ, ಮೇ 11– ಮುಂಬರುವ ದಿನಗಳಲ್ಲಿ ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ಅತಿಯಾದ ಮಳೆಯಿಂದ ಪ್ರವಾಹ, ಮನೆಗಳಿಗೆ ಹಾನಿ, ಕುಡಿಯುವ ನೀರು, ಬೀದಿ ದೀಪ ಮತ್ತು ಒಳಚರಂಡಿ ಸಮಸ್ಯೆ, ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ, ಮರ ಹಾಗೂ ವಿದ್ಯುತ್ ಕಂಬ ಉರುಳುವುದು ಇತ್ಯಾದಿ ಪ್ರಾಕೃತಿಕ ವಿಕೋಪದ ಸಮಸ್ಯೆಗಳು ಉಂಟಾದಲ್ಲಿ ಪುರಸಭಾ ಕಚೇರಿ 24X7 ಸಹಾಯವಾಣಿ ಸಂಖ್ಯೆ: 08227–262488/ 261232 ಕರೆಮಾಡಿ ಅಹವಾಲು ನೋಂದಾಯಿಸುವಂತೆ ಮುಖ್ಯಾಧಿಕಾರಿ ಬಿ.ಕೆ.ವಸಂತ್ ಕುಮಾರಿ ಮನವಿ ಮಾಡಿದ್ದಾರೆ.

ವಚನ ಸಾಹಿತ್ಯಕ್ಕೆ ಬಸವಣ್ಣನವರ ಕೊಡುಗೆ ಅಪಾರ

ಸರಗೂರು, ಮೇ 11– ವಚನ ಸಾಹಿತ್ಯಕ್ಕೆ ಬಸವಣ್ಣನವರ ಕೊಡುಗೆ ಅಪಾರ ಎಂದು ದಡದಹಳ್ಳಿ ಮಠಾಧ್ಯಕ್ಷ ಷಡಕ್ಷರಿ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಶಿವರಾತ್ರೀಶ್ವರ ಶಿವಾನುಭವ ಮಂದಿರದಲ್ಲಿ ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಘಟಕದಿಂದ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬಸವಣ್ಣನವರ ತತ್ವಾದರ್ಶಗಳನ್ನು ಎಲ್ಲರೂ ಪಾಲಿಸಬೇಕು. ವಚನಗಳ ಮೂಲಕವೇ ಜೀವನದ ಮೌಲ್ಯಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡಿದ್ದಾರೆ. ಅಲ್ಲದೇ ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದರು ಎಂದರು.

ಜೆಎಸ್‌ಎಸ್ ಪ್ರೌಢಶಾಲೆ ಶಿಕ್ಷಕ ಸಿದ್ದಲಿಂಗಸ್ವಾಮಿ ಮಾತನಾಡಿ, ಬಸವಣ್ಣನವರು ಶರಣ ಪ್ರೇಮಿಯಾಗಿದ್ದರು. ಆದ್ದರಿಂದ ಅವರನ್ನು ಶರಣ ಸಂಜೀವಿನಿ ಎಂದು ಕರೆಯುತ್ತಾರೆ. ಬಸವಣ್ಣನವರು ಕಲ್ಯಾಣ ವನ್ನು ಕಾಯಕ ದಾಸೋಹದ ಅನುಭವದ ಮೂಲಕ ಕಟ್ಟಿದ್ದರು. ಅಂದಿನ ರಾಜಧಾನಿ ಶರಣ ರಾಜಧಾನಿಯಾಯಿತು. ವಚನ ಸಾಹಿತ್ಯ ಮೂಲಕ ಬಸವಣ್ಣ ಅಪಾರ ಕೊಡುಗೆ ನೀಡಿದ್ದಾರೆ ಎಂದರು.



ಈ ವೇಳೆ ದಡದಹಳ್ಳಿ ಮಠದ ಗುರುಸ್ವಾಮಿ, ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಘಟಕದ ಅಧ್ಯಕ್ಷ ಡಿ.ಜಿ.ಶಿವರಾಜು, ಮಹದೇವಪ್ಪ, ಮಹದೇವಪ್ಪ, ಶಿವಪ್ಪಾಜಿ, ವೀರಶೈವ ಸಹಕಾರ ಸಂಘದ ಅಧ್ಯಕ್ಷ ಶಿವಣ್ಣ, ಮಾಜಿ ಅಧ್ಯಕ್ಷ ಗಣಪತಿ, ಬಿ.ಎಂ.ಮಾದಪ್ಪ, ತಾಪಂ ಮಾಜಿ ಅಧ್ಯಕ್ಷ ಸಿ.ಕೆ.ಗಿರೀಶ್, ಬಸವಣ್ಣ ಮಹದೇವಪ್ಪ ಪಪಂ ಸದಸ್ಯ ವೀರೇಶ್, ಡಿ.ಮಲ್ಲಪ್ಪ, ಪುಟ್ಟಪ್ಪ, ಬಸವ ಬಳಗದ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರಾದ ಕಸಾಪ ಅಧ್ಯಕ್ಷ ಗುರುಸ್ವಾಮಿ, ತಾಪಂ ಮಾಜಿ ಸದಸ್ಯ ಮಹದೇವಸ್ವಾಮಿ, ಮಹಾಸಭಾ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ, ಸಹ ಕಾರ್ಯದರ್ಶಿ ಶಿವಕುಮಾರ್, ಶಿವರಾಜಪ್ಪ ಆನಂದಪ್ಪ, ಯುವ ಸಮಿತಿ ಅಧ್ಯಕ್ಷ ಮಹೇಶ್, ಬಸವರಾಜು, ಚನ್ನಮಲ್ಲಪ್ಪ, ಸ್ನೇಹಸ್ತ್ರೀ ಸಮಾಜದ ಸದಸ್ಯೆ ಮಂಗಳಾ, ಅಶೋಕ್, ಕೃಷ್ಣಮೂರ್ತಿ ಇತರರಿದ್ದರು.

ನಮ್ಮೆಲ್ಲರ ನಂದಾದೀಪ ವಿ.ಶ್ರೀನಿವಾಸಪ್ರಸಾದ್

ತ್ರಿವೇಣಿ ನಗರ ಅಂಬೇಡ್ಕರ್ ಸಂಘದ ಅಧ್ಯಕ್ಷ ಎನ್.ಮಹೇಶ್


ತಿ.ನರಸೀಪುರದ ತ್ರಿವೇಣಿ ನಗರದಲ್ಲಿ ವಿ.ಶ್ರೀನಿವಾಸಪ್ರಸಾದ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ತಿ.ನರಸೀಪುರ, ಮೇ 11– ನೊಂದವರಿಗೆ ದಾರಿದೀಪದಂತಿದ್ದ ಸಂಸದ ವಿ.ಶ್ರೀನಿವಾಸ ಪ್ರಸಾದ್ ಇದೀಗ ನಮಗೆ ನಂದಾದೀಪವಾಗಿದ್ದಾರೆ ಎಂದು ತ್ರಿವೇಣಿ ನಗರ ಅಂಬೇಡ್ಕರ್ ಸಂಘದ ಅಧ್ಯಕ್ಷ ಎನ್.ಮಹೇಶ್ ತಿಳಿಸಿದರು.

ಪಟ್ಟಣದ ತ್ರಿವೇಣಿ ನಗರ ಮಹಾನಾಯಕ ಸರ್ಕಲ್‌ನಲ್ಲಿ ತ್ರಿವೇಣಿ ನಗರ ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದಿಂದ ನಡೆದ ವಿ.ಶ್ರೀನಿವಾಸ ಪ್ರಸಾದ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರೀನಿವಾಸ್ ಪ್ರಸಾದ್ ಅವರು ಸಮಾಜ ಶಾಸ್ತ್ರಜ್ಞ, ರಾಜಕೀಯ ಪ್ರಾಧ್ಯಾಪಕರಂತಿದ್ದರು. ಸಾಂಸ್ಕೃತಿಕ, ಸಮಾಜಮುಖಿಯಾಗಿ ಅನುಕರಣೆ ಮಾಡಬೇಕಾದರೆ ಅವರ ಹೆಸರು ಕೇಳಿ ಬರುತ್ತಿತ್ತು. ಅವರ ವಿಚಾರ ಸ್ಪಷ್ಟತೆ, ವೈಚಾರಿಕ ನಿಲುವು ಅನುಕರಣೀಯ. ಸಂವಿಧಾನ ಪರಾಮರ್ಶೆ ಹೇಳಿಕೆಗೆ ವಿರೋಧ ವ್ಯಕ್ತವಾದಾಗ, ಪರಾಮರ್ಶೆ ಮಾಡಬೇಕಾಗಿರುವುದಕ್ಕೆ ಕಾರಣ ವಿವರಿಸುತ್ತಿದ್ದರು. ಪರಾಮರ್ಶೆಯಿಂದ ಒಳಿತಾಗುವುದು ಬೇಡವೇ? ಎಂದು ಮರು ಪ್ರಶ್ನಿಸಿದ್ದರು ಎಂದರು.

ಬುದ್ಧ ವಿಹಾರದ ಭಂತೇಜಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪುರಸಭಾ ಸದಸ್ಯರಾದ ತುಂಬಲ ಪ್ರಕಾಶ್, ಬೈರಾಪುರ ಗ್ರಾಪಂ ಮಾಜಿ ಸದಸ್ಯರಾದ ಹೇಮಂತ್ ಕುಮಾರ್, ಎಂ.ಮಿಥುನ್, ಟಿಎಪಿಸಿಎಂಎಸ್ ನಿರ್ದೇಶಕ ಎಂ.ಎಸ್.ಬಸವರಾಜು, ತಾಪಂ ಮಾಜಿ ಸದಸ್ಯ ನಿಲಸೋಗೆ ಬಸವರಾಜು, ಸಂಘದ ನಿರ್ದೇಶಕರಾದ ಕೆಂಚಪ್ಪ ಶ್ರೀಧರ್, ರಂಗಸ್ವಾಮಿ, ಶಿವಣ್ಣ, ಲೈಟ್ ಸಿದ್ದರಾಜು, ಮಹದೇವಸ್ವಾಮಿ, ಪುಟ್ಟರಾಜು, ವಿಚಾರವಾದಿ ಕೆ.ಎನ್.ಪ್ರಭುಸ್ವಾಮಿ, ಸೋಸಲೆ ಶಿವಣ್ಣ ಮತ್ತಿತರರಿದ್ದರು.

ಗಾಂಜಾ ಮಾರಾಟ: ಆರೋಪಿ ಬಂಧನ

ಹೆಚ್.ಡಿ.ಕೋಟೆ, ಮೇ 11– ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿದ್ದಾರೆ. ತಾಲೂಕಿನ ಕೇರಳ ಗಡಿ ಭಾಗದ ಡಿ.ಬಿ.ಕುಪ್ಪೆ ಗ್ರಾಪಂ ವ್ಯಾಪ್ತಿಯ ವಡಕನಮಾಳ ಗ್ರಾಮದ ನಿವಾಸಿ ರವಿ ವಿ.ಸ್ವಾಮಿ ಬಂಧಿತ ಆರೋಪಿ. ಈತನಿಂದ 4.800 ಕೆಜಿ ಗಾಂಜಾ ವಶಪಡಿಸಿಕೊಳ್ಳಲಾಗಿದೆ.



ಈತ ಮನೆಯ ಹಿತ್ತಲಿನಲ್ಲಿ ಅಕ್ರಮವಾಗಿ ಗಾಂಜಾ ಬೆಳೆದಿದ್ದು, ಗ್ರಾಮದ ಬಸ್ ನಿಲ್ದಾಣದ ಬಳಿ ಒಣ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಹೆಚ್.ಡಿ.ಕೋಟೆ ವಲಯ ಅಬಕಾರಿ ನಿರೀಕ್ಷಕಿ ದಿವ್ಯಶ್ರೀ ಅವರ ನೇತೃತ್ವದಲ್ಲಿ ದಾಳಿ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿ ರವಿ ವಿ.ಸ್ವಾಮಿ ಅವರನ್ನು ಬಂಧಿಸಿ, ಅವರಿಂದ ಲಕ್ಷಾಂತರ ರೂ. ಬೆಲೆಬಾಳುವ ಒಣ ಗಾಂಜಾ ವಶಪಡಿಸಿಕೊಂಡು ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಅಬಕಾರಿ ನಿರೀಕ್ಷಕಿ ದಿವ್ಯಶ್ರೀ ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಶಿವಮೂರ್ತಿ, ಭರತ್ ಕುಮಾರ್, ಕೃಷ್ಣ ಬಿ.ಸಿ, ಲೋಕೇಶ್ ಜಿ.ಕೆ, ಮೊಷಿನ್ ಪಾಷ ಹಾಗೂ ರವಿ ಬಿ.ವಿ, ಕೇಶವ ಹೆಚ್.ಎನ್, ಸಿಂಗಯ್ಯ ಉಪಸ್ಥಿತರಿದ್ದರು.

ಬಿರುಗಾಳಿ ಮಳೆ: ಮರ ಉರುಳಿ ಮನೆಗಳಿಗೆ ಹಾನಿ

ನಂಜನಗೂಡು, ಮೇ 11– ಗುರುವಾರ ರಾತ್ರಿ ಸುರಿದ ಭಾರಿ ಬಿರುಗಾಳಿ ಮಳೆಗೆ ಅರಳಿಮರ ಉರುಳಿ 4 ಮನೆಗಳಿಗೆ ಹಾನಿಯಾಗಿರುವ ಘಟನೆ ತಾಲೂಕಿನ ನಗರ್ಲೆ ಗ್ರಾಪಂ ವ್ಯಾಪ್ತಿಯ ಬಸವನಪುರದಲ್ಲಿ ನಡೆದಿದೆ.

ಮರ ಉರುಳಿ ಗ್ರಾಮದ ನಿವಾಸಿಗಳಾದ ಸಿದ್ದರಾಜು, ಮೂಗಯ್ಯ, ಮಲ್ಲೇಶ, ಚನ್ನೇಗೌಡ ಎಂಬುವರಿಗೆ ಸೇರಿದ ಮನೆಗಳಿಗೆ ಹಾನಿಯಾಗಿದ್ದು, ಕೊಟ್ಟಿಗೆಯಲ್ಲಿದ್ದ ಹಸುಗಳನ್ನು ಸ್ಥಳಾಂತರಿಸಿದ್ದರಿಂದ ಹಸುಗಳು ಪ್ರಾಣಾಪಾಯದಿಂದ ಪಾರಾಗಿವೆ. ಗ್ರಾಮದಲ್ಲಿ ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ಸೆಸ್ಕಾಂ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕಾಗಮಿಸಿ ವಿದ್ಯುತ್ ಕಂಬಗಳನ್ನು ತೆರವುಗೊಳಿಸಿದರು. ಗ್ರಾಮದ ಮುಖಂಡ ಸಣ್ಣೇಗೌಡ ಮಾತನಾಡಿ ಮರ ಹಾಗೂ ವಿದ್ಯುತ್ ಕಂಬಗಳು ಉರುಳಿ ಬಿದ್ದು ಮನೆಗಳಿಗೆ ಭಾಗಶಃ ಹಾನಿಯಾಗಿದ್ದು, ಸರ್ಕಾರದಿಂದ ಮಳೆ ಹಾನಿ ಪರಿಹಾರ ನೀಡುವಂತೆ ಮನವಿ ಮಾಡಿದರು.

ಕಮಲಮ್ಮ ಶಂಕರಪ್ಪ ವಿದ್ಯಾಸಂಸ್ಥೆಗೆ ಶೇ.100 ಫಲಿತಾಂಶ


ಬಸವಣ್ಣ


ಅನನ್ಯ


ಸೂರ್ಯ ಕುಮಾರ್


ಅನಿರುದ್


ರಜಾಕ್

ಮಲ್ಕುಂಡಿ, ಮೇ 11– ಇಲ್ಲಿಗೆ ಸಮೀಪದ ಹೆಡಿಯಾಲ ಗ್ರಾಮದ ಕಮಲಮ್ಮ ಶಂಕರಪ್ಪ ಆಂಗ್ಲ ಮಾಧ್ಯಮ ಪ್ರೌಢಶಾಲೆಗೆ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಬಂದಿದೆ ಎಂದು ಸಂಸ್ಥೆ ಕಾರ್ಯದರ್ಶಿ ಮಹದೇವಸ್ವಾಮಿ ತಿಳಿಸಿದ್ದಾರೆ. ಪರೀಕ್ಷೆ ಬರೆದಿದ್ದ ಐವರು ವಿದ್ಯಾರ್ಥಿಗಳಾದ ಬಸವಣ್ಣ 549, ಅನನ್ಯ 482, ಅಬ್ದುಲ್ ರಜಾಕ್ 457, ಅನಿರುದ್ 440, ಸೂರ್ಯ ಕುಮಾರ್ 479 ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಉತ್ತಮ ಇಳುವರಿಯೊಂದಿಗೆ ಗುಣಮಟ್ಟದ ತಂಬಾಕು ಬೆಳೆಯಿರಿ

ಚಿಲ್ಕುಂದ ತಂಬಾಕು ಹರಾಜು ಮಾರುಕಟ್ಟೆ ಅಧೀಕ್ಷಕ ಡಾ. ಬ್ರಿಜ್ ಭೂಷಣ್

ಹನಗೋಡು, ಮೇ 11– ದಕ್ಷಿಣ ಕರ್ನಾಟಕದ ವರ್ಜಿನಿಯಾ ತಂಬಾಕು ಬೆಳೆಗೆ ವಿಶ್ವದ್ಯಂತ ಬೇಡಿಕೆ ಇದ್ದು ರೈತರು ಉತ್ತಮ ಇಳುವರಿಯೊಂದಿಗೆ ಗುಣಮಟ್ಟದ ತಂಬಾಕು ಬೆಳೆಯಬೇಕು ಎಂದು ಚಿಲ್ಕುಂದ ತಂಬಾಕು ಹರಾಜು ಮಾರುಕಟ್ಟೆ ಅಧೀಕ್ಷಕ ಡಾ.ಬ್ರಿಜ್ ಭೂಷಣ್ ತಿಳಿಸಿದರು.

ಹನಗೋಡು ಹೋಬಳಿ ಕಚುವಿನಹಳ್ಳಿಯಲ್ಲಿ ತಂಬಾಕು ಮಂಡಳಿಯಿಂದ ಆಯೋಜಿಸಿದ್ದ ಮಾದರಿ ಗ್ರಾಮ ಯೋಜನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ಭಾಗದ ತಂಬಾಕಿಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿದ್ದು ಕಳೆದ ಸಾಲಿನಲ್ಲಿ ಇಳುವರಿ ಕುಸಿತದ ನಡುವೆಯೂ ಉತ್ತಮ ದರ ಸಿಕ್ಕಿದೆ. ವಾತಾವರಣ ವೈಪರೀತ್ಯದಿಂದ ಇಳುವರಿ ಕುಂಠಿತಗೊಂಡ ಹಿನ್ನೆಲೆಯಲ್ಲಿ ಕಳೆದ 3 ವರ್ಷದ ಇಳುವರಿ ಸರಾಸರಿ ಗಮನದಲ್ಲಿಟ್ಟುಕೊಂಡು ಈ ಸಾಲಿಗೆ ಮಂಡಳಿಯು ಸಿಂಗಲ್ ಬ್ಯಾರನ್ ಪರವಾನಗಿ ಹೊಂದಿರುವ ರೈತರಿಗೆ ಹೆಚ್ಚುವರಿ 1 ಎಕರೆ 25 ಗುಂಟೆ ಸೇರಿದಂತೆ ಒಟ್ಟು 4.25 ಎಕರೆಯಲ್ಲಿ 1,806 ಕೆಜಿ ತಂಬಾಕು ಬೆಳೆಯಲು ಅವಕಾಶ ನೀಡಿದೆ. ರೈತರು ಈ ಅವಕಾಶ ಸದ್ಬಳಕೆ ಮಾಡಿಕೊಂಡು ಹೆಚ್ಚು ತಂಬಾಕು ಬೆಳೆ ಬೆಳೆಯುವುದರೊಂದಿಗೆ ಗುಣಮಟ್ಟದ ತಂಬಾಕು ಉತ್ಪಾದಿಸಬೇಕೆಂದು ತಿಳಿಸಿದರು.



ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆಗೆ ತಕ್ಕಷ್ಟು ತಂಬಾಕು ಸಿಗುತ್ತಿಲ್ಲ. ಈ ಮಧ್ಯೆ ತಂಬಾಕು ಮಂಡಳಿ ಹೆಚ್ಚುವರಿ ಕೆಜಿ ನಿಗದಿಗೊಳಿಸಿದ್ದು, ರಾಜ್ಯದಲ್ಲಿ 70ರಿಂದ 72 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ತಂಬಾಕು ಬೆಳೆಯುವ ನಿರೀಕ್ಷೆ ಇದೆ. ತಂಬಾಕು ಬೆಳೆಗಾರರು ಪರಿಸರ ಸಂರಕ್ಷಣೆಯಲ್ಲೂ ಕಾಳಜಿ ವಹಿಸಬೇಕಿದ್ದು, ಹೊಲದ ಬದುಗಳಲ್ಲಿ ಸಸಿ ನೆಟ್ಟು ಬೆಳೆಸುವುದರಿಂದ ಪರಿಸರ ಉಳಿಯಲಿದೆ ಎಂದರು.

ಕೇಂದ್ರಿಯ ತಂಬಾಕು ಸಂಶೋಧನಾ ಕೇಂದ್ರದ ಹಿರಿಯ ವಿಜ್ಞಾನಿ ಡಾ.ರಾಮಕೃಷ್ಣನ್ ಮಾತನಾಡಿ, ತಂಬಾಕು ಮಂಡಳಿ ಈ ಸಾಲಿನಲ್ಲಿ ಹೆಚ್ಚುವರಿ ತಂಬಾಕು ಬೆಳೆಯಲು ಅನುಮತಿ ನೀಡಿದ್ದು, ರೈತರು ಹೆಚ್ಚು ಉತ್ಪಾದನೆಗೆ ಹೆಚ್ಚಿನ ಪ್ರದೇಶಕ್ಕೆ ಸಸಿ ನಾಟಿ ಮಾಡುವ ಅವಶ್ಯಕವಿಲ್ಲ. 3 ಎಕರೆಯಲ್ಲಿ ತಂಬಾಕು ನಾಟಿ ಮಾಡಿ ಉತ್ಪಾದಿಸುವ ತಂಬಾಕನ್ನು 2 ಎಕರೆಯಲ್ಲಿಯೇ ಅಷ್ಟೇ ಪ್ರಮಾಣದ ತಂಬಾಕು ಪಡೆಯುವ ತಂತ್ರಜ್ಞಾನವಿದ್ದು, ರೈತರು ಸಂಶೋಧನಾ ಕೇಂದ್ರ ನೀಡುವ ಮಾಹಿತಿ ಅನುಸರಿಸಬೇಕು. ಹೀಗಾಗಿ ಉತ್ಪಾದನಾ ವೆಚ್ಚ ತಗ್ಗಿಸಿ ಅಧಿಕ ಲಾಭ ಸಿಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಐಟಿಸಿ ಲೀಫ್ ಮ್ಯಾನೇಜರ್ ಸುಜಿತ್, ಕ್ಷೇತ್ರ ಪಾಲಕ ಸವಿನಯ್, ರೈತ ಮುಖಂಡರಾದ ಕೆ.ಎಸ್.ಆನಂದ್, ಲೋಕೇಶ್, ಮಹೇಶ್, ಮೋಟೇಗೌಡ ಮಾತನಾಡಿದರು. ರೈತರಾದ ರೇವಣ್ಣ, ತಿಮ್ಮೇಗೌಡ, ಶಿವಸ್ವಾಮಿ, ಮಾದೇಗೌಡ, ಕೃಷ್ಣ, ಅಯ್ಯ, ರಾಜೇಗೌಡ, ಕರೀಗೌಡ, ಕಾಳಮ್ಮ ಸೇರಿದಂತೆ ಇತರರಿದ್ದರು.

ಸಮೃದ್ಧಿ ಗೆಳೆಯರ ಬಳಗದಿಂದ ಬಸವ ಜಯಂತಿ

ನಂಜನಗೂಡು, ಮೇ 11– ನಗರದ ವಿಶ್ವಗುರು ಬಸವೇಶ್ವರ ವೃತ್ತದಲ್ಲಿ ಸಮೃದ್ಧಿ ಗೆಳೆಯರ ಬಳಗದಿಂದ ಮಹಾ ಮಾನವತಾವಾದಿ ಬಸವಣ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಬಸವ ಜಯಂತಿ ಆಚರಿಸಲಾಯಿತು.

ಬಸವಣ್ಣನವರ ವಿಶ್ವಮಾನವ ಸಂದೇಶ "ಇವನಾರವ ಇವನಾರವ ಎನ್ನದಿರಯ್ಯ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ" ಎನ್ನುವ ಗೀತೆಯನ್ನು ಸಾಮೂಹಿಕವಾಗಿ ಹಾಡುವ ಮೂಲಕ ಜಯಂತಿಗೆ ಚಾಲನೆ ನೀಡಲಾಯಿತು.

ಬಸವ ಕಲ್ಯಾಣದ ಸುಗುಣ ಮಾತಾಜಿ ಮಾತನಾಡಿ, ಶರಣರ ವಚನಗಳಲ್ಲಿ ನಮ್ಮ ಬದುಕಿಗೆ ಬೇಕಾದ ಎಲ್ಲಾ ಸಂದೇಶಗಳಿವೆ. ಬಸವಣ್ಣ ಸರ್ವಕಾಲಕ್ಕೂ ಸಲ್ಲುವ ಮಹಾ ಮಾನವತಾವಾದಿ. ಸಮಾಜದಲ್ಲಿದ್ದ ತಾರತಮ್ಯಗಳನ್ನು ಹೋಗಲಾಡಿಸಿ ಭೋಗಕ್ಕೆ ಸೀಮಿತವಾಗಿದ್ದ ಮಹಿಳೆಯರನ್ನು ಪುರುಷರ ಸರಿಸಮನಾಗಿ ಕಾಣುವ ಮೂಲಕ ಸ್ತ್ರೀ ಸ್ವಾತಂತ್ರ್ಯ ಎತ್ತಿ ಹಿಡಿದು ಮಹಿಳಾ ಆತ್ಮಗೌರವ ರಕ್ಷಣೆಯ ಪ್ರತೀಕವಾದ ಹಾಗೂ ಪ್ರತಿಯೊಬ್ಬರೂ ದುಡಿದು ಉಣ್ಣಬೇಕೆಂಬ ಕಾಯಕ ದಾಸೋಹದ ಪರಿಕಲ್ಪನೆಯನ್ನು ಜಗತ್ತಿಗೆ ನೀಡಿದರು. ಅಲ್ಲದೇ ಕಾಯಕದಲ್ಲಿ ಹಿರಿದು ಕಿರಿದು ಎನ್ನುವುದಿಲ್ಲ ಎಲ್ಲರ ಸತ್ಯ ಶುದ್ಧ ಕಾಯಕವನ್ನು ಗೌರವಿಸಬೇಕು ಎಂದ ಅವರು ಹುಟ್ಟಿನಿಂದ ಯಾರು ಶ್ರೇಷ್ಠರಲ್ಲ ನಡೆ ನುಡಿಯಿಂದ ಮಾತ್ರ ಶ್ರೇಷ್ಠನಾಗಲು ಸಾಧ್ಯ. ಎನ್ನುವುದಕ್ಕೆ ದೇಶದ ವಿವಿಧ ಮೂಲೆಗಳಿಂದ ಕಲ್ಯಾಣಕ್ಕೆ ಬಂದು ವಿವಿಧ ಕಾಯಕದಲ್ಲಿ ತೊಡಗಿಸಿಕೊಂಡ ನೂರಾರು ಶರಣರೇ ಸಾಕ್ಷಿ. ಹಾಗಾಗಿ ಬಸವ ಧರ್ಮದಲ್ಲಿ ಹುಟ್ಟಿದ ನಾವೇ ಧನ್ಯರು. ಮನಶುದ್ಧಿಗಾಗಿ ಶಿವಯೋಗ ತನು ಶುದ್ಧಿಗಾಗಿ ಕಾಯಕ ಪ್ರತಿಯೊಬ್ಬರೂ ಮಾಡಬೇಕು. ಪ್ರತಿಯೊಬ್ಬರು ವಚನಗಳನ್ನು ಅಧ್ಯಯನ ಮಾಡಿದಾಗ ಪರಿಶುದ್ಧ ಹಾಗೂ ಸಾರ್ಥಕ ಜೀವನ ನಡೆಸಬಹುದು ಎಂದರು.



ಕಾರ್ಯಕ್ರಮದಲ್ಲಿ ಸಮೃದ್ಧಿ ಗೆಳೆಯರ ಬಳಗದ ನಟರಾಜು, ಕಾರ್ಯದರ್ಶಿ ಸುರೇಶ್, ಕುರುಬರಹುಂಡಿ ಸಂಚಾಲಕ ರಾಜಶೇಖರ್, ಬಸವ ಬಳಗದ ಅಧ್ಯಕ್ಷ ಸೋಮಣ್ಣ ನಾಗೇಂದ್ರ ನಂದಿನಿ, ಡಾ.ಮಹೇಶ್, ಬಾಂಧವ್ಯ ಬಳಗದ ಅಧ್ಯಕ್ಷ ಶಾಂತಮಲ್ಲಪ್ಪ ಗುರುಮಲ್ಲಪ್ಪ ರಾಚಪ್ಪಾಜಿ, ಮಹದೇವಪ್ಪ, ವೀರಶೈವ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ. ಬಸವಣ್ಣ, ಪ್ರಭುಸ್ವಾಮಿ, ಮಹದೇವಪ್ಪ ತ್ಯಾಗಿ, ಪ್ರತಿಧ್ವನಿ ವೇದಿಕೆ ಅಧ್ಯಕ್ಷ ತ್ರಿನೇಶ್, ಲೋಕೇಶ್, ಪಿಡಿಓ ಚಿನ್ನಬುದ್ಧಿ, ಮಹದೇಶ್ವರ ಬಳಗದ ಪುಟ್ಟಬುದ್ಧಿ ಇನ್ನಿತರರಿದ್ದರು.

PUBLIC NOTICE

Notice is given to the general public at large that my client is negotiating and intending to purchase the schedule properties from its present owner **Mrs. Shailaja Prasad** Wife of K.C.T. Prasad resident of # 1581, 7th cross, 6th Main, 2nd Stage, Vijayanagara, Mysuru. Any individuals, banks, financial institutions, agreement holders etc having any objections for my client entering into any transaction with respect to the schedule property is hereby required to communicate their objections in writing to my office with documentary evidence within 07 days from the date of this publication. In the absence of any authenticated objections/claims, my client will proceed to complete the transaction of sale and no claim in this regard will be entertained thereafter.

SCHEDULE OF THE PROPERTY.

ITEM NO.1: All that piece and parcel of the alienated and undeveloped land property bearing Sy.No. 31/6 measuring one (1) acre situated at Madaragalli Village, Varuna Hobli, Mysuru Taluk, Mysuru bounded on the East By: Mysuru Nanjangud Road, West By: Property bearing Sy. No. 31/5, North By: Private Property, South By: K.C. Vijaykumar's Property.

ITEM NO.2: All that piece and parcel of the alienated and undeveloped land property bearing Sy.No. 31/4 measuring 27 guntas situated at Madaragalli Village, Varuna Hobli, Mysuru Taluk, Mysuru bounded on the East By: Property bearing Sy.No. 31/5, West By: Sy.No. 21, North By: Private Property, South By: K.C. Vijaykumar's Property.

Sd/- **DINESH SOLANKI,** B.Com, LLM
Advocate, KAR E.No.1822/2007
#1197, 12/2, KRB Road,
Chamarajapuram, Mysuru-570 005
Ph: 9343430011
Email: advdineshsolanki@gmail.com
Date: 11.05.2024

ಮೈಸೂರು ಮಿತ್ರ 45

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು